# ಜನತಾವಾಣಿ

ಸಂಪಾದಕರು : ವಿಕಾಸ್ ಷಡಾಕ್ಷರಪ್ಪ ಮೆಳ್ಳೇಕಟ್ಟೆ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

ದಾವಣಗೆರೆ, ಚಿತ್ರದುರ್ಗ, ಹಾವೇರಿ, ಶಿವಮೊಗ್ಗ, ವಿಜಯನಗರ ಜಿಲ್ಲೆಗಳಲ್ಲಿ ಪ್ರಸಾರ ಹೊಂದಿರುವ ಪ್ರಾದೇಶಿಕ ಪತ್ರಿಕೆ

ದಾವಣಗೆರೆ
ಶುಕ್ರವಾರ, ಆಗಸ್ಟ್ 12, 2022

ಸಂಪುಟ : 49 ಸಂಚಿಕೆ : 90 ☎ 254736 91642 99999 RNI No: 27369/75 KA/SK/CTA-275/2021-2023. O/P @ B.V. Nagar P.O. ಪುಟ : 6 ರೂ : 5.00 www.janathavani.com janathavani@mac.com




## ಅಮೃತ ಮಹೋತ್ಸವ

## ಬಿಜೆಪಿಯಿಂದ ಬೃಹತ್ ಬೈಕ್ ರ್‍ಯಾಲಿ

ದಾವಣಗೆರೆ, ಆ. 11- 75ನೇ ವರ್ಷದ ಸ್ವಾತಂತ್ರ್ಯ ಅಮೃತ ಮಹೋತ್ಸವದ ಹಿನ್ನೆಲೆಯಲ್ಲಿ ಬಿಜೆಪಿ ಜಿಲ್ಲಾ ಯುವ ಮೋರ್ಚಾ ವತಿಯಿಂದ ನಗರದ ಪ್ರಮುಖ ರಸ್ತೆಗಳಲ್ಲಿ ಬೈಕ್ ರ್‍ಯಾಲಿ ನಡೆಯಿತು.

ಬೇತೂರು ರಸ್ತೆಯ ವೆಂಕಟೇಶ್ವರ ವೃತ್ತದಲ್ಲಿ ಬಿಜೆಪಿ ಜಿಲ್ಲಾಧ್ಯಕ್ಷ ಎಸ್.ಎಂ. ವೀರೇಶ್ ಹನಗವಾಡಿ ರ್‍ಯಾಲಿಗೆ ಚಾಲನೆ ನೀಡಿದರು. ಭಾರತದ ತ್ರಿವರ್ಣ ಧ್ವಜದೊಂದಿಗೆ ನಡೆದ ರ್‍ಯಾಲಿ ಬಂಬೂಬಜಾರ್, ಗಣೇಶ ಹೋಟೆಲ್ ವೃತ್ತ, ಎಪಿಎಂಸಿ, ಸಾರಿಗೆ ಬಸ್ ನಿಲ್ದಾಣ, ಮಹಾತ್ಮಗಾಂಧಿ ವೃತ್ತ, ಎ.ವಿ.ಕೆ. ಕಾಲೇಜು ರಸ್ತೆ, ವಾಸನ ಐ ಕೇರ್, ಗುಂಡಿ ಮಹಾದೇವಪ್ಪ ವೃತ್ತ, ವಿದ್ಯಾನಗರ ಮುಖ್ಯ ರಸ್ತೆ, ನೂತನ ಕಾಲೇಜು ರಸ್ತೆ, ಬಿಐಇಟಿ, ಬಾಪೂಜಿ ಹೈಸ್ಕೂಲ್, ಲಕ್ಷ್ಮೀಫ್ಲೋರ್ ಮಿಲ್ ಮೂಲಕ ಅಮರ್ ಜವಾನ್ ಉದ್ಯಾನವನದಲ್ಲಿ ಕೊನೆಗೊಂಡಿತು.

ಈ ಸಂದರ್ಭದಲ್ಲಿ ಮಾತನಾಡಿದ ವೀರೇಶ್ ಹನಗವಾಡಿ, ಅಮೃತ ಮಹೋತ್ಸವದ ಸಂಭ್ರಮಾಚರಣೆ ಹಿನ್ನೆಲೆಯಲ್ಲಿ ರ್‍ಯಾಲಿ ಹಮ್ಮಿಕೊಂಡಿದ್ದು, ಸಾಕಷ್ಟು ಸಂಖ್ಯೆಯಲ್ಲಿ ಕಾರ್ಯಕರ್ತರು ಆಗಮಿಸಿ ಯಶಸ್ವಿಗೊಳಿಸಿದ್ದಾಗಿ (3ನೇ ಪುಟಕ್ಕೆ)

# ಎ.ಸಿ.ಬಿ. ರದ್ದು

## ಬಾಕಿ ಪ್ರಕರಣಗಳನ್ನು ಲೋಕಾಯುಕ್ತಕ್ಕೆ ವರ್ಗಾಯಿಸಲು ಹೈ ಕೋರ್ಟ್ ಸೂಚನೆ

ಬೆಂಗಳೂರು, ಆ. 11 - ಸಿದ್ದರಾಮಯ್ಯ ಸರ್ಕಾರ ಹುಟ್ಟುಹಾಕಿದ್ದ ಕರ್ನಾಟಕ ಭ್ರಷ್ಟಾಚಾರ ನಿಗ್ರಹ ದಳವನ್ನು (ಎಸಿಬಿ) ಕರ್ನಾಟಕ ಹೈಕೋರ್ಟ್ ರದ್ದುಪಡಿಸಿದೆ. ಅಲ್ಲದೇ ಎಸಿಬಿಯಲ್ಲಿ ಬಾಕಿ ಉಳಿದಿರುವ ಎಲ್ಲಾ ಪ್ರಕರಣಗಳನ್ನು ಕರ್ನಾಟಕ ಲೋಕಾಯುಕ್ತ ಪೊಲೀಸ್ ವಿಭಾಗಕ್ಕೆ ವರ್ಗಾಯಿಸಲು ಆದೇಶಿಸಿದೆ.

2016 ರಲ್ಲಿ ಲೋಕಾಯುಕ್ತ ಅಧಿಕಾರವನ್ನು ಮೊಟಕುಗೊಳಿಸಿ ಸಿದ್ದರಾಮಯ್ಯ ಸರ್ಕಾರ ಎಸಿಬಿ ರಚಿಸಿತ್ತು.

ಎಸಿಬಿಯ ರಚನೆಯನ್ನು ಪ್ರಶ್ನಿಸಿ ವಕೀಲ ಚಿದಾನಂದ ಅರಸ್, ಸಾಮಾಜಿಕ ಹೋರಾಟಗಾರ ಎಸ್.ಆರ್.ಹಿರೇಮಠ ಅವರ ಸಮಾಜ ಪರಿವರ್ತನಾ ಸಮುದಾಯ ಸಲ್ಲಿಸಿದ್ದ ಸಾರ್ವಜನಿಕ ಹಿತಾಸಕ್ತಿ ಅರ್ಜಿಗಳಿಗೆ ಸಂಬಂಧಿಸಿದಂತೆ ವಿಚಾರಣೆ ನಡೆಸಿ, ಈ ತೀರ್ಪು ನೀಡಲಾಗಿದೆ. ನ್ಯಾಯಮೂರ್ತಿಗಳಾದ ಬಿ ವೀರಪ್ಪ ಹಾಗೂ ಕೆ.ಎಸ್. ಹೇಮಲೇಖ ಅವರಿದ್ದ ವಿಭಾಗೀಯ ಪೀಠ ಈ ಆದೇಶ ಮಾಡಿದೆ.

ಕರ್ನಾಟಕ ಲೋಕಾಯುಕ್ತ ಕಾಯ್ದೆಗೆ ತಿದ್ದುಪಡಿ ಅಗತ್ಯವಿದೆ. ಮೂರು ವರ್ಷದ ಅವಧಿಗೆ ಅಧಿಕಾರಿಗಳ ನೇಮಕವಾಗಬೇಕು. ಲೋಕಾಯುಕ್ತರ ನೇಮಕ ವೇಳೆ ಅರ್ಹತೆ ಪರಿಗಣಿಸಬೇಕು. ಜಾತಿ ಆಧರಿಸಿ ಲೋಕಾಯುಕ್ತ, ಉಪಲೋಕಾಯುಕ್ತ ನೇಮಕವಾಗಬಾರದು ಎಂದು ನ್ಯಾಯಾಲಯ ಹೇಳಿದೆ.


ಎಸಿಬಿಯಲ್ಲಿದ್ದ ಪ್ರಕರಣಗಳನ್ನು ಲೋಕಾಯುಕ್ತ ಪೊಲೀಸರೇ ತನಿಖೆ ಮುಂದುವರೆಸಬೇಕು ಎಂದಿರುವ ಹೈಕೋರ್ಟ್, ಈ ಹಿಂದೆ ಸರ್ಕಾರ ನೀಡಿದ ಆದೇಶವನ್ನು ರದ್ದುಪಡಿಸಿದೆ.

ಲೋಕಾಯುಕ್ತ ಪೊಲೀಸ್ ಠಾಣೆ ಸ್ಥಾನಮಾನ ಮರು ಸ್ಥಾಪಿಸಿದೆ. ಎಲ್ಲಾ ಪ್ರಕರಣಗಳೂ ಲೋಕಾಯುಕ್ತ ಪೊಲೀಸರಿಗೆ ವರ್ಗಾವಣೆ ಮಾಡಿ ಎಂದಿದೆ.

**ಸಂತೋಷ್ ಹೆಗ್ಡೆ ಸ್ವಾಗತ :** ಎಸಿಬಿ ರದ್ದುಗೊಳಿಸುವ ಹೈಕೋರ್ಟ್ ಆದೇಶ ನನಗೆ ಬಹಳ ಸಂತೋಷ ತಂದಿದೆ. ಇದು ಉತ್ತಮವಾದ ನಿರ್ಧಾರ ಎಂದು ನಿವೃತ್ತ ನ್ಯಾಯಮೂರ್ತಿ ಸಂತೋಷ ಹೆಗ್ಡೆ ಅವರು ತಿಳಿಸಿದ್ದಾರೆ. ಆದರೆ, ಲೋಕಾಯುಕ್ತಕ್ಕೆ ಅಧಿಕಾರವನ್ನು ನೀಡಬೇಕು. ಜೊತೆಗೆ ಉತ್ತಮ ಅಧಿಕಾರಿಗಳನ್ನು ಕೂಡ ನೇಮಿಸಬೇಕು. ಅಧಿಕಾರಿಗಳ ನೇಮಕದಲ್ಲೂ ಕೂಡ ಸರ್ಕಾರ ತಮಗೆ ಬೇಕಾದ ಅಧಿಕಾರಿಗಳನ್ನು ನೇಮಕ ಮಾಡಬಾರದು. ಲೋಕಾಯುಕ್ತರೇ ತಮಗೆ ಬೇಕಾದ ಅಧಿಕಾರಿಗಳನ್ನು ನೇಮಕ ಮಾಡಿಕೊಳ್ಳಬೇಕು ಎಂದವರು ಹೇಳಿದ್ದಾರೆ.

**ಬೇರೆ ರಾಜ್ಯಗಳಲ್ಲೂ ಎಸಿಬಿ ಇದೆ :** ಲೋಕಾಯುಕ್ತ ಪ್ರಬಲಗೊಳಿಸಬೇಕೆಂಬ ಕೋರ್ಟ್ ಹೇಳಿಕೆಗೆ ನಾವು ಗೌರವಿಸಬೇಕು. ಆದರೆ, ಬೇರೆ ರಾಜ್ಯಗಳಲ್ಲೂ ಎಸಿಬಿ ಇದೆ ಎಂದು ಕೆಪಿಸಿಸಿ ಅಧ್ಯಕ್ಷ ಡಿ.ಕೆ. (2ನೇ ಪುಟಕ್ಕೆ)

## 14ನೇ ಉಪರಾಷ್ಟ್ರಪತಿಯಾಗಿ ಧನಕರ್ ಪ್ರಮಾಣ ವಚನ



ನವದೆಹಲಿ, ಆ. 11 - ಜಗದೀಪ್ ಧನಕರ್ ಅವರು ದೇಶದ 14ನೇ ಉಪರಾಷ್ಟ್ರಪತಿಯಾಗಿ ಗುರುವಾರ ಅಧಿಕಾರ ಸ್ವೀಕರಿಸಿದ್ದಾರೆ. ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು ರಾಷ್ಟ್ರಪತಿ ಭವನದಲ್ಲಿ ಧನಕರ್‌ಗೆ ಪ್ರಮಾಣ ವಚನ ಬೋಧಿಸಿದ್ದಾರೆ.

ಪ್ರಮಾಣ ವಚನ ಸ್ವೀಕರಿಸುವುದಕ್ಕೆ ಮುಂಚೆ, ಧನಕರ್ ಅವರು ಆಯ್ಕೆಯಾದ ಬಗ್ಗೆ ಚುನಾವಣಾ ಆಯೋಗ ಪ್ರಮಾಣ ಪತ್ರವನ್ನು ನೀಡಿತು. ಉಪರಾಷ್ಟ್ರಪತಿ ಚುನಾವಣೆ ಯಲ್ಲಿ ಧನಕರ್ 528 ಮತಗಳನ್ನು ಪಡೆದಿದ್ದರು. ಅವರ ಎದುರಾಳಿ ಮಾರ್ಗರೆಟ್ ಆಳ್ವ 182 ಮತ ಗಳಿಸಿದ್ದರು.

## ಜಿಲ್ಲಾಸ್ಪತ್ರೆಗೆ ಎಂ.ಆರ್.ಐ. ಸ್ಕ್ಯಾನಿಂಗ್ ಮಷಿನ್

ದಾವಣಗೆರೆ, ಆ. 11- ನಗರದ ಜಿಲ್ಲಾ ಚಿಗಟೇರಿ ಆಸ್ಪತ್ರೆಗೆ 15 ಕೋಟಿ ರೂ. ಮೊತ್ತ ಎಂ.ಆರ್.ಐ. ಸ್ಕ್ಯಾನಿಂಗ್ ಮಿಷನ್ ಮಂಜೂರಾಗಿದ್ದು, ಅತಿ ಶೀಘ್ರದಲ್ಲಿಯೇ ಬಡ ರೋಗಿಗಳಿಗೆ ಚಿಕಿತ್ಸೆ ಲಭ್ಯವಾಗಲಿದೆ ಎಂದು ಸಂಸದ ಜಿ.ಎಂ. ಸಿದ್ದೇಶ್ವರ ತಿಳಿಸಿದ್ದಾರೆ.

ಸರ್ಕಾರಿ ಜಿಲ್ಲಾಸ್ಪತ್ರೆ ಒಂದು ಸಾವಿರ ಹಾಸಿಗೆಗಳ ಆಸ್ಪತ್ರೆಯಾಗಿದ್ದು ದಾವಣಗೆರೆ, ಹಾವೇರಿ, ಚಿತ್ರದುರ್ಗ ಜಿಲ್ಲೆಗಳ ಸಾಕಷ್ಟು ಜನರು ಚಿಕಿತ್ಸೆಗಾಗಿ ಈ ಆಸ್ಪತ್ರೆಯನ್ನೇ ಅವಲಂಬಿಸಿದ್ದಾರೆ. ರೋಗಿಗಳು ಎಂ.ಆರ್.ಐ. ಸ್ಕ್ಯಾನಿಂಗ್ ಸೌಲಭ್ಯವಿಲ್ಲದೇ ಸಾಕಷ್ಟು ಅನಾನುಕೂಲ ಅನುಭವಿಸುತ್ತಿದ್ದರು. ಇದನ್ನು ಮನಗಂಡು ಸಂಸದ ಜಿ.ಎಂ.ಸಿದ್ದೇಶ್ವರ ಅವರು, ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹಾಗೂ ಆರೋಗ್ಯ ಸಚಿವ ಡಾ.ಸುಧಾಕರ್ ಅವರನ್ನು ಖುದ್ದು ಭೇಟಿ ಮಾಡಿ ಮನವಿ ಮಾಡಿಕೊಂಡಿದ್ದರು. ಇದರ ಪರಿಣಾಮವಾಗಿ ಇದೀಗ ಸ್ಕ್ಯಾನಿಂಗ್ ಮಿಷನ್ ಲಭ್ಯವಾಗಲಿದೆ. ಮುಖ್ಯಮಂತ್ರಿ ಹಾಗೂ ಆರೋಗ್ಯ ಸಚಿವರನ್ನು ಸಿದ್ದೇಶ್ವರ್ ಅಭಿನಂದಿಸಿದ್ದಾರೆ.

# ಜನಸಾಮಾನ್ಯರ ಮನಸ್ಸನ್ನು ಸೆಳೆಯುವ ಅಂಶ ಇರುವುದು ಕಲೆಗೆ ಮಾತ್ರ



## ಗುರುಶಾಂತರಾಜ ದೇಶಿಕೇಂದ್ರ ಸ್ವಾಮೀಜಿಯವರ 84ನೇ ಶ್ರದ್ಧಾಂಜಲಿ ಹಾಗೂ ವೀರಗಾಸೆ ಕಾರ್ಯಾಗಾರದ ಸಮಾರೋಪ ಸಮಾರಂಭದಲ್ಲಿ ತರಳಬಾಳು ಶ್ರೀ

ಸಿರಿಗೆರೆ, ಆ. 11- ವೀರಗಾಸೆ ಕಲಾವಿದರು ಹೆಚ್ಚಾಗಿ ಓದಿಲ್ಲ ಆದರೆ ಅವರು ವೀರಗಾಸೆ ಪ್ರದರ್ಶನ ಮಾಡುವಾಗ ಅವರಲ್ಲಿ, ಲವಲವಿಕೆ, ನಿಖರತೆ ಹಾಗೂ ಶಬ್ದಗಳ ಉಚ್ಚಾರಣೆಯಲ್ಲಿ ಒಂದು ಭಾವ ಇತ್ತು. ಇಂತಹ ಕಲಾವಿದರು ತಮ್ಮ ಅಭಿವ್ಯಕ್ತಿಯನ್ನು ಗ್ರಾಮೀಣ ಭಾಗದಲ್ಲಿ ಪ್ರದರ್ಶಿಸುತ್ತಿರುವುದು ಸಂತೋಷ ತಂದಿದೆ ಎಂದು ತರಳಬಾಳು ಜಗದ್ಗುರು ಡಾ. ಶಿವಮೂರ್ತಿ ಶಿವಾಚಾರ್ಯ ಮಹಾಸ್ವಾಮಿಗಳವರು ನುಡಿದರು.

ಇಲ್ಲಿಯ ಗುರುಶಾಂತೇಶ್ವರ ದಾಸೋಹ ಮಂಟಪದಲ್ಲಿ ಕರ್ನಾಟಕ ಜಾನಪದ ಅಕಾಡೆಮಿ ಹಾಗೂ ಅಣ್ಣನ ಬಳಗದವರು ಏರ್ಪಡಿಸಿದ್ದ ಗುರುಶಾಂತ ರಾಜ ದೇಶಿಕೇಂದ್ರ ಸ್ವಾಮೀಜಿಯವರ 84ನೇ ಶ್ರದ್ಧಾಂಜಲಿ ಹಾಗೂ ವೀರಗಾಸೆ ಕಾರ್ಯಾಗಾರದ ಸಮಾರೋಪ ಸಮಾರಂಭದಲ್ಲಿ ಸ್ವಾಮೀಜಿಯವರ ಭಾವಚಿತ್ರಕ್ಕೆ ಪುಷ್ಪ ಅರ್ಪಿಸಿ ಅವರು ಮಾತನಾಡಿದರು.

ಅವರು ಕಲಿತಿದ್ದನ್ನು ಯಾಂತ್ರಿಕವಾಗಿ ಹೇಳಲಿಲ್ಲ, ವೀರಾವೇಷದಿಂದ ಹೃದಯತುಂಬಿ ಅಭಿನಯಿಸಿದರು. ಅವರ ಅಭಿನಯದಲ್ಲಿ ಮಾರುಹೋದಂತಹ ಬಸವರಾಜ ನೆಲ್ಲಿಸರ ಅವರು ವೇದಿಕೆ ಮೇಲೆ ಅತಿಥಿಯಾಗಿ ಕುಳಿತಿದ್ದರೂ ಸಹ ಆ ವೀರಗಾಸೆ ಕಲೆ ಅವರನ್ನು ಕುಣಿದು ಕುಪ್ಪಳಿಸುವಂತೆ ಮಾಡಿದ್ದು ಬಹಳ ಸಂತೋಷವಾಯಿತು. ಕಲೆಗೆ ವಿಶೇಷ ಆಕರ್ಷಣೆ ಇದೆ ಹಾಗೂ ಮನುಷ್ಯನ ಮನಸ್ಸನ್ನು ಸೆಳೆಯುವಂತಹ ಅಂಶ ಇರುವುದು ಕಲೆಗೆ ಮಾತ್ರ.

ವೀರಗಾಸೆಯಲ್ಲಿ ನಮ್ಮ ಮಠದ ಮೂಲಪುರುಷರಾದ ವಿಶ್ವಬಂಧು ಮರುಳಸಿದ್ಧ ಅವರ ಜೀವನ ಸಂದೇಶವನ್ನು ಉಪನ್ಯಾಸ ಮಾಡುವುದರ ಜೊತೆಗೆ ವಿವಿಧ ಕಲಾವಿದರ ಜೊತೆಗೆ ಅಭಿನಯದೊಂದಿಗೆ ಜಾನಪದ ಸೊಗಡನ್ನು (2ನೇ ಪುಟಕ್ಕೆ)

# ಪಂಚಮಸಾಲಿ ಸಮಾಜಕ್ಕೆ 2ಎ

## ಸರ್ಕಾರದ ಗಮನ ಸೆಳೆಯಲು ಪ್ರಯತ್ನ: ಜಿ.ಕರುಣಾಕರ ರೆಡ್ಡಿ



ಹರಪನಹಳ್ಳಿ, ಆ.11- ವೀರಶೈವ ಲಿಂಗಾಯತ ಪಂಚಮಸಾಲಿ ಸಮಾಜಕ್ಕೆ 2ಎ ಮೀಸಲಾತಿಗಾಗಿ ಮುಂದಿನ ಅಧಿವೇಶನದಲ್ಲಿ ಸರ್ಕಾರದ ಗಮನ ಸೆಳೆಯುವುದಾಗಿ ಶಾಸಕ ಜಿ.ಕರುಣಾಕರ ರೆಡ್ಡಿ ಹೇಳಿದರು

ಪಟ್ಟಣದ ನಟರಾಜ ಕಲಾಭವನದಲ್ಲಿ ವೀರಶೈವ ಪಂಚಮಸಾಲಿ ಸಮುದಾಯ ಭವನದ ಅಡಿಗಲ್ಲು ಸಮಾರಂಭ ಹಾಗೂ ಪ್ರತಿಭಾ ಪುರಸ್ಕಾರ ಸಮಾರಂಭದಲ್ಲಿ ಭಾಗವಹಿಸಿ ಅವರು ಮಾತನಾಡಿದರು.

ಯಡಿಯೂರಪ್ಪನವರ ಸರ್ಕಾರದ ಅವಧಿಯಲ್ಲಿ ಲಿಂಗಾಯತ ಪಂಚಮಸಾಲಿ ಸಮುದಾಯಕ್ಕೆ 3ಬಿ ಕೊಡಿಸಲು ಪ್ರಯತ್ನಿಸಿ ಅದನ್ನು ಈಗಾಗಲೇ ಜಾರಿಗೊಳಿಸಲಾಗಿದೆ. ಇದೀಗ 2ಎ ಮೀಸಲಾತಿಗೆ ಆಗ್ರಹಿಸಿ ಅನೇಕ ಹೋರಾಟಗಳನ್ನು ನಡೆಸುತ್ತಾ ಬಂದಿದ್ದು, ಶೀಘ್ರದಲ್ಲಿ ಈ ಬಗ್ಗೆ ಸರ್ಕಾರ ಸೂಕ್ತ ಕ್ರಮವಹಿಸಲಿದೆ. ದೇಶದ ಜನಸಂಖ್ಯೆ ದಿನದಿಂದ ದಿನಕ್ಕೆ ಹೆಚ್ಚುತ್ತಿದ್ದು, ತಂತ್ರಜ್ಞಾನ ಸಹ ಬೆಳೆಯುತ್ತಿದೆ ಇದಕ್ಕೆ ಪೂರಕವಾಗಿ ವಿದ್ಯಾರ್ಥಿಗಳು ಸಹ ಸ್ಪರ್ಧಾತ್ಮಕವಾಗಿ ಬೆಳೆಯಬೇಕಾಗಿದ್ದು, ಹೆಚ್ಚಿನ ಶ್ರಮವಹಿಸಿ ಉತ್ತಮ ವಿದ್ಯಾಭ್ಯಾಸ ಮಾಡಿ, ಭವಿಷ್ಯ ರೂಪಿಸಿಕೊಳ್ಳಬೇಕು ಎಂದರು.

ವೀರಶೈವ ಲಿಂಗಾಯತ ಪಂಚಮಸಾಲಿ ಸಮಾಜದ ಮಾಜಿ ರಾಜ್ಯಾಧ್ಯಕ್ಷ ಬಸವರಾಜ ದಿಂಡೂರು ಮಾತನಾಡಿ, ಪಂಚಮಸಾಲಿ ಸಮುದಾಯ 1994ರಿಂದ ಇಲ್ಲಿಯವರೆಗೂ ಸಂಘಟನೆ ಮೂಲಕ ಬಲಿಷ್ಠಗೊಳ್ಳುತ್ತಿದೆ. ಇಂದು ರಾಜ್ಯದ ಅನೇಕ ಕಡೆಗಳಲ್ಲಿ ಸಮುದಾಯ ಭವನಗಳು ನಿರ್ಮಾಣಗೊಂಡಿವೆ. ಕೆಲವು (2ನೇ ಪುಟಕ್ಕೆ)

## 2ಎ ಮೀಸಲಾತಿಗೆ ಕಾನೂನಾತ್ಮಕ ಹೋರಾಟ

ದಾವಣಗೆರೆ, ಆ. 11- ಪಂಚಮಸಾಲಿ ಸಮಾಜಕ್ಕೆ 2 ಎ ಮೀಸಲಾತಿ ನೀಡಬೇಕೆಂದು ಆಗ್ರಹಿಸಿ, ಸುಮಾರು 800 ಪುಟಗಳ ದಾಖಲಾತಿಯನ್ನು ಸರ್ಕಾರಕ್ಕೆ ಸಲ್ಲಿಸಲಾಗಿದೆ. ರಾಜ್ಯದ ಎಲ್ಲಾ ಜಿಲ್ಲೆಗಳಲ್ಲೂ ಸಮಾಜದ ಸ್ಥಿತಿಗತಿ ಬಗ್ಗೆ ವರದಿ ಸಿದ್ಧಪಡಿಸಿ, ರಾಜ್ಯ ಸರ್ಕಾರದ ಶಿಫಾರಸ್ಸು ಮಾಡಿದ ನಂತರ ಕೇಂದ್ರ ಸರ್ಕಾರಕ್ಕೆ ಕಳುಹಿಸಿಕೊಡಲಾಗುತ್ತದೆ. ವಿಳಂಬವಾದರೆ ಕಾನೂನಾತ್ಮಕ ಹೋರಾಟ ಮಾಡುವುದಾಗಿ ಪಂಚಮಸಾಲಿ ಸಮಾಜದ ಜಿಲ್ಲಾಧ್ಯಕ್ಷ ಬಿ.ಸಿ. ಉಮಾಪತಿ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ಈಗಾಗಲೇ ಹಿಂದುಳಿದ ವರ್ಗಗಳ ಜಾತಿ ಪಟ್ಟಿಗೆ (ಓಬಿಸಿ) ಸೇರ್ಪಡೆಯಾಗುವ ಸಾಧ್ಯತೆ ಇದೆ. ಕೇಂದ್ರದ ಹಿಂದುಳಿದ ವರ್ಗಗಳ ಪಟ್ಟಿಯಲ್ಲಿ ಸೇರ್ಪಡೆ ಮಾಡುವಂತೆ ಅಟಲ್ ಬಿಹಾರಿ ವಾಜಪೇಯಿ ಅವರು ಪ್ರಧಾನಿಯಾಗಿದ್ದಾಗಲೇ ಮನವಿ ಸಲ್ಲಿಸಲಾಗಿತ್ತು. (2ನೇ ಪುಟಕ್ಕೆ)



ಪಂಚಮಸಾಲಿ ಸಮಾಜ ಶೀಘ್ರದಲ್ಲೇ ಹಿಂದುಳಿದ ವರ್ಗಗಳ ಪಟ್ಟಿಗೆ ಸೇರ್ಪಡೆಯಾಗಲಿದೆ.

- ಬಿ.ಸಿ. ಉಮಾಪತಿ
ಅಧ್ಯಕ್ಷರು, ದಾವಣಗೆರೆ ಜಿಲ್ಲಾ ಪಂಚಮಸಾಲಿ ಸಮಾಜ

## ಅ.1ರಿಂದ ಆದಾಯ ತೆರಿಗೆ ಪಾವತಿದಾರರಿಗೆ ಎ.ಪಿ.ವೈ. ಇಲ್ಲ

ನವದೆಹಲಿ, ಆ. 11 - ಆದಾಯ ತೆರಿಗೆ ಪಾವತಿಸುವವರು ಬರುವ ಅಕ್ಟೋಬರ್ 1ರಿಂದ ಅಟಲ್ ಪಿಂಚಣಿ (ಎ.ಪಿ.ವೈ.) ಯೋಜನೆಗೆ ಸೇರ್ಪಡೆಯಾಗಲು ಸಾಧ್ಯವಾಗುವುದಿಲ್ಲ ಎಂದು ಕೇಂದ್ರ ಸರ್ಕಾರ ಆದೇಶ ಹೊರಡಿಸಿದೆ.

ಜೂನ್ 1, 2015ರಲ್ಲಿ ಕೇಂದ್ರ ಸರ್ಕಾರ ಎ.ಪಿ.ವೈ. ಯೋಜನೆ ಆರಂಭಿಸಿತ್ತು. ಈ ಯೋಜನೆಗೆ ಸೇರ್ಪಡೆಯಾದವರು 60 ವರ್ಷ ತುಂಬಿದ ನಂತರ 1ರಿಂದ ಐದು ಸಾವಿರ ರೂ.ಗಳ ಪಿಂಚಣಿ ಪಡೆಯುತ್ತಾರೆ.

ಬರುವ ಅಕ್ಟೋಬರ್ 1ರಿಂದ ಆದಾಯ ತೆರಿಗೆ ಪಾವತಿಸಿದ ಹಾಗೂ ಪಾವತಿಸುತ್ತಿರುವ ಯಾರೂ ಎ.ಪಿ.ವೈ. ಯೋಜನೆಗೆ ಸೇರ್ಪಡೆಯಾಗಲು ಸಾಧ್ಯವಾಗುವುದಿಲ್ಲ. ಆದರೆ, ಅದಕ್ಕೂ ಮುಂಚೆ ಯೋಜನೆಗೆ ಸೇರ್ಪಡೆಯಾದವರಿಗೆ ನಿರ್ಬಂಧ ಅನ್ವಯವಾಗುವುದಿಲ್ಲ.

# ಬ್ಯಾಡ್ಮಿಂಟನ್ ಪಂದ್ಯಾವಳಿಗೆ ತೆರೆ; ಅಭಿಷೇಕ್, ಪ್ರೇರಣಗೆ ಗೆಲುವು



ದಾವಣಗೆರೆ, ಆ.11 - ನಗರದ ನೇತಾಜಿ ಸುಭಾಶ್ಚಂದ್ರ ಬೋಸ್ ಒಳಾಂಗಣ ಕ್ರೀಡಾಂಗಣದಲ್ಲಿ ಯೂನೆಕ್ಸ್ - ಸನ್‌ರೈಸ್ ಕರ್ನಾಟಕ ರಾಜ್ಯ ರ್‍ಯಾಂಕಿಂಗ್ ಬ್ಯಾಡ್ಮಿಂಟನ್ ಚಾಂಪಿಯನ್ ಶಿಪ್ ಪಂದ್ಯಾವಳಿ ಆಯೋಜಿಸಲಾಗಿತ್ತು. ಜಿಲ್ಲಾ ಬ್ಯಾಡ್ಮಿಂಟನ್ ಅಸೋಸಿಯೇಷನ್ ವತಿಯಿಂದ ಪಂದ್ಯಾವಳಿ ಆಯೋಜಿಸಲಾಗಿತ್ತು.

17 ವರ್ಷದೊಳಗಿನವರ ಬಾಲಕರ ವಿಭಾಗದಲ್ಲಿ ಕೆ.ಕೆ. ಅಭಿಷೇಕ್ ಮೊದಲ ಸ್ಥಾನದಲ್ಲಿದ್ದಾರೆ. 17 ವರ್ಷದೊಳಗಿನ ಬಾಲಕಿಯರ ವಿಭಾಗದಲ್ಲಿ ಪ್ರೇರಣ ಎನ್. ಶೇಟ್ ಪ್ರಥಮ ಸ್ಥಾನ ಪಡೆದಿದ್ದಾರೆ.

15 ವರ್ಷದೊಳಗಿನ ಬಾಲಕಿಯರ ವಿಭಾಗದಲ್ಲಿ ದಿಯಾ ಭೀಮಯ್ಯ, 15 ವರ್ಷದೊಳಗಿನ ಬಾಲಕರ ಡಬಲ್ಸ್ ವಿಭಾಗದಲ್ಲಿ ಡಿ.ಬಿ. ಮಯುಖ್ ಹಾಗೂ ಅಭಿನವ್ ಗಾರ್ಗ್ ಪ್ರಶಸ್ತಿ ಪಡೆದಿದ್ದಾರೆ.

15 ವರ್ಷದೊಳಗಿನ ಬಾಲಕಿಯರ ಡಬಲ್ಸ್ ವಿಭಾಗದಲ್ಲಿ ವೃದ್ಧಿ ಪೊನ್ನಮ್ಮ ಹಾಗೂ ಅದಿತಿ ದೀಪಕ್ ರಾಜ್ ಪ್ರಶಸ್ತಿ ಗಳಿಸಿದ್ದಾರೆ. 17 ವರ್ಷದೊಳಗಿನ ಮಿಕ್ಸಡ್ ಡಬಲ್ಸ್‌ನಲ್ಲಿ ಸಿದ್ದಾರ್ಥ್ ಗುಂಟೂರಿ ಹಾಗೂ ಎ.ಎಸ್. ಮೌನಿತ ಪ್ರಶಸ್ತಿ ಪಡೆದಿದ್ದಾರೆ. 15 ವರ್ಷದೊಳಗಿನ ಬಾಲಕರ ವಿಭಾಗದಲ್ಲಿ ಅಭಿನವ್ ಗಾರ್ಗ್ ಗೆದ್ದಿದ್ದಾರೆ.

17 ವರ್ಷದೊಳಗಿನ ಬಾಲಕರ ಡಬಲ್ಸ್ ವಿಭಾಗದಲ್ಲಿ ಕೆ.ಕೆ. ಅಭಿಷೇಕ್ ಹಾಗೂ ಎಂ.ಎ. ಲಕ್ಷ್ ಚೆಂಗಪ್ಪ ಪ್ರಶಸ್ತಿ ಪಡೆದಿದ್ದಾರೆ. 15 ವರ್ಷದೊಳಗಿನ ಮಿಕ್ಸಡ್ ಡಬಲ್ಸ್ ವಿಭಾಗದಲ್ಲಿ ಡಿ.ಬಿ. ಮಯುಖ್ ಹಾಗೂ ಜೇಡ್ ಅನಿಲ್ ಪ್ರಶಸ್ತಿ ಗಳಿಸಿದ್ದಾರೆ. 17 ವರ್ಷದೊಳಗಿನ ಬಾಲಕಿಯರ ಡಬಲ್ಸ್‌ನಲ್ಲಿ ಆರಾಧನಾ ಬಾಲಚಂದ್ರ ಹಾಗೂ ಪ್ರೇರಣ ಶೇಟ್ ಗೆಲುವು ಸಾಧಿಸಿದ್ದಾರೆ.

ಸಮಾರೋಪ ಸಮಾರಂಭದಲ್ಲಿ ಕರ್ನಾಟಕ ಬ್ಯಾಡ್ಮಿಂಟನ್ ಒಕ್ಕೂಟದ ಛೇರ್ಮನ್ ಟಿ.ಎಸ್. ವಿಶ್ವಾಸ್, ಮುಖಂಡರಾದ ಶ್ರೀನಿವಾಸ ದಾಸಕರಿಯಪ್ಪ, ಕೆ.ಎಸ್. ರಮೇಶ್, ಹಾವೇರಿ ಜಿಲ್ಲಾ ಬ್ಯಾಡ್ಮಿಂಟನ್ ಒಕ್ಕೂಟದ ಅಧ್ಯಕ್ಷ ಶಿವರಾಜ್ ಮಾತೂರ್ ಮುಖ್ಯ ಅತಿಥಿಯಾಗಿ ಪಾಲ್ಗೊಂಡಿದ್ದರು.

ದಾವಣಗೆರೆ ಜಿಲ್ಲಾ ಬ್ಯಾಡ್ಮಿಂಟನ್ ಒಕ್ಕೂಟದ ಅಧ್ಯಕ್ಷ ಎಸ್.ಎನ್. ಬಸವರಾಜ್ ಸಮಾರಂಭದ ಅಧ್ಯಕ್ಷತೆ ವಹಿಸಿದ್ದರು.

ಡಿ.ಆರ್. ಗಿರಿರಾಜು, ಆರ್. ಮಹೇಶ್ ಶೆಟ್ಟಿ, ಎಸ್.ಪಿ. ಶ್ರೀಧರ್, ಕೆ.ಹೆಚ್. ಸಿದ್ದೇಶ್ವರ, ಎಂ. ಇಸ್ಮಾಯಿಲ್, ಶಶಿಧರ್ ಆಚಾರ್, ಕರಿಬಸಪ್ಪ ಬೇತೂರ್, ರಾಕೇಶ್, ಸೂರಜ್, ಸುಗಂಧ ಗಂಗಾಧರ್ ಮತ್ತಿತರರಿದ್ದರು.


॥ ಶ್ರೀಶೈಲ ಮಲ್ಲಿಕಾರ್ಜುನ ಪ್ರಸನ್ನ ॥

ಕೈಲಾಸ ಶಿವಗಣಾರಾಧನೆ ಆಹ್ವಾನ ಪತ್ರಿಕೆ



ದಾವಣಗೆರೆ ಜಿಲ್ಲೆ, ತಾಲ್ಲೂಕು ಹಳೇಬಾತಿ ಗ್ರಾಮದ ವಾಸಿ
ಶ್ರೀಮತಿ ಶ್ರೀ ಕೆ.ಎಸ್. ರೇವಣಸಿದ್ದಪ್ಪ ಮತ್ತು ಮಕ್ಕಳು, ಸಹೋದರರು ಮಾಡುವ ವಿಜ್ಞಾಪನೆಗಳು.
ದಿನಾಂಕ 5.8.2022ನೇ ಶುಕ್ರವಾರ ಬೆಳಿಗ್ಗೆ 9.36ಕ್ಕೆ ನನ್ನ ಅಕ್ಕನವರಾದ

ಶ್ರೀಮತಿ ಸಣ್ಣಹನುಮಪ್ಪರ ನೀಲಮ್ಮನವರು

ಶಿವಾಧೀನರಾದ ಪ್ರಯುಕ್ತ ಮೃತರ ಆತ್ಮಶಾಂತಿಗಾಗಿ
ಕೈಲಾಸ ಶಿವಗಣಾರಾಧನೆಯನ್ನು ದಿನಾಂಕ 13.8.2022ರ ಶನಿವಾರ ಬೆಳಿಗ್ಗೆ 11 ಗಂಟೆಗೆ ದಾವಣಗೆರೆ ತಾಲ್ಲೂಕು ಹಳೇಬಾತಿ ಗ್ರಾಮದ ಮೃತರ ಸ್ವಗೃಹದಲ್ಲಿ ನೆರವೇರಿಸಲು ಗುರು-ಹಿರಿಯರು ನಿಶ್ಚಯಿಸಿರುವುದರಿಂದ ತಾವುಗಳು ಆಗಮಿಸಿ, ಮೃತರ ಆತ್ಮಕ್ಕೆ ಚಿರಶಾಂತಿಯನ್ನು ಕೋರಬೇಕಾಗಿ ವಿನಂತಿ.

ಇಂತಿ ದುಃಖತಪ್ತರು :

ಶ್ರೀಮತಿ ಪಾರ್ವತಮ್ಮ ಶ್ರೀ ಕೆ.ಎಸ್. ರೇವಣಸಿದ್ದಪ್ಪ ಮತ್ತು ಸಹೋದರರು
ಶ್ರೀಮತಿ ಶೃತಿ ಶ್ರೀ ಎಸ್.ಆರ್. ಸಿದ್ದೇಶ್ ಮತ್ತು ಮಕ್ಕಳು
ಶ್ರೀಮತಿ ಸಹನ ಶ್ರೀ ಎಸ್.ಆರ್. ನವೀನ್ ಕುಮಾರ್ ಮತ್ತು ಮಕ್ಕಳು
ಶ್ರೀಮತಿ ಎಸ್.ಆರ್. ಉಷಾ ಸುರೇಶ್ ಮತ್ತು ಮಕ್ಕಳು,
ಹಳೇಬಾತಿ ಗ್ರಾಮಸ್ಥರು ಹಾಗೂ ಬಂಧು-ಮಿತ್ರರು.

ವಿ.ಸೂ. : ಆಹ್ವಾನ ಪತ್ರಿಕೆ ತಲುಪದವರು ಇದನ್ನೇ ವೈಯಕ್ತಿಕ ಆಹ್ವಾನವೆಂದು ಭಾವಿಸಿ, ಆಗಮಿಸಲು ಕೋರಿದೆ.

# ನಿವೃತ್ತಿವರೆಗೆ ಸೇವೆಯಲ್ಲಿ ಮುಂದುವರೆಸಲು ಆಗ್ರಹ




**ಸರ್ಕಾರಿ ವಿದ್ಯಾರ್ಥಿ ನಿಲಯ, ವಸತಿ ಶಾಲಾ-ಕಾಲೇಜುಗಳ ಹೊರಗುತ್ತಿಗೆ ಸಿಬ್ಬಂದಿಗಳ ಪ್ರತಿಭಟನೆ**

ದಾವಣಗೆರೆ, ಆ. 11 - ನಿವೃತ್ತಿವರೆಗೆ ಸೇವೆಯಲ್ಲಿ ಮುಂದುವರೆಸುವ ಜೊತೆಗೆ ಬಾಕಿ ವೇತನ ಸಂದಾಯ ಮಾಡುವಂತೆ ಆಗ್ರಹಿಸಿ ಸರ್ಕಾರಿ ವಿದ್ಯಾರ್ಥಿ ನಿಲಯ ಹಾಗೂ ಸರ್ಕಾರಿ ವಸತಿ ಶಾಲಾ-ಕಾಲೇಜುಗಳ 'ಡಿ' ವರ್ಗದ ಹೊರಗುತ್ತಿಗೆ ಸಿಬ್ಬಂದಿಗಳು ನಗರದ ಜಿಲ್ಲಾ ಪಂಚಾಯತ್ ಕಚೇರಿ ಆವರಣದಲ್ಲಿ ಇಂದು ಪ್ರತಿಭಟನೆ ನಡೆಸಿದರು.

ಕರ್ನಾಟಕ ರಾಜ್ಯ ಸರ್ಕಾರಿ ಹಾಸ್ಟೆಲ್ ಮತ್ತು ವಸತಿ ಶಾಲಾ ಹೊರಗುತ್ತಿಗೆ ನೌಕರರ ಸಂಘ (ಸಿಐಟಿಯು)ದ ಜಿಲ್ಲಾ ಸಮಿತಿ ನೇತೃತ್ವದಲ್ಲಿ ಜಮಾಯಿಸಿದ್ದ ಪ್ರತಿಭಟನಾಕಾರರು, ಜಿಲ್ಲಾ ಪಂಚಾಯತಿ ಮುಖ್ಯ ಕಾರ್ಯನಿರ್ವಾಹಣಾಧಿಕಾರಿ ಅವರಿಗೆ ಮನವಿ ಸಲ್ಲಿಸಿದರು.

ವಿದ್ಯಾರ್ಥಿಗಳ ಸಂಖ್ಯೆಯನ್ನು ಹೆಚ್ಚಿಸಿದ ವಸತಿ ನಿಲಯಗಳಲ್ಲಿ, ಸಿಬ್ಬಂದಿಗಳ ಸಂಖ್ಯೆಯನ್ನು ಹೆಚ್ಚಿಸಬೇಕು. ಹೊರ ಸಂಪನ್ಮೂಲ ಸಿಬ್ಬಂದಿಗಳಿಗೆ ಕಾನೂನು ಪ್ರಕಾರ ವಾರದ ರಜೆಯನ್ನು ತಪ್ಪದೇ ಕೊಡಬೇಕು. ಎಲ್ಲ ಹೊರ ಸಂಪನ್ಮೂಲ ಸಿಬ್ಬಂದಿಗಳಿಗೆ ಇ.ಎಸ್.ಐ. ಮತ್ತು ಪಿ.ಎಫ್. ಸೌಲಭ್ಯವನ್ನು ವಿಸ್ತರಿಸಬೇಕು. ಸಿಬ್ಬಂದಿಗಳು ಹಿಂಪಡೆಯಲು ಬಯಸುವ ಅವರ ಪಾಲಿನ ಪಿ.ಎಫ್. ಹಣವನ್ನು ಅವರ ಬ್ಯಾಂಕ್ ಖಾತೆಗೆ ಜಮಾ ಮಾಡಬೇಕು. ಸರ್ವೋಚ್ಚ ನ್ಯಾಯಾಲಯದ ಆದೇಶದಂತೆ ಹೊರ ಸಂಪನ್ಮೂಲ ಸಿಬ್ಬಂದಿಗಳಿಗೆ ಸಮಾನ ಕೆಲಸಕ್ಕೆ ಸಮಾನ ವೇತನ ನೀಡಬೇಕು. ವಸತಿ ಶಾಲಾ-ಕಾಲೇಜುಗಳಲ್ಲಿ ಎಸ್‌ಡಿಸಿ/ಎಫ್‌ಡಿಸಿ/ನರ್ಸ್ ಬೋಧಕೇತರ ಮೊದಲಾದ ಹೊರ ಸಂಪನ್ಮೂಲ ನೌಕರರನ್ನು ಅವರವರ ಸ್ಥಾನದಲ್ಲಿ ಕಾಯಂ ಮಾಡಬೇಕು. ಅವರ ಬಾಕಿ ವೇತನವನ್ನು ಸಂದಾಯ ಮಾಡಬೇಕು ಎಂದು ಆಗ್ರಹಿಸಿದರು.

ಪ್ರತಿಭಟನೆಯಲ್ಲಿ ಕೆ.ಹೆಚ್. ಆನಂದರಾಜು, ಬಿ.ಎನ್. ಹಾಲೇಶ್ ನಾಯ್ಕ, ಹೆಚ್. ಸದಾಶಿವನಾಯ್ಕ ಸೇರಿದಂತೆ ಹೊರಗುತ್ತಿಗೆ ನೌಕರರು ಭಾಗವಹಿಸಿದ್ದರು.

# 2ಎ ಮೀಸಲಾತಿಗೆ ಕಾನೂನಾತ್ಮಕ ಹೋರಾಟ : ಬಿ.ಸಿ.ಉಮಾಪತಿ

**(1ನೇ ಪುಟದಿಂದ)** ಹಿಂದುಳಿದ ವರ್ಗಗಳ ಪಟ್ಟಿಯಲ್ಲಿ ಪಂಚಮಸಾಲಿ ಸಮಾಜದ ಹೆಸರಿಲ್ಲ ಎಂದು ರಾಜ್ಯ ಸರ್ಕಾರಕ್ಕೆ ವಾಪಾಸ್ ಕಳಿಸಲಾಗಿತ್ತು. ಶಿಕ್ಷಣ ಮತ್ತು ಉದ್ಯೋಗಕ್ಕಾಗಿ ಮೀಸಲಾತಿ ಕೇಳುತಿದ್ದೇವೆ. ಇದರಿಂದ ಸಮಾಜದ ಬಡ ಮಕ್ಕಳಿಗೆ ಅನುಕೂಲವಾಗಲಿದೆ ಎಂದರು. ಧಾರ್ಮಿಕ ಕ್ಷೇತ್ರದಲ್ಲಿ ಅನುಭವ ಮತ್ತು ಉನ್ನತ ವ್ಯಾಸಂಗ ಹೊಂದಿರುವವರು ಸಿಕ್ಕರೆ ಶಾಖಾ ಮಠಗಳಿಗೆ ಪೀಠಾಧಿಪತಿಗಳನ್ನು ಮಾಡಬಹುದಿತ್ತು. ರಾಜ್ಯದ ಕೆಲವು ಕಡೆ ಶಾಖಾ ಮಠಗಳನ್ನು ಮಾಡುವ ಉದ್ದೇಶ ಕೂಡ ಇದೆ ಎಂದು ಹೇಳಿದರು. ರಾಜಕೀಯದಲ್ಲಿ ತಮಗೆ ಆಸಕ್ತಿಯಿಲ್ಲ. ಯಾವ ಪಕ್ಷದಲ್ಲೂ ಸದಸ್ಯತ್ವ ಪಡೆದಿಲ್ಲ. ಎಲ್ಲಾ ಪಕ್ಷದವರ ಜೊತೆಗೂ ಉತ್ತಮ ಬಾಂಧವ್ಯ ಇದೆ. ಯಾವ ಕಾರಣಕ್ಕೂ ರಾಜಕೀಯಕ್ಕೆ ಬರುವುದಿಲ್ಲ. ಸಮಾಜ ಸೇವೆಯಲ್ಲಿಯೇ ನಮಗೆ ತೃಪ್ತಿ ಇದೆ ಎಂದು ತಿಳಿಸಿದರು.

# ಕಲಿಕೆ ಆಸಕ್ತಿ ಜೊತೆ ಕೂತೂಹಲ ಅಗತ್ಯ

## ಸಿರಿಗೆರೆಯಲ್ಲಿನ ಕಾರ್ಯಕ್ರಮದಲ್ಲಿ ತರಳಬಾಳು ಜಗದ್ಗುರುಗಳು



ಸಿರಿಗೆರೆ, ಆ. 11- ಕಲಿಕೆಗೆ ಆಸಕ್ತಿ, ಅಭಿರುಚಿಯ ಜೊತೆಗೆ ಕುತೂಹಲ ಇರಬೇಕು. ಮಕ್ಕಳಲ್ಲಿ ಅಪಾರ ಕುತೂಹಲ ವನ್ನು ಇರುತ್ತದೆ. ಮಕ್ಕಳ ಆ ಕುತೂಹಲ ಬದುಕಿನುದ್ದಕ್ಕೂ ಉಳಿಸಿಕೊಂಡರೆ ಅಸಾಧ್ಯವಾದುದನ್ನು ಸಾಧಿಸಬಹುದು ಎಂದು ತರಳಬಾಳು ಜಗದ್ಗುರು ಡಾ. ಶಿವಮೂರ್ತಿ ಶಿವಾಚಾರ್ಯ ಮಹಾಸ್ವಾಮಿಗಳು ನುಡಿದರು.

ಶ್ರೀ ಗುರುಶಾಂತರಾಜ ದೇಶಿಕೇಂದ್ರ ಮಹಾಸ್ವಾಮಿಗಳವರ ಶ್ರದ್ಧಾಂಜಲಿ ಸಮಾರಂಭದ ಅಂಗವಾಗಿ ಏರ್ಪಡಿಸಿದ್ದ 'ವಿಶ್ವಬಂಧು ಮರುಳಸಿದ್ಧ' ನಾಟಕ ಪ್ರದರ್ಶನದ ಪೂರ್ವಭಾವಿ ಸಮಾರಂಭದ ಸಾನ್ನಿಧ್ಯ ವಹಿಸಿ ಆಶೀರ್ವಚನ ನೀಡಿದರು.

ಕನಸು ನಿದ್ರೆಯಲ್ಲಿ ಕಾಣುವ ನಾಟಕವಾದರೆ, ನಾಟಕ ಎಚ್ಚರವಿದ್ದು, ಕಾಣುವ ಕನಸು. ರಂಗ ಮಂಚದ ಮೇಲೆ ವೈದ್ಯ, ವಕೀಲ, ಪೊಲೀಸ್, ಮುಖ್ಯಮಂತ್ರಿ ಹೀಗೆ ನಾವು ಏನುಬೇಕಾದರೂ ಆಗಬಹುದು. ಕಲೆಗೆ ಅಂತಹ ಅದ್ಭುತವಾದ ಮಾಂತ್ರಿಕ ಶಕ್ತಿಯಿದೆ ಎಂದು ಶ್ರೀಗಳು ತಿಳಿಸಿದರು.

ಮುಖ್ಯ ಅತಿಥಿಗಳಾಗಿ ಆಗಮಿಸಿದ್ದ ಕುಮಟಾದ ಖ್ಯಾತ ಚಿಂತಕ, ಬರಹಗಾರ ಡಾ. ಶ್ರೀಧರ ಬಳಿಗಾರ ಮಾತನಾಡಿ, ಸಿರಿಗೆರೆಯ ಶ್ರೀಗಳು ಬಯಲು ಸೀಮೆಯ ಕೆರೆಗಳಿಗೆ ನೀರುಣಿಸುವುದರ ಮೂಲಕ ಬರಡು ನೆಲದಲ್ಲಿ ಹಸಿರು ಕ್ರಾಂತಿ ಮಾಡುತ್ತಿದ್ದಾರೆ ಎಂದರು.

ಹಸಿದವರಿಗೆ ಅನ್ನ ನೀಡುವ ರೈತರಲ್ಲಿ ಆತ್ಮವಿಶ್ವಾಸ ತುಂಬುತ್ತಿದ್ದಾರೆ. ರೈತರ ಮಕ್ಕಳಿಗೆ ಉಚಿತ ಶಿಕ್ಷಣ ನೀಡುವುದರ ಮೂಲಕ ಗ್ರಾಮ ಭಾರತವನ್ನು ಕಟ್ಟುತ್ತಿದ್ದಾರೆ. ಶ್ರೀಗಳ ಸಾಮಾಜಿಕ, ಶೈಕ್ಷಣಿಕ, ಅಧ್ಯಾತ್ಮಿಕ, ಸಾಂಸ್ಕೃತಿಕ ಕಾಳಜಿ ಅನನ್ಯವಾದುದು ಎಂದು ಹೇಳಿದರು.

ದೇಹಕ್ಕೆ ಹಸಿವಾದರೆ ಆತಂಕವಾಗುತ್ತದೆ. ಅದರಂತೆ ಮನಸ್ಸಿಗೆ ಹಸಿವಾದರೂ ಆತಂಕವಾಗಬೇಕು. ಕಲೆ, ಸಾಹಿತ್ಯ, ಸಂಗೀತಗಳು ಮನಸ್ಸಿನ ಹಸಿವನ್ನು ನೀಗಿಸುತ್ತವೆ. ಈ ಹಸಿವನ್ನು ತಣಿಸುವ ಕಾರ್ಯವನ್ನು ಶ್ರೀಗಳು ಮಾಡುತ್ತಿರುವುದು ಸ್ತುತ್ಯಾರ್ಹ ಕಾರ್ಯವೆಂದು ಹೇಳಿದರು.

ಮತ್ತೋರ್ವ ಅತಿಥಿ, ನಟ, ನಿರ್ದೇಶಕ ಕೃಷ್ಣಮೂರ್ತಿ ಕವತ್ತಾರ್ ಮಾತನಾಡಿ, ರಂಗಭೂಮಿ ಮನಸ್ಸಿನ ಗೋಡೆಗಳನ್ನು ಸೀಳುವ ಕ್ಷಿಪಣಿಯಿದ್ದಂತೆ. ನಾಟಕಕ್ಕೆ ಒಳಗಣ್ಣನ್ನು ತೆರೆಸುವ ಶಕ್ತಿಯಿದೆ. ಧರ್ಮ ಮತ್ತು ಸಂಸ್ಕೃತಿಗಳ ಹದವರಿತು ಬೆರೆತಾಗ ಅರಳುವ ಸೊಬಗು ವರ್ಣನೆಗೆ ನಿಲುಕದ್ದು ಎಂದರು.

ಇದೇ ಸಂದರ್ಭದಲ್ಲಿ 2021-22ರ ಪಿಯುಸಿ ಪರೀಕ್ಷೆಯಲ್ಲಿ ಉನ್ನತ ಶ್ರೇಣಿಯಲ್ಲಿ ಉತ್ತೀರ್ಣನಾಗಿ, ಶ್ರೀ ತರಳಬಾಳು ಜಗದ್ಗುರು ಶಿವಕುಮಾರ ಶಿವಾಚಾರ್ಯ ಮಹಾಸ್ವಾಮಿಗಳ ನೆನಪಿನ ಬಂಗಾರ ಪದಕಕ್ಕೆ ಪಾತ್ರನಾದ ಕು. ಕಾರ್ತಿಕ್ ಗೆ ಪದಕ ಪ್ರದಾನ ಮಾಡಿ, ಗೌರವಿಸಲಾಯಿತು.

ಸಮಾರಂಭದ ನಂತರ ಶ್ರೀ ಶಿವಕುಮಾರ ಶಿವಾಚಾರ್ಯ ಮಹಾಸ್ವಾಮಿಗಳು ರಚಿಸಿದ, ಕೃಷ್ಣಮೂರ್ತಿ ಕವತ್ತಾರ್ ನಿರ್ದೇಶಿಸಿದ 'ವಿಶ್ವಬಂಧು ಮರುಳಸಿದ್ಧ' ನಾಟಕವನ್ನು ತರಳಬಾಳು ಕಲಾ ಸಂಘದ ಕಲಾವಿದರು ಅಭಿನಯಿಸಿದರು.

# ಅಕ್ಷರಗಳನ್ನು ಚಿತ್ರರೂಪದಲ್ಲಿ ಹೇಳಿಕೊಟ್ಟಾಗ ಮಕ್ಕಳಿಗೆ ಇಷ್ಟವಾಗುತ್ತದೆ

ದಾವಣಗೆರೆ, ಆ. 11- ಅಕ್ಷರಗಳು ಭಾಷೆಯ ದೃಶ್ಯ ರೂಪಗಳಾಗಿದ್ದು, ಅಕ್ಷರಗಳ ಬರವಣಿಗೆಯನ್ನು ಪುಟ್ಟ ಮಕ್ಕಳಿಗೆ ಹೇಳಿಕೊಡುವಾಗ ಚಿತ್ರ ರೂಪದಲ್ಲಿ ಹೇಳಿ ಕೊಟ್ಟಲ್ಲಿ ಮಕ್ಕಳಿಗೆ ಕಷ್ಟವಾಗದೇ ಇಷ್ಟವಾಗುತ್ತದೆ ಎಂದು ಹಿರಿಯ ಪತ್ರಕರ್ತ ಎಚ್.ಬಿ. ಮಂಜುನಾಥ ಅಭಿಪ್ರಾಯಪಟ್ಟರು.

ಆವರಗೆರೆಯ ಶ್ರೀ ಸಿದ್ದಲಿಂಗೇಶ್ವರ ವಿದ್ಯಾಸಂಸ್ಥೆಯಲ್ಲಿ ಪೂರ್ವ ಪ್ರಾಥಮಿಕ ಮಕ್ಕಳಿಗೆ ಅಕ್ಷರ ಅಭ್ಯಾಸ ಕಾರ್ಯಕ್ರಮದ ಮುಖ್ಯ ಅತಿಥಿಯಾಗಿ ಪಾಲ್ಗೊಂಡು ಅವರು ಮಾತನಾಡಿದರು.

ಪುಟ್ಟ ಮಕ್ಕಳಿಗೆ ಯಾವುದೇ ಭಾಷೆಯ ವರ್ಣಮಾಲೆ ಬರವಣಿಗೆ ಕಲಿಸಿಕೊಡುವಾಗ ಅಕ್ಷರಗಳನ್ನು ಆ ಅಕ್ಷರದ ರೂಪಕ್ಕೆ ಹೋಲಿಕೆಯಾಗುವ ಹಣ್ಣು-ತರಕಾರಿ ಪ್ರಾಣಿ ಪಕ್ಷಿ ಅಥವಾ ಯಾವುದೇ ವಸ್ತುಗಳ ರೂಪಕ್ಕೆ ಹೋಲಿಸಿ ಬರೆದು ತೋರಿಸಿದಾಗ ಇಷ್ಟವಾಗುತ್ತದೆ, ಇದರಿಂದ ಅಕ್ಷರ ಅಭ್ಯಾಸದಲ್ಲಿ ಮಕ್ಕಳಿಗೆ ಆಸಕ್ತಿ ಹೆಚ್ಚುತ್ತದೆ ಎಂದು ಅಭಿಪ್ರಾಯಪಟ್ಟರು.

ಕಾರ್ಯಕ್ರಮದ ಸಾನ್ನಿಧ್ಯ ವಹಿಸಿದ್ದ ಪುರವರ್ಗ ಹಿರೇಮಠದ ಶ್ರೀ ಓಂಕಾರ ಶಿವಾಚಾರ್ಯ ಸ್ವಾಮೀಜಿ ಅಕ್ಷರದಿಂದ ವಿದ್ಯೆ, ವಿದ್ಯೆಯಿಂದ ಜ್ಞಾನ, ಜ್ಞಾನದಿಂದ ಬದುಕಿನ ಸಾರ್ಥಕತೆ, ಹಾಗಾಗಿ ಅಕ್ಷರಾಭ್ಯಾಸವು ಪ್ರಮುಖ ಘಟ್ಟವಾಗಿದೆ ಎಂದರು.

ವಿಜ್ಞಾನ ಪರಿಷತ್ತಿನ ಕಾರ್ಯದರ್ಶಿ ಎಂ. ಗುರುಸಿದ್ಧ ಸ್ವಾಮಿ ಮುಖ್ಯ ಅತಿಥಿಯಾಗಿ ಮಾತುಗಳನ್ನಾಡಿದರು.

ಸಂಸ್ಥೆಯ ಶಿವಮೂರ್ತಿ ಸ್ವಾಮಿ ಅವರ ಅಧ್ಯಕ್ಷತೆಯಲ್ಲಿ ನಡೆದ ಕಾರ್ಯಕ್ರಮದ ವೇದಿಕೆಯಲ್ಲಿ ಶ್ರೀಮತಿ ಛಾಯಾದೇವಿ, ಸಂಸ್ಥೆಯ ನಿರ್ದೇಶಕರಾದ ಶ್ರೀಮತಿ ಸುಗ್ಗಲಾದೇವಿ, ಕಾರ್ಯದರ್ಶಿ ಸಿದ್ದಲಿಂಗಸ್ವಾಮಿ ಉಪಸ್ಥಿತರಿದ್ದರು.ಗುಣಶೀಲ ಪ್ರಾರ್ಥನೆ ಹಾಡಿದರೆ, ಸಹ ಶಿಕ್ಷಕಿ ನೇತ್ರಾವತಿ ಸ್ವಾಗತಿಸಿದರು. ಅನ್ನಪೂರ್ಣ ವಂದಿಸಿದರು.



## ನಗರದಲ್ಲಿ ಇಂದು ರಾಷ್ಟ್ರಧ್ವಜ ವಿತರಣೆ

ಜಿಲ್ಲಾ ಸರ್ಕಾರಿ ನಿವೃತ್ತ ನೌಕರರ ಸಂಘದಿಂದ ಸ್ವಾತಂತ್ರ್ಯ ದಿನಾಚರಣೆಯ ಅಮೃತ ಮಹೋತ್ಸವ ಸಂದರ್ಭದಲ್ಲಿ ಪ್ರತಿ ಮನೆಯ ಮೇಲೆ ನಾಡಿದ್ದು ದಿನಾಂಕ 13 ರಿಂದ 15 ರವರೆಗೆ ರಾಷ್ಟ್ರಧ್ವಜವನ್ನು ಹಾರಿಸುವ ಹಿನ್ನೆಲೆಯಲ್ಲಿ ಸಂಘದ ಕಚೇರಿಯಲ್ಲಿ ಸಂಘದ ಸದಸ್ಯರಿಗೆ ಧ್ವಜವನ್ನು ಇಂದು ಸಂಜೆ 5 ಗಂಟೆಗೆ ಒದಗಿಸಲಾಗುವುದು. ವಿವರಗಳಿಗೆ ದಾಜಿಸನೌ ಸಂಘದ ಅಧ್ಯಕ್ಷ ಎ.ಆರ್. ಉಜ್ಜನಪ್ಪ (94487 28926) ಕ್ರೀಡಾ ಮತ್ತು ಸಾಂಸ್ಕೃತಿಕ ಕಾರ್ಯದರ್ಶಿ, ನಿವೃತ್ತ ಪ್ರಾಂಶುಪಾಲ ಎಸ್.ಎಂ. ವೀರಯ್ಯ (9448212911) ಇವರನ್ನು ಸಂಪರ್ಕಿಸಬಹುದಾಗಿದೆ.

## ಬೆಳ್ಳೂಡಿ ಗ್ರಾ.ಪಂ. ಶಂಕರಪ್ಪ ಉಪಾಧ್ಯಕ್ಷ



ಮಲೇಬೆನ್ನೂರು, ಆ. 11- ಬೆಳ್ಳೂಡಿ ಗ್ರಾ.ಪಂ. ಉಪಾಧ್ಯಕ್ಷರಾಗಿ ಭಾಗವ್ವರ ಶಂಕರಪ್ಪ ಅವರು ಸೋಮವಾರ ನಡೆದ ಚುನಾವಣೆಯಲ್ಲಿ ಆಯ್ಕೆಯಾಗಿದ್ದಾರೆ.

ಕೆ.ಹೆಚ್. ಮಂಜಪ್ಪ ಅವರ ರಾಜೀನಾಮೆಯಿಂದಾಗಿ ಉಪಾಧ್ಯಕ್ಷ ಸ್ಥಾನ ತೆರವಾಗಿತ್ತು. ಚುನಾವಣೆಯಲ್ಲಿ ಉಪಾಧ್ಯಕ್ಷ ಸ್ಥಾನಕ್ಕೆ ಸ್ಪರ್ಧಿಸಿದ್ದ ಶಂಕರಪ್ಪ ಅವರು 15 ಮತಗಳ್ನು ಪಡೆದು ಆಯ್ಕೆಯಾದರೆ ಎಕ್ಕೆಗೊಂದಿಯ ಬಣಕಾರ ಶಿವಪ್ಪ 8 ಮತ ಪಡೆದು ಪರಾಭವಗೊಂಡರು.

ಭದ್ರಾ ನಾಲಾ - ನಂ. 5 ಎಇಇ ಶ್ರೀಧರ್ ಚುನಾವಣಾಧಿಕಾರಿಯಾಗಿ ಕಾರ್ಯ ನಿರ್ವಹಿಸಿದರು. ಪಿಡಿಓ ಶಿವಪ್ಪ ಬಿರಾದಾರ್ ಸಹಕರಿಸಿದರು. ಗ್ರಾ.ಪಂ. ಅಧ್ಯಕ್ಷೆ ಸುಧಾ ಶಿವಕುಮಾರ್ ಮತ್ತು ಇತರರು ಉಪಸ್ಥಿತರಿದ್ದರು.

## ಹಿರೇಮೆಗಳಗೇರಿ; 4 ಕೋಟಿ ರೂ. ವೆಚ್ಚದ ಸಿ.ಸಿ.ರಸ್ತೆ ಕಾಮಗಾರಿಗೆ ಚಾಲನೆ



ಹರಪನಹಳ್ಳಿ, ಆ.11- ತಾಲ್ಲೂಕಿನ ಹಿರೇಮೆಗಳಗೇರಿ ಗ್ರಾಮದಲ್ಲಿ 4 ಕೋಟಿ ರೂ. ವೆಚ್ಚದಲ್ಲಿ ಹಿರೇಮೆಗಳಗೇರಿಯಿಂದ ಜಗಳೂರು ಗಡಿಗೆ ಸೇರುವ ಗ್ರಾಮದವರೆಗೆ ಸಿ.ಸಿ.ರಸ್ತೆ ಹಾಗೂ ಬಾಕ್ಸ್ ಚರಂಡಿ ನಿರ್ಮಾಣ ಕಾಮಗಾರಿಗೆ ಶಾಸಕ ಜಿ.ಕರುಣಾಕರ ರೆಡ್ಡಿ ಚಾಲನೆ ನೀಡಿದರು.

ನಂತರ ಮಾತನಾಡಿದ ಅವರು, ತಾಲ್ಲೂಕಿನ ಗಡಿಭಾಗದ ಹಿರೇಮೇಗಳಗೇರಿ, ಚಿಕ್ಕಮೇಗಳಗೇರಿ, ಪೋತಲಕಟ್ಟೆ, ವಡ್ಡಿನಹಳ್ಳಿ, ಅರೆ ಬಸಾಪುರ ಗ್ರಾಮಗಳು ನೀರಾವರಿ ಪ್ರದೇಶಗಳಾಗಿರುವುದರಿಂದ ಈ ಭಾಗದಲ್ಲಿ ಡಾಂಬರೀಕರಣ ರಸ್ತೆ ಹಾಳಾಗಿತ್ತು, ಪ್ರಸ್ತುತ ಲೋಕೋಪಯೋಗಿ ಇಲಾಖೆಯಿಂದ ಜಿಲ್ಲಾ ಮುಖ್ಯರಸ್ತೆ ಮತ್ತು ಇತರೆ ರಸ್ತೆಗಳ ಸುಧಾರಣೆಯ ಯೋಜನೆಯಲ್ಲಿ ಸಿ.ಸಿ.ರಸ್ತೆಯನ್ನು ಹಾಗೂ ಎಡ ಮತ್ತು ಬಲಕ್ಕೆ ಚರಂಡಿ ನಿರ್ಮಾಣ ಮಾಡುವುದರ ಮೂಲಕ ಗಡಿ ಭಾಗದ ಗ್ರಾಮಗಳಿಗೆ ಮೂಲಸೌಕರ್ಯ ಒದಗಿಸಲು ಪ್ರಯತ್ನಿಸುತ್ತೇನೆ ಎಂದು ಹೇಳಿದರು.

ಈ ವೇಳೆ ಮುಖಂಡರಾದ ಬಾಗಳಿ ಕೊಟ್ರೇಶಪ್ಪ, ಆರ್.ಲೋಕೇಶ್, ಚೌಡಾಪುರ ಷಣ್ಮುಖಪ್ಪ, ಅಂಗಡಿ ಚಂದ್ರಪ್ಪ, ನಾಟೀ ವೈದ್ಯ ದೇವೇಂದ್ರಪ್ಪ ಇದ್ದರು.

## ನಗರದಲ್ಲಿಂದು ಶ್ರೀ ಅರಕೇರಮ್ಮ ದೇವಿ ದೇವಸ್ಥಾನದಲ್ಲಿ ಕಳಸಾರೋಹಣ



ಕುರುಬರ ಪೇಟೆಯಲ್ಲಿರುವ ಶ್ರೀ ಅರಕೇರಮ್ಮ ದೇವಿ ದೇವಸ್ಥಾನದಲ್ಲಿ ಶ್ರೀ ಅರಕೇರಮ್ಮ ದೇವಿ ದೇವಸ್ಥಾನ ಕಳಸಾರೋಹಣ ಇಂದು ಬೆಳಿಗ್ಗೆ 11-30 ಕ್ಕೆ ನಡೆಯಲಿದೆ.

ಸಾನ್ನಿಧ್ಯವನ್ನು ಹದಡಿ ಚಂದ್ರಗಿರಿ ಮಠದ ಶ್ರೀ ಸದ್ಗುರು ಪರಮಹಂಸ ಮುರುಳೀಧರ ಸ್ವಾಮೀಜಿ ವಹಿಸಲಿದ್ದಾರೆ. ವಿಶೇಷ ಆಹ್ವಾನಿತರಾಗಿ ಶಾಸಕ ಶಾಮನೂರು ಶಿವಶಂಕರಪ್ಪ ಆಗಮಿಸಲಿದ್ದಾರೆ.

ಅರಕೇರಮ್ಮ ದೇವಸ್ಥಾನ ಟ್ರಸ್ಟ್ ಅಧ್ಯಕ್ಷ ಜಮ್ಮಳ್ಳಿ ನಾಗರಾಜ್ ಅಧ್ಯಕ್ಷತೆ ವಹಿಸಲಿದ್ದಾರೆ.

ಮುಖ್ಯ ಅತಿಥಿಗಳಾಗಿ ಹೆಚ್.ಬಿ. ಗೋಣೆಪ್ಪ, ಬಿ. ಷಣ್ಮುಖಪ್ಪ, ಎಂ. ಮಂಜುನಾಥ, ಯಶವಂತರಾವ್ ಜಾಧವ್, ಆನಂದಪ್ಪ, ಬಿ.ಜಿ. ಅಜಯಕುಮಾರ್, ಶ್ರೀಮತಿ ರೇಣುಕಾ ಪ್ರಸಾದ್, ಬಿ. ರೇವಣ್ಣ, ಬಿ. ವೀರಣ್ಣ, ಜೆ.ಎನ್. ಶ್ರೀನಿವಾಸ್, ಎಲ್.ಡಿ. ಗೋಣೆಪ್ಪ, ಕೆ.ಪ್ರಸನ್ನ ಕುಮಾರ್, ಆಶಾ ಉಮೇಶ್, ಸುಧಾ ಇಟ್ಟಿಗುಡಿ ಮಂಜುನಾಥ್, ಜಿ.ಡಿ. ಪ್ರಕಾಶ್, ರಾಜನಹಳ್ಳಿ ಶಿವಕುಮಾರ್, ಓ. ದುಗ್ಗಪ್ಪ, ಎಸ್. ಮಲ್ಲಿಕಾರ್ಜುನ್ ಆಗಮಿಸಲಿದ್ದಾರೆ.

# ಪಂಚಮಸಾಲಿ ಸಮಾಜಕ್ಕೆ 2ಎ

**(1ನೇ ಪುಟದಿಂದ)** ಕಡೆಗಳಲ್ಲಿ ನಿರ್ಮಾಣ ಹಂತದಲ್ಲಿವೆ ಎಂದ ಅವರು, 2ಎ ಮೀಸಲಾತಿ ಹಿಂದಿನಿಂದಲೂ ಹೋರಾಟ ನಡೆಸುತ್ತಾ ಬಂದಿದೆ, ಕೇಂದ್ರದಿಂದ ರಾಜ್ಯಕ್ಕೆ ಒಬಿಸಿ ಸೇರ್ಪಡೆಗೆ ವರದಿ ಕೇಳಿದ್ದು, ಕೂಡಲೇ ಮುಖ್ಯಮಂತ್ರಿಗಳು ವರದಿಯನ್ನು ಕೇಂದ್ರಕ್ಕೆ ಕಳಿಸಲಿ ಎಂದು ಸರ್ಕಾರಕ್ಕೆ ಒತ್ತಾಯಿಸಿದರು.

ವೀರಶೈವ ಲಿಂಗಾಯತ ಪಂಚಮಸಾಲಿ ಸಮಾಜದ ರಾಜ್ಯ ಗೌರವಾಧ್ಯಕ್ಷ ಬಾವಿ ಬೆಟ್ಟಪ್ಪ ಮಾತನಾಡಿ, 2008ರಲ್ಲಿ ಹಾಲಿ ಶಾಸಕ ಜಿ. ಕರುಣಾಕರ ರೆಡ್ಡಿರವರು ನಮ್ಮ ಸಮುದಾಯಕ್ಕೆ ಅಂದಿನ ಸರ್ಕಾರದಲ್ಲಿ ಹರಿಹರ ಪೀಠದಲ್ಲಿ ಭೂಮಿಯನ್ನು ಕೊಡಿಸಲು ಶ್ರಮಿಸಿದರು ಎಂದರು.

ತಾಲ್ಲೂಕು ವೀರಶೈವ ಲಿಂಗಾಯತ ಪಂಚಮಸಾಲಿ ಸಮಾಜದ ಅಧ್ಯಕ್ಷ ಪಟೇಲ್ ಬೆಟ್ಟನಗೌಡ ಮಾತನಾಡಿ, 2 ಎಕರೆ ಸಮಾಜದ ಭೂಮಿಯಲ್ಲಿ ಸಮುದಾಯ ಭವನ, ಕಚೇರಿ ಹಾಗೂ ವಿದ್ಯಾರ್ಥಿಗಳಿಗೆ ವಸತಿ ನಿಲಯದಂತಹ ಸಮಾಜ ಕಾರ್ಯ ಚಟುವಟಿಕೆ ಮಾಡಲು ಪ್ರಯತ್ನಿಸಲಾಗುತ್ತಿದೆ. ಪಟ್ಟಣದ ಯಾವುದಾದರು ವೃತ್ತಕ್ಕೆ ಕಿತ್ತೂರು ರಾಣಿ ಚನ್ನಮ್ಮ ಹೆಸರು ನಾಮಕರಣ ಮಾಡುವಂತೆ ಶಾಸಕರು ಹಾಗೂ ಪುರಸಭೆ ಅಧ್ಯಕ್ಷರಿಗೆ ಮನವಿ ಮಾಡಿಕೊಂಡರು.

ಪುರಸಭೆ ಅಧ್ಯಕ್ಷ ಹೆಚ್.ಎಂ.ಅಶೋಕ ಮಾತನಾಡಿ, ಪಂಚಮಸಾಲಿ ಸಮುದಾಯದ ಜತೆಗೆ ನಿರಂತರವಾಗಿ ಒಡನಾಟದಲ್ಲಿದ್ದು, ಸಮುದಾಯಭವನ ನಿರ್ಮಾಣ ಮಾಡಲು ನಾನು ವೈಯಕ್ತಿಕವಾಗಿ ಭಾರತ ಸ್ವಾತಂತ್ರ್ಯದ 75ನೇ ಅಮೃತ ಮಹೋತ್ಸವದ ನೆನಪಿಗಾಗಿ 75ಸಾವಿರ ರೂ. ದೇಣಿಗೆಯಾಗಿ ನೀಡುವೆ ಹಾಗೂ ಪುರಸಭೆಯಿಂದ ಪಂಚಮಸಾಲಿ ಸಮುದಾಯಕ್ಕೆ ಎಲ್ಲಾ ರೀತಿಯ ಸಹಕಾರ ನೀಡುವುದಾಗಿ ಹೇಳಿದರು.

ಕಾರ್ಯಕ್ರಮದಲ್ಲಿ ವೀರಶೈವ ಲಿಂಗಾಯತ ಪಂಚಮಸಾಲಿ ಸಮಾಜದ ರಾಜ್ಯ ಕಾರ್ಯಾಧ್ಯಕ್ಷ ಸೋಮನಗೌಡ ಪಾಟೀಲ್, ಜಿಲ್ಲಾಧ್ಯಕ್ಷ ಪ್ರಕಾಶ ಪಾಟೀಲ್, ತಾಲ್ಲೂಕು ಗೌರವಾಧ್ಯಕ್ಷ ಎಚ್.ಪಂಪಣ್ಣ, ಕಾರ್ಯದರ್ಶಿ ಮಂಜುನಾಥ ಎ.ಜಿ., ಮುಖಂಡರಾದ ಎನ್.ಕೊಟ್ರೇಶ್, ಐಗೋಳ ಚಿದಾನಂದಪ್ಪ, ಶಶಿಧರ ಪೂಜಾರ, ಚಂದ್ರಶೇಖರ ಪೂಜಾರ, ಯಶವಂತಗೌಡ್ರು, ಡಾ.ಸುವರ್ಣ ಆರುಂಡಿ ನಾಗರಾಜ, ಎಂ.ಅಜ್ಜಣ್ಣ, ಮಲ್ಕಪ್ಪ ಅಧಿಕಾರ, ಪಿ.ಕರಿಬಸವನಗೌಡ್ರು, ಚನ್ನನಗೌಡ್ರು, ಜೆ. ಓಂಕಾರಗೌಡ್ರು, ಶ್ರೀಮತಿ ಕೊಟ್ರೇಶ್, ಪುಷ್ಪ ದಿವಾಕರ, ಸುಷ್ಮ ಪಾಟೀಲ್, ಎನ್.ಮಂಜುನಾಥ, ಶ್ಯಾನಭೋಗರ ಸುರೇಶ್, ಸಿದ್ದೇಶ್, ಮಹೇಶ ಪೂಜಾರ, ಮಂಜುನಾಥ ಪೂಜಾರ, ಮನೋಹರ, ಅಣ್ಣಪ್ಪ, ಬಿ.ಜಗದೀಶ್ ಸೇರಿದಂತೆ ಇತರರು ಇದ್ದರು.



## ಬಾಡದ ಆನಂದರಾಜ್ ಅವರಿಗೆ ಪಿತೃ ವಿಯೋಗ



ದಾವಣಗೆರೆ,ಆ.11- ದಾವಣಗೆರೆ ತಾಲ್ಲೂಕು ಬಾಡ ಗ್ರಾಮದವರಾದ ಕೆಇಬಿಯ ನಿವೃತ್ತ ನೌಕರ ರಾಮಣ್ಣ (82) ಅವರು ಇಂದು ಬೆಳಿಗ್ಗೆ 11 ಗಂಟೆಗೆ ನಿಧನರಾದರು.

ರಾಮಣ್ಣ, ಸಾಮಾಜಿಕ ಸೇವಾ ಕಾರ್ಯಕರ್ತ ಬಾಡಾದ ಆನಂದರಾಜ್ ಅವರ ತಂದೆ. ಆನಂದರಾಜ್ ಸೇರಿದಂತೆ ನಾಲ್ವರು ಪುತ್ರರು, ಓರ್ವ ಪುತ್ರಿಯನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯು ನಾಳೆ ಶುಕ್ರವಾರ ಮಧ್ಯಾಹ್ನ 12 ಗಂಟೆಗೆ ಬಾಡಾ ಗ್ರಾಮದಲ್ಲಿ ನಡೆಯಲಿದೆ.

### ಶತಾಯುಷಿ ಬಸಮ್ಮ ನಿಧನ



ದಾವಣಗೆರೆ ತಾ. ಬಸವನಾಳು ಗ್ರಾಮದ ದೇವಪ್ಪರ ಶ್ರೀಮತಿ ಬಸಮ್ಮ ಅವರು ದಿನಾಂಕ: 11.8.2022 ರ ಗುರುವಾರ ರಾತ್ರಿ 8.00 ಗಂಟೆಗೆ ನಿಧನರಾದರು. ಓರ್ವ ಪುತ್ರ, ಓರ್ವ ಪುತ್ರಿ, ಮೊಮ್ಮಕ್ಕಳು, ಗಿರಿ ಮೊಮ್ಮಕ್ಕಳು ಸೇರಿದಂತೆ ಅಪಾರ ಬಂಧು ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯು ದಿನಾಂಕ: 12.8.2022ರ ಶುಕ್ರವಾರ ಮಧ್ಯಾಹ್ನ 12 ಗಂಟೆಗೆ ಬಸವನಾಳು ಗ್ರಾಮದ ಮೃತರ ಜಮೀನಿನಲ್ಲಿ ನೆರವೇರಲಿದೆ.

### ಕಾಶೀಪುರದ ನೀಲಪ್ಪ ನಿಧನ



ದಾವಣಗೆರೆ ನಗರವಾಣಿ ದಿನಪತ್ರಿಕೆಯ ಮುದ್ರಕರಾದ ಎಸ್.ಎನ್.ಮಹೇಶ್ ಅವರ ತಂದೆ ಕಾಶೀಪುರದ ನೀಲಪ್ಪ (75) ಅವರು ದಿನಾಂಕ: 11.8.2022 ರ ಗುರುವಾರ ಮಧ್ಯಾಹ್ನ ನಿಧನರಾದರು. ಮಹೇಶ್ ಸೇರಿದಂತೆ ಇಬ್ಬರು ಪುತ್ರರು, ಇಬ್ಬರು ಪುತ್ರಿಯರು, ಅಳಿಯಂದಿರು, ಸೊಸೆಯಂದಿರು, ಮೊಮ್ಮಕ್ಕಳು ಹಾಗೂ ಅಪಾರ ಬಂಧು ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯು ದಿನಾಂಕ: 12.8.2022ರ ಶುಕ್ರವಾರ ಬೆಳಿಗ್ಗೆ 10 ಗಂಟೆಗೆ ಮೃತರ ಕಾಶೀಪುರ ಗ್ರಾಮದಲ್ಲಿ ನೆರವೇರಲಿದೆ.

### ಹೆಚ್. ಚಂದ್ರಪ್ಪ ನಿಧನ
Rtd. AEE BESCOM



ಶಿವಕುಮಾರಸ್ವಾಮಿ ಬಡಾವಣೆ, ದಾವಣಗೆರೆ ವಾಸಿಯಾದ **ಶ್ರೀ ಹೆಚ್. ಚಂದ್ರಪ್ಪ** (79) Rtd. AEE BESCOM ಇವರು, **ದಿನಾಂಕ : 11.08.2022ರ ಗುರುವಾರ ಬೆಳಿಗ್ಗೆ 8.30 ಗಂಟೆಗೆ** ನಿಧನರಾಗಿರುತ್ತಾರೆ. ಪತ್ನಿ, ನಾಲ್ಕು ಜನ ಗಂಡು ಮಕ್ಕಳು ಹಾಗೂ ಅಪಾರ ಬಂಧುಗಳನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯನ್ನು **ದಿನಾಂಕ 12.08.2022ರ ಶುಕ್ರವಾರ ಮಧ್ಯಾಹ್ನ 12.30 ಗಂಟೆಗೆ, ಚಂದ್ರಗಿರಿ, ಹಿರಿಯೂರು ತಾ., ಚಿತ್ರದುರ್ಗ ಜಿಲ್ಲೆಯಲ್ಲಿ** ನೆರವೇರಿಸಲಾಗುವುದು.

**97319 99629, 98445 00555**

# ಎ.ಸಿ.ಬಿ. ರದ್ದು

**(1ನೇ ಪುಟದಿಂದ)** ಶಿವಕುಮಾರ್ ಹೇಳಿದ್ದಾರೆ. ಲೋಕಾಯುಕ್ತ ಪ್ರಬಲಗೊಳಿಸಬೇಕೆಂದು ಕೋರ್ಟ್ ಹೇಳಿದೆ. ನ್ಯಾಯಾಲಯದ ಹೇಳಿಕೆಗೆ ನಾವು ಗೌರವಿಸುತ್ತಿದ್ದು, ನ್ಯಾಯಾಲಯದ ತೀರ್ಪಿಗೆ ನಾವೆಲ್ಲ ಬದ್ಧರಿದ್ದೇವೆ ಎಂದೂ ಅವರು ಹೇಳಿದ್ದಾರೆ.

**ಪ್ರತಿಕ್ರಿಯಿಸದ ಸಿದ್ದರಾಮಯ್ಯ :** ಹೈಕೋರ್ಟ್ ಎಸಿಬಿ ರದ್ದುಗೊಳಿಸಿರುವ ವಿಚಾರದ ಕುರಿತು ಆದೇಶವನ್ನು ಇನ್ನು ನಾನು ನೋಡಿಲ್ಲ. ಆ ಆದೇಶವನ್ನು ನೋಡಿದ ನಂತರ ಪೂರ್ಣ ಪ್ರಮಾಣದಲ್ಲಿ ಪ್ರತಿಕ್ರಿಯಿಸುತ್ತೇವೆ ಎಂದು ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ತಿಳಿಸಿದರು.

ಲೋಕಾಯುಕ್ತದ ಬೇರ್ಪಡಿಸಿ ಎಸಿಬಿ ರಚಿಸಿದ್ದೆವು. ಹೈಕೋರ್ಟ್ ತೀರ್ಮಾನ ಗೌರವಿಸುತ್ತೇವೆ. ಆದೇಶ ಏನಿದೆ ಎನ್ನುವುದನ್ನು ನೋಡಿಲ್ಲ. ಆದೇಶ ನೋಡಿದ ನಂತರ ಪ್ರತಿಕ್ರಿಯಿಸುತ್ತೇನೆ ಎಂದವರು ಹೇಳಿದ್ದಾರೆ.

# ವಾರ್ಡನ್ ವಿರುದ್ಧ ನಿಲಯದ ವಿದ್ಯಾರ್ಥಿಗಳ ಅಸಮಾಧಾನ

ದಾವಣಗೆರೆ, ಆ.11- ಊಟ ಸರಿ ಇಲ್ಲ ಎಂದು ಆರೋಪಿಸಿ ವಿದ್ಯಾರ್ಥಿ ನಿಲಯದ ವಾರ್ಡನ್ ವಿರುದ್ಧ ನಿಲಯದ ವಿದ್ಯಾರ್ಥಿಗಳು ಪ್ರತಿಭಟನೆ ನಡೆಸಿರುವ ಘಟನೆ ಇಂದು ರಾತ್ರಿ ನಗರದ ಸರಸ್ವತಿ ನಗರದಲ್ಲಿರುವ ಸಮಾಜ ಕಲ್ಯಾಣ ಇಲಾಖೆ ಬಾಲಕರ ವಿದ್ಯಾರ್ಥಿ ನಿಲಯದಲ್ಲಿ ಜರುಗಿದೆ.

ಊಟ ಸರಿ ಇಲ್ಲ ಎಂದು ಹೇಳಿ ವಾರ್ಡನ್ ಜೊತೆ ಈ ನಿಲಯದ ವಿದ್ಯಾರ್ಥಿಗಳು ಜಗಳಕ್ಕೆ ಇಳಿದಿದ್ದರು ಎನ್ನಲಾಗಿದೆ. ಹಲ್ಲೆ ನಡೆಸಿರುವುದಾಗಿ ಆರೋಪಿಸಿ ನಿಲಯದ ವಾರ್ಡನ್ ವಿರುದ್ಧ ಪ್ರತಿಭಟನಾ ನಿರತ ವಿದ್ಯಾರ್ಥಿಗಳು ಅಸಮಾಧಾನ ವ್ಯಕ್ತಪಡಿಸಿದ್ದಾರೆ.

ಸಮಾಜ ಕಲ್ಯಾಣ ಇಲಾಖೆ ಅಧಿಕಾರಿಗಳು ಸ್ಥಳಕ್ಕೆ ಬರುವಂತೆ ವಿದ್ಯಾರ್ಥಿಗಳು ಪಟ್ಟುಹಿಡಿದಿದ್ದರು. ಸ್ಥಳಕ್ಕಾಗಮಿಸಿದ ಕೆಟಿಜೆ ನಗರ ಠಾಣೆ ಪೊಲೀಸರು ವಿದ್ಯಾರ್ಥಿಗಳಿಗೆ ತಿಳಿ ಹೇಳಿ ಪರಿಸ್ಥಿತಿ ಹತೋಟಿಗೆ ತಂದು ಹಾಸ್ಟೆಲ್ ಒಳಗೆ ವಿದ್ಯಾರ್ಥಿಗಳನ್ನು ಕಳುಹಿಸಿದ್ದಾರೆ.

ಘಟನಾ ಸ್ಥಳಕ್ಕಾಗಮಿಸಿರುವ ಸಮಾಜ ಕಲ್ಯಾಣಾಧಿಕಾರಿ ರೇಷ್ಮಾ ಕೌಸರ್ ಅವರು, ಪ್ರತಿಭಟನಾ ನಿರತ ವಿದ್ಯಾರ್ಥಿಗಳ ಅಹವಾಲು ಆಲಿಸಿ, ನಾಳೆ ಬೆಳಗ್ಗೆ ಸಮಸ್ಯೆ ಬಗ್ಗೆ ಅವಲೋಕಿಸಿ ಮುಂದೆ ಸೂಕ್ತ ತೀರ್ಮಾನ ಕೈಗೊಳ್ಳುವುದಾಗಿ ಸಮಾಧಾನ ಪಡಿಸಿದ್ದಾರೆ. ನಿಲಯದ ಕೆಲ ವಿದ್ಯಾರ್ಥಿಗಳು ಹೊರಗಿನಿಂದ ತಮ್ಮ ಸ್ನೇಹಿತರ ಕರೆತಂದು ಊಟೋಪಚಾರ ನೀಡುವಂತೆ ಒತ್ತಡ ಹೇರುತ್ತಿದ್ದಾರೆ. ಹೆದರಿಸಿ, ಬೆದರಿಸುವ ಕೆಲಸ ಮಾಡುತ್ತಿದ್ದಾರೆ ಎಂಬುದಾಗಿ ನಿಲಯದ ವಾರ್ಡನ್ ದೂರಾಗಿದೆ.

# ಜನಸಾಮಾನ್ಯರ ಮನಸ್ಸನ್ನು ಸೆಳೆಯುವ ಅಂಶ ಇರುವುದು ಕಲೆಗೆ ಮಾತ್ರ

**(1ನೇ ಪುಟದಿಂದ)** ಕಂಡು ನಮಗೆ ಸಂತೋಷ ತಂದಿದೆ ಮತ್ತು ಅರ್ಥಪೂರ್ಣವಾಗಿದೆ ಎಂದರು.

ವಿಶ್ವಬಂಧು ಮರುಳಸಿದ್ದ ಅವರ ಜೀವನ ಸಂದೇಶದ ಎಲ್ಲಾ ವೀರಗಾಸೆಯ ಹಾಡುಗಳನ್ನು ಸಂಭಾಷಣೆಗಳನ್ನು ಕ್ರೋಢೀಕರಿಸಿ ಒಂದು ಆಕರ ಗ್ರಂಥವಾಗಿ ಹೊರತಂದು ಬೃಹನ್ಮಠದಿಂದ ಮುದ್ರಣ ಮಾಡಿ ಹೊರ ತಂದು ಮುಂದಿನ ತಲೆಮಾರಿಗೆ ಸಹಕರಿಸುವುದಕ್ಕೆ ಅನುಕೂಲವಾಗುತ್ತದೆ

ಕರ್ನಾಟಕ ಜಾನಪದ ವಿಶ್ವವಿದ್ಯಾಲಯ ಕುಲಪತಿಗಳಾದ ಟಿ.ಎಂ.ಭಾಸ್ಕರ್ ಅವರು ಮಾತನಾಡಿ, ಈ ಸಮಾರಂಭವು ಗುರುಕುಲದ ದೇವರ ಮಂದಿರದಂತಿದೆ. ಈ ಮಂದಿರದಲ್ಲಿ ವಿದ್ಯಾರ್ಥಿಗಳು ದೇವರುಗಳು ಇದ್ದ ಹಾಗೆ ಭಾಸವಾಗುತ್ತಿದೆ. ನಾಡಿನ ಅನೇಕ ವಿಶ್ವವಿದ್ಯಾಲಯಗಳಲ್ಲಿ ಜಾನಪದ ಕಂಪನ್ನು, ಸೊಗಡನ್ನು ಬಿತ್ತರಿಸಿದ, ಧಾರೆಎರೆದ ಕೀರ್ತಿ ನಮ್ಮ ಬಸವರಾಜ ನೆಲ್ಲಿಸರ ಅವರಿಗೆ ಸಲ್ಲುತ್ತದೆ. ನಾಡಿನ ಜನತೆಯ ಹೃನ್ಮನಗಳಲ್ಲಿ ಸದಾ ಹಸಿರಾಗಿರುವ ಡಾ. ಶಿವಮೂರ್ತಿ ಶಿವಾಚಾರ್ಯ ಮಹಾಸ್ವಾಮಿಗಳವರು ಬೃಹನ್ಮಠದಲ್ಲಿ ಮಾಡಿದ ಬಹಳ ದೊಡ್ಡ ಕಾರ್ಯವೆಂದರೆ, ಕೆರೆಗಳಿಗೆ ನೀರು ತುಂಬಿಸುವುದು ಹಾಗೂ ಬಡ ಕುಟುಂಬಗಳು ಮದ್ಯಪಾನ ನಿರ್ಮೂಲನೆ ಆಗಬೇಕು ಹಾಗೂ ಮುಕ್ತವಾಗಬೇಕು ಎಂದು ಕನಸು ಕಂಡವರು.

ವಿಜ್ಞಾನ, ತಂತ್ರಜ್ಞಾನ ಸಂದರ್ಭದಲ್ಲಿ ಕಲಾ ಪ್ರಪಂಚವನ್ನು ಗ್ರಾಮೀಣ ಭಾಗದಲ್ಲಿ ವೈವಿಧ್ಯಮಯವಾಗಿ ಬಿಂಬಿಸಿದ ಕಲಾವಿದರನ್ನು ಈ ಸಂದರ್ಭದಲ್ಲಿ ನಾನು ಅಭಿನಂದಿಸುತ್ತೇನೆ.

12ನೇ ಶತಮಾನದ ಶಿವಶರಣರ ವಚನಗಳನ್ನು ಸರಳವಾಗಿ, ಸುಲಲಿತವಾಗಿ ಪ್ರದರ್ಶಿಸುವ ಮೂಲಕ ಕಲಾವಿದರು ನಮ್ಮ ವಿದ್ಯಾರ್ಥಿಗಳನ್ನು ಮನಸೂರೆಗೊಳಿಸಿರುವುದು ಸಂತೋಷವಾಗಿದೆ ಎಂದರು.

ಶಂಕರಘಟ್ಟ ಕುವೆಂಪು ವಿಶ್ವವಿದ್ಯಾಲಯದ ಜಾನಪದ ವಿದ್ವಾಂಸ ಬಸವರಾಜ ನೆಲ್ಲಿಸರ ಮಾತನಾಡಿ, ಸಿರಿಗೆರೆಯಲ್ಲಿ ಶಿಕ್ಷಣದ ಜೊತೆಗೆ ಸಂಸ್ಕಾರ ಸಿಗುವಂತಹ ಕೆಲಸ ಆಗುತ್ತಿದೆ. ನಮ್ಮ ವಿದ್ಯಾರ್ಥಿಗಳು ಮುಂದಿನ ದಿನಗಳಲ್ಲಿ ಕಲೆಯನ್ನು ಆಸ್ವಾದಿಸುವ ಪ್ರಜೆಗಳಾಗದೆ, ಅವುಗಳನ್ನು ಉಳಿಸಿ, ಬೆಳೆಸುವ ಕಾರ್ಯ ಆಗಬೇಕು ಎಂದರು.

ಈ ಸಂದರ್ಭದಲ್ಲಿ ತರಳಬಾಳು ಜಗದ್ಗುರು ವಿದ್ಯಾಸಂಸ್ಥೆಯ ಪ್ರಧಾನ ಕಾರ್ಯದರ್ಶಿ ಎಸ್.ಬಿ. ರಂಗನಾಥ್ ಹಾಗೂ ಆಡಳಿತಾಧಿಕಾರಿ ಎಚ್.ವಿ. ವಾಮದೇವಪ್ಪ ಹಾಗೂ ಪುಣೆಯ ರೋಬೋಟಿಕ್ ಇಂಜಿನಿಯರ್ ಸುಧೀರ್ ದಂಪತಿ, ಶಾಲಾ-ಕಾಲೇಜುಗಳ ಪ್ರಾಚಾರ್ಯರು, ಉಪನ್ಯಾಸಕರು, ಮುಖ್ಯಶಿಕ್ಷಕರು, ಶಿಕ್ಷಕರು ಹಾಗೂ ವಿದ್ಯಾರ್ಥಿಗಳು ಇದ್ದರು.

ಶ್ರೀ ವೀರಭದ್ರೇಶ್ವರ ಭಜನಾ ತಂಡದವರು ಭಜನೆ ನಡೆಸಿಕೊಟ್ಟರು. ಕೊಡ್ಲೂರು ಶ್ರೀ ವೀರಭದ್ರೇಶ್ವರ ವೀರಗಾಸೆ ತಂಡ, ಶ್ರೀ ಆಂಜನೇಯ ವೀರಗಾಸೆ ತಂಡ ರಂಗಾಪುರ, ಶಿವ ವೀರಗಾಸೆ ತಂಡ ಬಸ್ತಿಹಳ್ಳಿ, ಶ್ರೀ ವೀರಭದ್ರೇಶ್ವರ ವೀರಗಾಸೆ ತಂಡ ಕುಂಕುವ ಇವರು ಕಾರ್ಯಕ್ರಮದಲ್ಲಿ ವೀರಗಾಸೆ ಪ್ರದರ್ಶಿಸಿದರು ಮತ್ತು ಪ್ರಮಾಣ ಪತ್ರವನ್ನು ಸ್ವೀಕರಿಸಿದರು.

# ಸರ್ಕಾರಿ ಕಚೇರಿಗಳಲ್ಲಿ ಸ್ವ-ಸಹಾಯ ಗುಂಪುಗಳ ಉತ್ಪನ್ನ ಖರೀದಿಗೆ ಕ್ರಮ



## ಜಿಲ್ಲಾ ಮಟ್ಟದ ಕಾವಲು ಸಮಿತಿ ಸಭೆಯಲ್ಲಿ ಸಿಇಓ ಡಾ.ಎ.ಚನ್ನಪ್ಪ

ದಾವಣಗೆರೆ ಆ.11- ಸ್ತ್ರೀಶಕ್ತಿ ಗುಂಪುಗಳು ತಯಾರಿಸುವ ಉತ್ಪನ್ನಗಳನ್ನು ಸರ್ಕಾರಿ ಕಚೇರಿಗಳು ಮತ್ತು ಹಾಸ್ಟೆಲ್‌ಗಳಲ್ಲಿ ಬಳಸಲು ಅಗತ್ಯ ಕ್ರಮ ಕೈಗೊಳ್ಳಲಾಗುವುದು ಎಂದು ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಡಾ. ಎ.ಚನ್ನಪ್ಪ ಹೇಳಿದರು.

ಬುಧವಾರ ಜಿ.ಪಂ ಸಭಾಂಗಣದಲ್ಲಿ ನಡೆದ ಸ್ತ್ರೀ ಶಕ್ತಿ ಯೋಜನೆ ಹಾಗೂ ಮಹಿಳೆಯರ ಮತ್ತು ಮಕ್ಕಳ ಸಾಗಾಣಿಕೆ ತಡೆಗಟ್ಟುವ ಜಿಲ್ಲಾ ಮಟ್ಟದ ಕಾವಲು ಸಮಿತಿ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಜಿಲ್ಲೆಯಲ್ಲಿ ನೋಂದಾಯಿತ ಸ್ತ್ರೀಶಕ್ತಿ ಸ್ವ-ಸಹಾಯ ಸಂಘಗಳು ಆದಾಯೋತ್ಪನ್ನ ಚಟುವಟಿಕೆಗಳ ಮೂಲಕ ತಯಾರಿಸುವ ಫಿನಾಯಿಲ್, ಹಪ್ಪಳ, ಉಪ್ಪಿನಕಾಯಿ, ಗೊಂಬೆಗಳು, ಅಗರಬತ್ತಿ ಸೇರಿದಂತೆ, ವಿವಿಧ ವಸ್ತುಗಳನ್ನು ಸರ್ಕಾರಿ ಕಚೇರಿಗಳು ಮತ್ತು ಹಾಸ್ಟೆಲ್‌ಗಳಲ್ಲಿ ಬಳಸಲು ಖರೀದಿಸಲು ಆದೇಶಿಸಲಾಗುವುದು. ಮಹಾನಗರ ಪಾಲಿಕೆ ವ್ಯಾಪ್ತಿಯ ರೈಲ್ವೆ ಸ್ಟೇಷನ್ ಮತ್ತು ಬಸ್‌ಸ್ಟ್ಯಾಂಡ್‌ಗಳಲ್ಲಿ ಮಾರಾಟಕ್ಕೆ ಅನುಕೂಲವಾಗುವಂತೆ ಮಳಿಗೆ ಒದಗಿಸಲಾಗುವುದು ಎಂದರು.

ಮಹಿಳೆಯರ ಮತ್ತು ಮಕ್ಕಳ ಕಳ್ಳ ಸಾಗಾಣಿಕೆ ಚಟುವಟಿಕೆಯು ಕಾನೂನು ಬಾಹಿರವಾಗಿದೆ. ಇದನ್ನು ತಡೆಗಟ್ಟಲು ಸಂಬಂಧಪಟ್ಟ ಅಧಿಕಾರಿಗಳು ಚುರುಕಾಗಿ ಕಾರ್ಯನಿರ್ವಹಿಸಬೇಕು. ಆಸ್ಪತ್ರೆಗಳಲ್ಲಿ ಮಕ್ಕಳ ಕಳ್ಳತನವಾಗುತ್ತಿವೆ, ಈ ಕುರಿತು ಗಂಭೀರವಾಗಿ ಪರಿಶೀಲಿಸಿ ಅಂತಹ ಕೃತ್ಯಗಳಲ್ಲಿ ತೊಡಗಿರುವವರ ಮೇಲೆ ಕಾನೂನು ಕ್ರಮ ಜರುಗಿಸಬೇಕು. ಬೇರೆಯವರ ಮಕ್ಕಳನ್ನು ಬಾಡಿಗೆ ಪಡೆದು ದುರುಪಯೋಗಪಡಿಸಿಕೊಳ್ಳುವ ಮೂಲಕ ಅನೇಕರು ಭಿಕ್ಷಾಟನೆಯಲ್ಲಿ ತೊಡಗಿಕೊಂಡಿರುತ್ತಾರೆ. ಇಂತಹ ವ್ಯಕ್ತಿಗಳ ಕುರಿತು ಕೂಲಂಕುಶವಾಗಿ ಪರಿಶೀಲಿಸಿ ಎಂದರು.

ಸಾಂತ್ವನ ಕೇಂದ್ರಗಳ ಮೂಲಕ ವರದಕ್ಷಿಣೆ ಕಿರುಕುಳ ಮತ್ತು ಕೌಟುಂಬಿಕ ಕಲಹಗಳ ಕುರಿತು ನಗರ ಮತ್ತು ಗ್ರಾಮೀಣ ಪ್ರದೇಶದಲ್ಲಿ ಜರುಗುವ ಸಂತೆಗಳು, ಜಾತ್ರೆ, ಸಭೆ-ಸಮಾರಂಭಗಳಂತಹ ಜನಸಂದಣಿ ಸ್ಥಳಗಳಲ್ಲಿ ಅರಿವು ಮೂಡಿಸುವ ಕಾರ್ಯಕ್ರಮಗಳನ್ನು ಏರ್ಪಡಿಸಬೇಕು. ವರದಕ್ಷಿಣೆ ಕಿರುಕುಳ ಮತ್ತು ಕೌಟುಂಬಿಕ ಕಲಹಗಳ ಪ್ರಕರಣಗಳಲ್ಲಿ ಪೊಲೀಸ್ ಇಲಾಖೆ ಎಫ್.ಐ.ಆರ್ ದಾಖಲಿಸುವ ಮುನ್ನ ಸಾಂತ್ವನ ಕೇಂದ್ರಗಳ ಮುಖಾಂತರ ಸಂಧಾನಕ್ಕೆ ಪ್ರಯತ್ನಿಸಬೇಕು ಎಂದು ಸಲಹೆ ನೀಡಿದರು.

ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯ ಉಪನಿರ್ದೇಶಕರಾದ ವಾಸಂತಿ ಉಪ್ಪಾರ್ ಮಾತನಾಡಿ, ಜಿಲ್ಲೆಯಲ್ಲಿ ಒಟ್ಟು 5,166 ಸ್ತ್ರೀಶಕ್ತಿ ಸ್ವ-ಸಹಾಯ ಗುಂಪುಗಳಿವೆ, ಅದರಲ್ಲಿ 1272 ಪರಿಶಿಷ್ಟ ಜಾತಿ ಮತ್ತು 725 ಪರಿಶಿಷ್ಟ ಪಂಗಡ, 194 ಅಲ್ಪಸಂಖ್ಯಾತ ಹಾಗೂ 2975 ಇತರೆ ವರ್ಗಗಳಿಗೆ ಸೇರಿದ ಸ್ತ್ರೀಶಕ್ತಿ ಸ್ವ-ಸಹಾಯ ಗುಂಪುಗಳಿವೆ. ಅನೇಕ ಸ್ವ-ಸಹಾಯ ಗುಂಪುಗಳ ಸದಸ್ಯರಿಗೆ ಆದಾಯ ಉತ್ಪನ್ನ ಚಟುವಟಿಕೆಗಳ ಕುರಿತು ತರಬೇತಿ ನೀಡಬೇಕಾಗಿದೆ ಎಂದು ಹೇಳಿದರು.

ಹಿರಿಯ ಸಿವಿಲ್ ನ್ಯಾಯಾಧೀಶರು ಹಾಗೂ ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ಪ್ರವೀಣ್ ನಾಯಕ್ ಮಾತನಾಡಿ, ವರದಕ್ಷಿಣೆ ಕಿರುಕುಳ ಮತ್ತು ಕೌಟುಂಬಿಕ ಕಲಹಗಳ ಪ್ರಕರಣಗಳ ಸಂಖ್ಯೆ ಸಾಂತ್ವನ ಕೇಂದ್ರದ ವರದಿಯಲ್ಲಿ ಕಡಿಮೆ ಇದೆ, ಆದರೆ ನ್ಯಾಯಾಲಯದಲ್ಲಿ ಈ ಕುರಿತು ಹೆಚ್ಚಿನ ಪ್ರಕರಣಗಳು ದಾಖಲಾಗುತ್ತಿವೆ. ಜಿಲ್ಲೆಯ ಎಲ್ಲಾ (4ನೇ ಪುಟಕ್ಕೆ)



# ಹರಪನಹಳ್ಳಿ: ತಿರಂಗ ಜಾಗೃತಿ ಜಾಥಾಕ್ಕೆ ಶಾಸಕರ ಚಾಲನೆ

ಹರಪನಹಳ್ಳಿ, ಆ.11- ಸ್ವಾತಂತ್ರ್ಯ ದಿನಾಚರಣೆಯ ಅಮೃತ ಮಹೋತ್ಸವದ ಅಂಗವಾಗಿ ಪಟ್ಟಣದಲ್ಲಿ ಶಾಸಕ ಕರುಣಾಕರ ರೆಡ್ಡಿ ಹರ್ ಘರ್ ತಿರಂಗ ಜಾಗೃತಿ ಜಾಥಾಕ್ಕೆ ಚಾಲನೆ ನೀಡಿದರು. ಪಟ್ಟಣದ ಹರಿಹರ ವೃತ್ತದಿಂದ ಆರಂಭಗೊಂಡ ಜಾಥ ಹೊಸಪೇಟೆ ರಸ್ತೆ ಮೂಲಕ ಪ್ರವಾಸಿ ಮಂದಿರ ವೃತ್ತಕ್ಕೆ ಆಗಮಿಸಿ ಸಭೆ ನಡೆಸಲಾಯಿತು.

ಈ ಸಂದರ್ಭದಲ್ಲಿ ಮಾತನಾಡಿದ ಶಾಸಕರು, ಅನೇಕರ ತ್ಯಾಗ, ಬಲಿದಾನದಿಂದ ದೇಶಕ್ಕೆ ಸ್ವಾತಂತ್ರ್ಯ ಸಿಕ್ಕಿದೆ, ಇದೀಗ 75 ವರ್ಷ ತುಂಬಿ ಅಮೃತ ಮಹೋತ್ಸವ ಆಚರಿಸಲಾಗುತ್ತದೆ. ದಿನದಿಂದ ದಿನಕ್ಕೆ ಹರಪನಹಳ್ಳಿಯಲ್ಲಿ ಹಬ್ಬದ ವಾತಾವರಣ ನಿರ್ಮಾಣವಾಗುತ್ತಿದೆ. ಜನರು ಹರ್ ಘರ್ ತಿರಂಗದ ಸಂಭ್ರಮದಲ್ಲಿದ್ದಾರೆ ಎಂದು ಸಂತಸ ವ್ಯಕ್ತ ಪಡಿಸಿದರು.

ವಿದ್ಯಾರ್ಥಿಗಳು, ವಿವಿಧ ಇಲಾ ಖೆಯ ಅಧಿಕಾರಿಗಳು, ಸ್ತಬ್ದ ಚಿತ್ರಗಳು, ಹಗಲು ವೇಷಗಾರರು, ಬೊಂಬೆಗಳು, ವಾದ್ಯ ಮೇಳದೊಂದಿಗೆ ಮೆರವಣಿಗೆಯಲ್ಲಿ ಭಾಗವಹಿಸಿದ್ದರು.

ಪುರಸಭಾ ಅಧ್ಯಕ್ಷ ಹರಾಳು ಅಶೋಕ, ಉಪವಿಭಾಗಾಧಿಕಾರಿ ಟಿ.ವಿ.ಪ್ರಕಾಶ್, ಡಿವೈಎಸ್ಪಿ ಹಾಲಮೂರ್ತಿರಾವ್, ತಹಶೀಲ್ದಾರ್ ಡಾ.ಶಿವಕುಮಾರ ಬಿರಾದಾರ, ಸಮಾಜ ಕಲ್ಯಾಣ ಇಲಾಖೆ ಅಧಿಕಾರಿ ರೇಣುಕಾದೇವಿ, ವಲಯ ಅರಣ್ಯಾಧಿಕಾರಿ ಮಲ್ಲಪ್ಪ, ಬಿಸಿಎಂ ಇಲಾಖೆಯ ಭೀಮಪ್ಪ, ಬಿ.ಎಚ್.ಚಂದ್ರಪ್ಪ, ಕ್ಷೇತ್ರ ಶಿಕ್ಷಣಾಧಿಕಾರಿ ಬಸವರಾಜಪ್ಪ, ಸಹಾಯಕ ಕೃಷಿ ನಿರ್ದೇಶಕ ಮಂಜುನಾಥ ಗೊಂದಿ, ತಾಪಂ ಇಒ ಪ್ರಕಾಶನಾಯ್ಕ, ಬಿಜೆಪಿ ಎಸ್.ಟಿ. ಘಟಕದ ಅಧ್ಯಕ್ಷ ಟಿ.ಮನೋಜ್, ಮುಖಂಡರಾದ ವಿಷ್ಣುವರ್ಧನ ರೆಡ್ಡಿ, ಕಲ್ಲೇರ ಬಸವರಾಜ, ಆರ್.ಲೋಕೇಶ್, ಬಾಗಳಿ ಕೊಟ್ರೇಶಪ್ಪ, ಎಂ.ಮಲ್ಲೇಶ್, ಮಂಜುನಾಥ್ ಗಿರಜ್ಜಿ, ಎಂ.ಪ್ರಾಣೇಶ, ದಾದಾಪುರ ಶಿವಾನಂದ, ಕೆಂಗಳ್ಳಿ ಪ್ರಕಾಶ ವೀರೇಶ್‌ಶೆಟ್ಟಿ ಹಾರಕನಾಳು, ಪೂರ್ಯನಾಯ್ಕ, ಕಣಿವಿಹಳ್ಳಿ ಮಂಜುನಾಥ, ಗುಂಡಿ ಮಂಜುನಾಥ, ಮತ್ತಿಹಳ್ಳಿ ನಾಗರಾಜ ಸೇರಿದಂತೆ ಇತರರು ಇದ್ದರು.

# ಜಿಗಳಿಯಲ್ಲಿ ದೇವಸ್ಥಾನ ಸ್ವಚ್ಛಗೊಳಿಸಿದ ಮಹಿಳೆಯರು



ಮಲೇಬೆನ್ನೂರು, ಆ.11- ಸ್ವಾತಂತ್ರ್ಯದ ಅಮೃತ ಮಹೋತ್ಸವದ ಅಂಗವಾಗಿ ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ವತಿಯಿಂದ ಶ್ರದ್ಧಾ ಕೇಂದ್ರಗಳ ಸ್ವಚ್ಛತಾ ಅಭಿಯಾನವನ್ನು ರಾಜ್ಯದ ಎಲ್ಲಾ ಕಡೆ ಹಮ್ಮಿಕೊಳ್ಳಲಾಗಿದೆ ಎಂದು ಯೋಜನೆಯ ಮಲೇಬೆನ್ನೂರು ಯೋಜನಾಧಿಕಾರಿ ವಸಂತ್ ದೇವಾಡಿಗ ತಿಳಿಸಿದರು.

ಜಿಗಳಿ ಗ್ರಾಮದಲ್ಲಿ ಇಂದು ಬೆಳಿಗ್ಗೆ ಶ್ರೀ ರಂಗನಾಥ ಸ್ವಾಮಿ ದೇವಸ್ಥಾನವನ್ನು ಒಳಗಡೆ ಮತ್ತು ಹೊರಗಡೆ ಸ್ವಚ್ಛವಾಗಿ ತೊಳೆದು ಹಾಗೂ ದೇವಸ್ಥಾನದ ಸುತ್ತಲು ಬೆಳೆದಿದ್ದ ಹುಲ್ಲು - ಗಿಡ - ಗಂಟೆಗಳನ್ನು ಸ್ವಚ್ಛ ಮಾಡಿದ ನಂತರ 'ಜನತಾವಾಣಿ'ಯೊಂದಿಗೆ ಮಾತನಾಡಿದರು. ಯೋಜನೆಯ ಸ್ವ-ಸಹಾಯ ಸಂಘಗಳ ಮಹಿಳೆಯರು ಈ ಸ್ವಚ್ಛತಾ ಕಾರ್ಯದಲ್ಲಿ ತೊಡಗಿಕೊಂಡಿದ್ದರು.

ಗ್ರಾಮದ ಮುಖಂಡರಾದ ಗೌಡ್ರ ಬಸವರಾಜಪ್ಪ, ಡಿಸಿಸಿ ಬ್ಯಾಂಕ್ ಮಾಜಿ ಉಪಾಧ್ಯಕ್ಷ ಜಿ.ಆನಂದಪ್ಪ, ಕೆ.ಎಸ್.ನಂದ್ಯೆಪ್ಪ, ಸಿ. ಪರಮೇಶ್ವರಪ್ಪ, ಬಿ.ಹೊನ್ನಾಚಾರಿ, ಮಾಸಡಿ ಬಸವರಾಜ್, ಪತ್ರಕರ್ತ ಪ್ರಕಾಶ್ ಜಿಗಳಿ, ವಲಯ ಮೇಲ್ವಿಚಾರಕಿ ಶ್ರೀಮತಿ ಪದ್ಮಾವತಿ, ಸೇವಾ ಪ್ರತಿನಿಧಿಗಳಾದ ಮಮತಾ, ನಾಗರತ್ನ ಸೇರಿದಂತೆ ಒಕ್ಕೂಟದ ಪದಾಧಿಕಾರಿಗಳು ಭಾಗವಹಿಸಿದ್ದರು.

# ಬಿಜೆಪಿಯಿಂದ ಬೈಕ್ ರ್‍ಯಾಲಿ

(1ನೇ ಪುಟದಿಂದ) ಹೇಳಿದರು. ತಮ್ಮ ವಾರ್ಡ್ ಹಾಗೂ ಬೂತ್ ವ್ಯಾಪ್ತಿಯಲ್ಲಿ ಎಲ್ಲಾ ಮನೆಗಳ ಮೇಲೆ ಆ. 13ರಿಂದ ಮೂರು ದಿನ ತಿರಂಗಾ ಹಾರಾಡುವಂತೆ ಮಾಡಬೇಕು. ರಾಜ್ಯ ಸರ್ಕಾರ ಎರಡು ಕೋಟಿ ಮನೆಗಳ ಮೇಲೆ ರಾಷ್ಟ್ರಧ್ವಜ ಹಾರಿಸುವ ಗುರಿ ಇಟ್ಟುಕೊಂಡಿದ್ದು ಜಿಲ್ಲೆಯಲ್ಲಿ ಎರಡು ಲಕ್ಷ ಜನರ ಮನೆ ಮೇಲೆ ಬಾವುಟ ಹಾರಿಸುವ ಗುರಿ ಇಟ್ಟುಕೊಳ್ಳಲಾಗಿದೆ. ಈ ಗುರಿ ಮುಟ್ಟಲು ಸಹಕರಿಸಬೇಕು ಎಂದರು.

ಆ. 14ರಂದು ಸಂಜೆ 5ಕ್ಕೆ ವಿಭಜನ್ ವಿಭೀಷಿಕ್ ಸ್ಮೃತಿ ದಿವಸ್ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ. ಸ್ವಾತಂತ್ರ್ಯ ದೊರೆತ ನಂತರ ಬ್ರಿಟಿಷರು ಅಖಂಡ ಭಾರತವನ್ನು ಮೂರು ಭಾಗಗಳಾಗಿ ವಿಂಗಡಿಸಿದ ಇತಿಹಾ ಸದ ಘೋರ ಸಂಗತಿಗಳನ್ನು ಇಂದಿನ ಪೀಳಿ ಗೆಗೆ ತಿಳಿಸುವ ಉದ್ದೇಶದಿಂದ ಈ ಕಾರ್ಯ ಕ್ರಮ ನಡೆಸಲಾಗುತ್ತಿದ್ದು, ಮಹಾತ್ಮಗಾಂಧಿ ವೃತ್ತದಿಂದ ಜಯದೇವ ವೃತ್ತದವರೆಗೆ ಮೌನ ಮೆರವಣಿಗೆ ನಡೆಸಲಾಗುವುದು. ಇದನ್ನೂ ಕೂಡ ಯಶಸ್ವಿಗೊಳಿಸಬೇಕು ಎಂದು ಕೋರಿದರು.

ಮೇಯರ್ ಜಯಮ್ಮ ಗೋಪಿನಾಯ್ಕ, ವಿಧಾನಸಭಾ ಮಾಜಿ ಮುಖ್ಯ ಸಚೇತಕ ಎ.ಹೆಚ್ ಶಿವಯೋಗಿಸ್ವಾಮಿ, ದೂಡಾ ಅಧ್ಯಕ್ಷ ಕೆ.ಎಂ ಸುರೇಶ್, ದೂಡಾ ಮಾಜಿ ಅಧ್ಯಕ್ಷರುಗಳಾದ ರಾಜನಳ್ಳಿ ಶಿವಕುಮಾರ್, ಯಶವಂತರಾವ್ ಜಾಧವ್, ಪಾಲಿಕೆ ಮಾಜಿ ಮೇಯರ್ ಅಜಯ್ ಕುಮಾರ್, ಸದಸ್ಯರುಗಳಾದ ಕೆ.ಎಂ ವೀರೇಶ್, ಸೋಗಿ ಶಾಂತಕುಮಾರ್, ಜಿಲ್ಲಾ ಯುವಮೋರ್ಚಾ ಅಧ್ಯಕ್ಷರಾದ ಡಿ.ಎಲ್. ಶಿವಪ್ರಕಾಶ್, ಜಿಲ್ಲಾ ಉಪಾಧ್ಯಕ್ಷ ಶ್ರೀನಿವಾಸ ದಾಸಕರಿಯಪ್ಪ ಸೇರಿದಂತೆ ಯಲ್ಲೇಶ್, ರಾಜು ನೀಲಗುಂದ, ಶಾಮ ನೂರು ರಾಜು, ಬಸವರಾಜಯ್ಯ, ಹೆಚ್.ಪಿ , ವಿಶ್ವಾಸ್, ಕೊಟ್ರೇಶ್ ಗೌಡ, ಮಂಜಾನಾಯ್ಕ, ಪಿ.ಎಸ್ ಬಸವರಾಜ್, ಗುರುಪ್ರಸಾದ್, ಹದಡಿ ಕುಮಾರ್, ರಮೇಶ್, ರವಿಕುಮಾರ್, ಬಿ.ಎಸ್. ಜಗದೀಶ್ ಇನ್ನೂ ಮುಂತಾದವರು ಉಪಸ್ಥಿತರಿದ್ದರು.

## ರೇಬೀಸ್ ವಿರೋಧಿ ಮಾಸಾಚರಣೆ

ದಾವಣಗೆರೆ, ಆ.11- ಸ್ವಾತಂತ್ರ್ಯದ ಅಮೃತ ಮಹೋತ್ಸವದ ಅಂಗವಾಗಿ ನಾಡಿದ್ದು ದಿನಾಂಕ 13 ರಿಂದ ಸೆ.12 ರವರೆಗೆ ಪಾಲಿ ಕ್ಲಿನಿಕ್(ಜಿಲ್ಲಾ ಪಶು ಆಸ್ಪತ್ರೆ) ಆವರಣದಲ್ಲಿ ರೇಬೀಸ್ ವಿರೋಧಿ ಮಾಸಾಚರಣೆ ನಡೆಯಲಿದೆ.

ನಾಯಿ-ಬೆಕ್ಕುಗಳಿಗೆ ಉಚಿತ ರೇಬೀಸ್ ಲಸಿಕಾ ಕಾರ್ಯಕ್ರಮವನ್ನು ಬೆಳಿಗ್ಗೆ 9 ರಿಂದ ಸಂಜೆ 4 ರವರೆಗೆ ಹಮ್ಮಿಕೊಳ್ಳಲಾಗಿದೆ ಎಂದು ಪಶುಪಾಲನಾ ಮತ್ತು ಪಶುವೈದ್ಯಕೀಯ ಸೇವಾ ಇಲಾಖೆ ಉಪನಿರ್ದೇಶಕರು ತಿಳಿಸಿದ್ದಾರೆ.

# ಜಿ. ದ್ಯಾಮಣ್ಣನವರ ಸಾಮಾಜಿಕ ಸೇವೆ ಮಾದರಿ

## ಹರಿಹರ : ಕಾಳಿದಾಸ ವಿದ್ಯಾಸಂಸ್ಥೆಯಲ್ಲಿ ನಡೆದ ಶ್ರದ್ಧಾಂಜಲಿ ಸಭೆಯಲ್ಲಿ ಸ್ಮರಣೆ



ಹರಿಹರ, ಆ. 11- ಕೊಕ್ಕನೂರಿನ ಜಿ. ದ್ಯಾಮಣ್ಣ ಅವರು ಇಳಿವಯಸ್ಸಿನಲ್ಲೂ ಶಿಕ್ಷಣ, ರಾಜಕೀಯ ಹಾಗೂ ಸಮಾಜ ಸೇವೆಯಲ್ಲಿ ತಮ್ಮನ್ನು ತಾವು ತೊಡಗಿಸಿಕೊಳ್ಳುವ ಮೂಲಕ ನಮ್ಮೆಲ್ಲರಿಗೂ ಮಾದರಿಯಾಗಿದ್ದರು ಎಂದು ನಿವೃತ್ತ ಪೊಲೀಸ್ ಅಧಿಕಾರಿ ಹಾಗೂ ಕಾಳಿದಾಸ ವಿದ್ಯಾಸಂಸ್ಥೆಯ ಅಧ್ಯಕ್ಷರೂ ಆದ ಕುಣೆಬೆಳಕೆರೆ ದೇವೇಂದ್ರಪ್ಪ ಸ್ಮರಿಸಿದರು.

ನಗರದ ಶ್ರೀ ಕಾಳಿದಾಸ ಎಜುಕೇಷನಲ್ ಅಂಡ್ ಕಲ್ಚರಲ್ ಟ್ರಸ್ಟ್ ವತಿಯಿಂದ ಕಾಳಿದಾಸ ಶಾಲೆಯಲ್ಲಿ ಸಂಸ್ಥೆಯ ಕಾರ್ಯಾಧ್ಯಕ್ಷ ಕೊಕ್ಕನೂರಿನ ಜಿ. ದ್ಯಾಮಣ್ಣ ಅವರಿಗೆ ಹಮ್ಮಿಕೊಂಡಿದ್ದ ಶ್ರದ್ಧಾಂಜಲಿ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಜಿ. ದ್ಯಾಮಣ್ಣ ಅವರು ಕೊಕ್ಕನೂರಿನ ಶ್ರೀ ಆಂಜನೇಯ ಸ್ವಾಮಿ ದೇವಸ್ಥಾನ ಸೇವಾ ಸಮಿತಿಯ ಸದಸ್ಯರಾಗಿ, ಕೊಕ್ಕನೂರಿನ ರೇವಣಸಿದ್ದೇಶ್ವರ ವಿದ್ಯಾಸಂಸ್ಥೆಯ ಅಧ್ಯಕ್ಷರಾಗಿ, ಮಲೇಬೆನ್ನೂರಿನ ಶಿವ ವಿವಿಧೋದ್ದೇಶ ಸಹಕಾರ ಸಂಘದ ನಿರ್ದೇಶಕರಾಗಿ ದಾವಣಗೆರೆ ಜಿ.ಪಂ. ಅಧ್ಯಕ್ಷರಾಗಿ ಮತ್ತು ಜಿಲ್ಲಾ ಕುರುಬ ಸಮಾಜದ ಅಧ್ಯಕ್ಷರಾಗಿ ಉತ್ತಮ ಸೇವೆ ಸಲ್ಲಿಸಿದ್ದಾರೆ ಎಂದು ಶ್ಲಾಘಿಸಿದರು.

ಜಿ.ಪಂ. ಮಾಜಿ ಸದಸ್ಯರೂ ಆದ ವಿದ್ಯಾಸಂಸ್ಥೆಯ ಕಾರ್ಯದರ್ಶಿ ಎಂ. ನಾಗೇಂದ್ರಪ್ಪ ಮಾತನಾಡಿದರು.

ವಿಟಿಯು ನಿವೃತ್ತ ಕುಲಪತಿ ಡಾ. ಹೆಚ್. ಮಹೇಶಪ್ಪ, ನಗರಸಭೆ ಮಾಜಿ ಅಧ್ಯಕ್ಷ ರೇವಣಸಿದ್ದಪ್ಪ, ತಾ.ಪಂ. ಮಾಜಿ ಅಧ್ಯಕ್ಷರಾದ ಎಸ್.ಜಿ. ಪರಮೇಶ್ವರಪ್ಪ, ವಿದ್ಯಾಸಂಸ್ಥೆಯ ಕೋಶಾಧ್ಯಕ್ಷ ಐರಣಿ ಅಣ್ಣಪ್ಪ, ಮುಖಂಡರಾದ ಕುಂಬಳೂರು ವಿರೂಪಾಕ್ಷಪ್ಪ, ಗಂಗನರಸಿ ನಾಗೇಂದ್ರಪ್ಪ, ಸಿ.ಎನ್. ಹುಲಗೇಶ್, ನಂದಿಗಾವಿ ಶ್ರೀನಿವಾಸ್, ವಿವೇಕಾನಂದ ಸ್ವಾಮಿ, ಕೆ.ಬಿ. ರಾಜಶೇಖರ್, ಕೆ.ಪಿ. ಗಂಗಾಧರ್, ನಿವೃತ್ತ ಇಂಜಿನಿಯರ್ ರಂಗನಾಥ್, ಎಕ್ಕೆಗೊಂದಿ ನಾಗರಾಜ್, ಪಾಲಾಕ್ಷಪ್ಪ, ಕಮಲಾಪುರ ಷಣ್ಮುಖಪ್ಪ, ಪೊಲೀಸ್ ಕರಿಯಪ್ಪ, ರಾಜನಹಳ್ಳಿ ಗುರುರಾಜ್, ಜಿ.ಡಿ. ರಾಜಪ್ಪ, ದಾದಾಪೀರ್, ಹರಿಹರದ ಗುತ್ತೆಪ್ಪ, ಕೆ.ಹೆಚ್. ನಿಜಲಿಂಗಪ್ಪ ಮತ್ತು ಇತರರು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.

## ನಾರಿ ಶಕ್ತಿ ಪುರಸ್ಕಾರ

ದಾವಣಗೆರೆ, ಆ.11- ಸಮಾಜದಲ್ಲಿನ ಮಹಿಳೆಯರಿಗಾಗಿ ಶ್ರಮಿಸುತ್ತಿರುವ ನಾರಿಯರಿಗೆ ಮಹಿಳಾ ಮತ್ತು ಮಕ್ಕಳ ಅಭಿವೃದ್ದಿ ಇಲಾಖೆಯಿಂದ ಕೇಂದ್ರ ಸರ್ಕಾರವು ನಾರಿಶಕ್ತಿ ಪುರಸ್ಕಾರವನ್ನು ನೀಡಲು ಅರ್ಜಿ ಆಹ್ವಾನಿಸಲಾಗಿದೆ.

ನಾರಿಶಕ್ತಿ ಪುರಸ್ಕಾರಕ್ಕಾಗಿ ಆನ್‌ಲೈನ್ ಮೂಲಕ www.awards.gov.in ನಲ್ಲಿ ಅರ್ಜಿ ಸಲ್ಲಿಸಬಹುದು. ಅರ್ಜಿ ಸಲ್ಲಿಸಲು ಅ.31 ಕೊನೆ ದಿನ. ವಿವರಕ್ಕೆ ಉಪ ನಿರ್ದೇಶಕ ಕಚೇರಿ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ದೂರವಾಣಿ 08192-264056ನ್ನು ಸಂಪರ್ಕಿಸಬಹುದು.

# ನಗರದಲ್ಲಿ ಇಂದು ಶ್ರೀ ಸೇವಾಲಾಲ್ ಪತ್ತಿನ ಸಹಕಾರ ಸಂಘದ ಉದ್ಘಾಟನೆ

ದಾವಣಗೆರೆ, ಆ. 11- ನಗರದ ಶ್ರೀ ಸೇವಾಲಾಲ್ ಸಮುದಾಯ ಭವನದಲ್ಲಿ ನಾಳೆ ದಿನಾಂಕ 12 ರಂದು ಶುಕ್ರವಾರ ಬೆಳಿಗ್ಗೆ 10.30 ಕ್ಕೆ ಶ್ರೀ ಸೇವಾಲಾಲ್ ಪತ್ತಿನ ಸಹಕಾರ ಸಂಘದ ಉದ್ಘಾಟನಾ ಸಮಾರಂಭ ನಡೆಯಲಿದೆ ಎಂದು ಸಂಘದ ಅಧ್ಯಕ್ಷ ಎನ್. ಹನುಮಂತನಾಯ್ಕ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ಮೇಯರ್ ಜಯಮ್ಮ ಗೋಪಿನಾಯ್ಕ ಕಾರ್ಯಕ್ರಮ ಉದ್ಘಾಟಿಸಲಿದ್ದು, ಮುಖ್ಯ ಅತಿಥಿಗಳಾಗಿ ಜಿ.ಎಂ. ಸಿದ್ದೇಶ್ವರ, ಶಾಮನೂರು ಶಿವಶಂಕರಪ್ಪ, ಎಸ್.ಎ. ರವೀಂದ್ರನಾಥ್, ಎಂ. ಬಸವರಾಜನಾಯ್ಕ, ವೇಣುಗೋಪಾಲರೆಡ್ಡಿ, ಕೆ.ಎಂ. ಸುರೇಶ್, ತಾವರ್‍ಯನಾಯ್ಕ, ಮಹೇಶ್ವರಪ್ಪ, ಹೆಚ್.ಎಸ್. ಸತೀಶ್ ಕುಮಾರ್, ಮಂಜ್ಯಾನಾಯ್ಕ, ಡಿ.ಎಲ್. ಶಿವಪ್ರಕಾಶ್, ವೀರೇಶ್ ಪೈಲ್ವಾನ್, ಮಾರುತಿನಾಯ್ಕ, ವೀರೇಶನಾಯ್ಕ, ಶಂಕರ ಸಿಂಗ್ ಮತ್ತಿತರರು ಭಾಗವಹಿಸಲಿದ್ದಾರೆ.

## ಇಂದು ವಿದ್ಯಾರ್ಥಿ ಸಂಘದ ಉದ್ಘಾಟನೆ

ದಾವಣಗೆರೆಯ ಅಕ್ಕಮಹಾದೇವಿ ಬಾಲಕಿಯರ ಪ್ರೌಢಶಾಲೆಯ ವಿದ್ಯಾರ್ಥಿ ಸಂಘದ ಉದ್ಘಾಟನೆ ಇಂದು ಮಧ್ಯಾಹ್ನ 12 ಗಂಟೆಗೆ ನಡೆಯಲಿದೆ.

ಅಧ್ಯಕ್ಷತೆಯನ್ನು ಜಿ. ಸುರೇಶನಾಯ್ಕ್ ವಹಿಸುವರು. ವಿದ್ಯಾರ್ಥಿ ಸಂಘದ ಉದ್ಘಾಟನೆಯನ್ನು ಹೆಚ್.ಬಿ. ಮಂಜುನಾಥ್ ನೆರವೇರಿಸುವರು. ಮನೋಹರ ಎಸ್. ಚಿಗಟೇರಿ ಬಹುಮಾನ ವಿತರಿಸುವರು. ವಿಶೇಷ ಆಹ್ವಾನಿತರಾಗಿ ಬಸವರಾಜ ಬೆಳಗಾವಿ, ಶ್ರೀಮತಿ ಸೌಮ್ಯ ಬಸವರಾಜ್ ಆಗಮಿಸುವರು.

Godrej interio
WANTED
※ SALESMAN ※ STORE MANAGER
ONLY GENTS
Contact : Godrej interio
Shamanur Road, Davangere.
84310 11111, 76761 81096

# ಸಕಾರಾತ್ಮಕ ಆಲೋಚನೆಯಿಂದ ಉತ್ತಮ ಪರಿವರ್ತನೆ



## 'ಜೀವನ್ಮುಖಿ' ಪುಸ್ತಕ ಬಿಡುಗಡೆ ಸಮಾರಂಭದಲ್ಲಿ ಪಂಡಿತಾರಾಧ್ಯ ಸ್ವಾಮೀಜಿ

ದಾವಣಗೆರೆ, ಆ. 11- ಮನುಷ್ಯ ತನ್ನಲ್ಲಿರುವ ವಿವೇಕವನ್ನು ಸರಿಯಾಗಿ ಬಳಕೆ ಮಾಡಿಕೊಂಡರೆ ಸಮಸ್ಯೆಗಳಿಗೆ ಪರಿಹಾರ ಇದ್ದೇ ಇರುತ್ತದೆ. ಮನುಷ್ಯ ಬುದ್ಧಿವಂತ. ಅದರ ಜೊತೆಗೆ ಸುಜ್ಞಾನಿಯೂ ಎಂಬುದನ್ನು ಒತ್ತಿ ಹೇಳುವ ಅಗತ್ಯವಿದೆ. ಎಲ್ಲವನ್ನೂ ಸಕಾರಾತ್ಮಕವಾಗಿ ನೋಡಿದರೆ ಏನೆಲ್ಲಾ ಪರಿವರ್ತನೆ ಸಾಧ್ಯವಿದೆ ಎಂದು ಸಾಣೇಹಳ್ಳಿಯ ಶ್ರೀ ಪಂಡಿತಾರಾಧ್ಯ ಸ್ವಾಮೀಜಿ ಹೇಳಿದರು.

ಸ್ಫೂರ್ತಿ ಪ್ರಕಾಶನ ಮತ್ತು ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಸಂಯುಕ್ತಾಶ್ರಯದಲ್ಲಿ ನಗರದ ಕುವೆಂಪು ಕನ್ನಡ ಭವನದಲ್ಲಿ ಕಳೆದ ವಾರ ಹಮ್ಮಿಕೊಳ್ಳಲಾಗಿದ್ದ 'ಜೀವನ್ಮುಖಿ' ಪುಸ್ತಕ ಬಿಡುಗಡೆ ಸಮಾರಂಭದ ಸಾನ್ನಿಧ್ಯ ವಹಿಸಿ ಅವರು ಮಾತನಾಡಿದರು.

ನಾಟಕಗಳಲ್ಲಿ ಓದುವ ಹಾಗೂ ಅಭಿನಯಿಸುವ ನಾಟಕಗಳೆಂದು ಎರಡು ಪ್ರಕಾರಗಳಿವೆ. ಓದುವ ಎಲ್ಲಾ ನಾಟಕಗಳನ್ನೂ ಅಭಿನಯಿಸಲಾಗುವುದಿಲ್ಲ. ಓದಿದಾಗ ಖುಷಿ ನೀಡದ ಕೆಲವು ನಾಟಕಗಳು ಅಭಿನಯಿಸಿದಾಗ ಖುಷಿ ನೀಡುತ್ತವೆ. ಆದರೆ ಜೀವನ್ಮುಖಿಯಲ್ಲಿರುವ ಹತ್ತೂ ನಾಟಕಗಳು ಓದಲೂ ಬಹುದು ಅಭಿನಯಿಸಿ ನೋಡಲೂ ಬಹುದಾಗಿದೆ ಎಂದು ಹೇಳಿದರು.

ಸಮಾಜದಲ್ಲಿನ ವಿಡಂಬನೆಗಳು ನಾಟಕದಲ್ಲಿವೆ. ಸಮಸ್ಯೆಗಳಿಗೆ ಸಲಹೆ ನೀಡುವ ಪ್ರಯತ್ನವನ್ನೂ ಲೇಖಕಿ ಮಾಡಿದ್ದಾರೆ. ಒಟ್ಟಿನಲ್ಲಿ ಸಮಾಜಕ್ಕೆ ಕನ್ನಡಿ ಹಿಡಿಯುವ ಕಾಯಕ ಮಾಡಿದ್ದಾರೆ ಎಂದು ಹೇಳಿದರು.

ಅಧ್ಯಾಪಕನೊಬ್ಬನ ಲೈಂಗಿಕ ಕಿರುಕುಳಕ್ಕೆ ವಿದ್ಯಾರ್ಥಿನಿಯರು ಆತ್ಮಹತ್ಯೆ ಮಾಡಿಕೊಳ್ಳುವ ಬದಲಾಗಿ ಆತ್ಮವಿಮರ್ಶೆ ಮೂಲಕ ಅಧ್ಯಾಪಕನಿಗೆ ಬುದ್ದಿ ಕಲಿಸುವ ಪ್ರಯತ್ನ ಹಾಗೂ ಕಾರ್ಯಕ್ರಮಗಳಲ್ಲಿ ಮಹಿಳೆಯರಿಗೆ ಮುಯ್ಯಿ ಕೊಡುವ ಸೀರೆ ಹಲವಾರು ಜನರಿಂದ ಮತ್ತೆ ಕೊಟ್ಟವರಿಗೆ ಮರಳುವ ತಮಾಷೆಯ ನಾಟಕಗಳನ್ನು ಉದಾಹರಿಸಿದ ಶ್ರೀಗಳು ಲೇಖಕರ ಪ್ರಯತ್ನಕ್ಕೆ ಶ್ಲಾಘನೆ ವ್ಯಕ್ತಪಡಿಸಿದರು.

ಮನುಷ್ಯನಿಗೆ ಆಶಾವಾದ ಮುಖ್ಯ. ಎಲ್ಲವನ್ನೂ ಸುಖಾಂತ್ಯವಾಗಿ ಕಾಣುವುದು ಭಾರತೀಯ ಪರಂಪರೆ. ಅದನ್ನು ಗಮನದಲ್ಲಿಟ್ಟುಕೊಂಡು ಎಲ್ಲಾ ನಾಟಕಗಳನ್ನು ಸಖಾಂತವಾಗಿ ಮುಕ್ತಾಯ ಮಾಡಲಾಗಿದೆ. ಅದು ತಪ್ಪಲ್ಲ. ದುಃಖದಿಂದ ಮುಕ್ತಾಯ ಮಾಡಿದರೆ ಪರಿಹಾರ ಇಲ್ಲ ಎಂದರ್ಥ ಎಂದು ಶ್ರೀಗಳು ನುಡಿದರು.

ಮುಖ್ಯ ಅತಿಥಿಗಳಾಗಿ ಆಗಮಿಸಿದ್ದ ಎವಿಕೆ ಕಾಲೇಜು ಇಂಗ್ಲಿಷ್ ವಿಭಾಗದ ಮುಖ್ಯಸ್ಥರಾದ ಡಾ.ಅನುರಾಧ ಬಕ್ಕಪ್ಪ ಮಾತನಾಡಿ, ಟಿವಿ ಮೊಬೈಲ್‌ಗಳ ಹಾವಳಿಯಿಂದಾಗಿ ಸಮುದಾಯ ಪುಸ್ತಕ ಪ್ರೇಮ ಮರೆತಿದೆ. ಆದರೂ ಸಮುದಾಯದ ಒಂದು ಸಹೃದಯ ಭಾಗ ಪುಸ್ತಕ ಪ್ರೇಮ ಜಾಗೃತಗೊಳಿಸಿ, ಉಳಿಸಿ-ಬೆಳೆಸುವ ಪ್ರಯತ್ನ ಮಾಡುತ್ತಿದ್ದು ಅದನ್ನು ಗೌರವಿಸಬೇಕು. ಸಾಹಿತ್ಯದ ಹಲವಾರು ಪ್ರಕಾರಗಳ ಪೈಕಿ ನಾಟಕ ಪ್ರಕಾರಕ್ಕೆ ಅದ್ಭುತವಾದ ಶಕ್ತಿ ಇದೆ ಎಂದು ಹೇಳಿದರು.

ಕನ್ನಡ ಸಾಹಿತ್ಯ ಪರಿಷತ್ ತಾಲ್ಲೂಕು ಅಧ್ಯಕ್ಷೆ ಸುಮತಿ ಜಯಪ್ಪ ಮಾತನಾಡುತ್ತಾ, ಹಲವು ಸಾಹಿತ್ಯ ಪ್ರಕಾರಗಳ ಪೈಕಿ ಇತ್ತೀಚಿನ ದಿನಗಳಲ್ಲಿ ಕವನಗಳನ್ನು ಬರೆಯುವವರೇ ಹೆಚ್ಚಾಗಿದ್ದಾರೆ. ಆದರೆ ಮಮತಾ ನಾಗರಾಜ್, ನಾಟಕ ಪ್ರಕಾರ ಕೈಗೆತ್ತಿಕೊಂಡು ಸಮಾಜ ತಿದ್ದುವ ಕೆಲಸ ಮಾಡಿರುವುದು ಶ್ಲಾಘನೀಯ ಎಂದರು.

ಈ ಹಿಂದೆ ಗ್ರಾಮಗಳಲ್ಲಿ ನಾಟಕ ನೋಡಲು ರಾತ್ರಿಯೇ ಜಾಗ ಹಿಡಿದು ಕುಳಿತಿರುತ್ತಿದ್ದೆವು. ನಾಟಕ ಆಡುವವರಲ್ಲೂ, ನೋಡುವವರಲ್ಲೂ ಆಷ್ಟೇ ಉತ್ಸಾಹವಿರುತ್ತಿತ್ತು. ಆದರೆ ತಾಂತ್ರಿಕ ಮಾಧ್ಯಮಗಳ ಹಾವಳಿಯಿಂದಾಗಿ ಇಂದು ಜೀವಂತ ಕಲೆಯನ್ನು ಅನುಭವಿಸಲು ಸಾಧ್ಯವಾಗುತ್ತಿಲ್ಲ ಎಂದರು.

ಲೇಖಕಿ ಮಮತಾ ನಾಗರಾಜ್ ಪ್ರಾಸ್ತಾವಿಕವಾಗಿ ಮಾತನಾಡಿ, ಹತ್ತು ಕಿರು ನಾಟಕಗಳ ಸಂಕಲನ ಲೋಕಾರ್ಪಣೆ ಮಾಡುತ್ತಿರುವುದು ನನ್ನ ಜೀವನದ ಬಹುಮುಖ್ಯ ಮೈಲಿಗಲ್ಲಾಗಿದೆ. ಹಣದಾಸೆಗಾಗಿ ನಾವು ಬರೆಯುವುದಿಲ್ಲ. ನಮ್ಮ ತೃಪ್ತಿಗೆ ಬರೆಯುತ್ತೇವೆ. ಆ ತೃಪ್ತಿ ತಮಗೆ ದೊರೆತಿದೆ ಎಂದು ಹೇಳಿದರು.

ಎಪಿಎಂಸಿ ಮಾಜಿ ಅಧ್ಯಕ್ಷ ಎನ್.ಜಿ. ಪುಟ್ಟಸ್ವಾಮಿ, ಯಶಾ ದಿನೇಶ್, ಹೆಚ್.ಕೆ. ಸತ್ಯಭಾಮ ಮಂಜುನಾಥ್ ಉಪಸ್ಥಿತರಿದ್ದರು. ಹೆಚ್.ಎನ್. ಶಿವಕುಮಾರ್ ಸ್ವಾಗತಿಸಿದರು. ರೂಪಾ ಬಸವರಾಜ್ ನಿರೂಪಿಸಿದರು.

# ರಾಜ್ಯ ಮಟ್ಟದ ಕ್ರೀಡಾ ಪಟುಗಳಿಗೆ ಸನ್ಮಾನ

**ಹರಪನಹಳ್ಳಿ**

ಹರಪನಹಳ್ಳಿ, ಆ.11- ಪಟ್ಟಣದ ಅಧಿಕಾರಿಗಳ ಮನೋರಂಜನಾ ಕೇಂದ್ರದ ವತಿಯಿಂದ 75 ನೇ ಅಮೃತ ಮಹೋತ್ಸವದ ನಿಮಿತ್ತ ರಾಜ್ಯಮಟ್ಟದ ಕ್ರೀಡಾ ಪಟುಗಳಿಗೆ ಸನ್ಮಾನಿಸಿ, ಗೌರವಿಸಲಾಗುವುದು ಎಂದು ಅಧಿಕಾರಿಗಳ ಮನೋರಂಜನಾ ಕೇಂದ್ರದ ಅಧ್ಯಕ್ಷ ಕೆ.ಲಿಂಗಾನಂದ ತಿಳಿಸಿದ್ದಾರೆ.

ಇದೇ ದಿನಾಂಕ 15ನೇ ಸೋಮವಾರ ಬೆಳಿಗ್ಗೆ 10.30ಕ್ಕೆ ಸ್ವಾತಂತ್ರ್ಯ ದಿನಾಚರಣೆಯ 75ನೇ ಅಮೃತ ಮಹೋತ್ಸವ ಸಮಾರಂಭ ಆಚರಿಸಲಾಗುತ್ತಿದ್ದು, ಪ್ರತಿ ವರ್ಷ ವಿವಿಧ ರಂಗಗಳಲ್ಲಿ ಸಾಧನೆ ಮಾಡಿದ ವಿದ್ಯಾರ್ಥಿಗಳನ್ನು ಸನ್ಮಾನಿಸಿ, ಗೌರವಿಸಲಾಗುತ್ತಿತ್ತು. ಆದರೆ ಈ ಬಾರಿ 2021- 22 ನೇ ಸಾಲಿನಲ್ಲಿ ಸಾಧನೆ ಮಾಡಿದ ರಾಜ್ಯ ಮಟ್ಟದ ಕ್ರೀಡಾ ಪಟುಗಳಿಗೆ ಸನ್ಮಾನ ಕಾರ್ಯಕ್ರಮ ಆಯೋಜಿಸಲಾಗಿದೆ. ವಿವರಕ್ಕೆ ಸಂಪರ್ಕಿಸಿ : 9448877052.

## ಇಂದು ಗಾಯತ್ರಿ ಪೂಜೆ

ಶ್ರೀ ಗಾಯತ್ರಿ ಪರಿವಾರದಿಂದ ಸಾಮೂಹಿಕ ಶ್ರೀ ಗಾಯತ್ರಿ ಪೂಜೆ, ಉಪಾಸನೆ, ಸಾಮೂಹಿಕ ಶ್ರೀ ಗಾಯತ್ರಿ ಪೂಜೆಯು ನೂಲು ಹುಣ್ಣಿಮೆ ಅಂಗವಾಗಿ ದಾವಣಗೆರೆಯ ಜಯದೇವ ವೃತ್ತದಲ್ಲಿರುವ ಶ್ರೀ ಶಂಕರ ಮಠದಲ್ಲಿ ಇಂದು ಬೆಳಿಗ್ಗೆ 7ಕ್ಕೆ ನಡೆಯಲಿದೆ ಎಂದು ಪರಿವಾರದ ಸಂಚಾಲಕ ಭಾವನ್ನಾರಾಯಣ ತಿಳಿಸಿದ್ದಾರೆ.

## ಸಾರ್ವಜನಿಕ ಪ್ರಕಟಣೆ

ಈ ಕೆಳಕಂಡ ಪ್ರಕಟಣೆದಾರರಾದ ನಾವು ಈ ಮುಖೇನ ಸಾರ್ವಜನಿಕರಿಗೆ ತಿಳಿಸುವುದೇನೆಂದರೆ - ನಾನು ಈ ಕೆಳಕಂಡ ಷೆಡ್ಯೂಲ್ ಸೊತ್ತುಗಳನ್ನು ಹರಿಹರ ತಾಲ್ಲೂಕು, ಮಲೇಬೆನ್ನೂರು ಪಟ್ಟಣದ ವಾಸಿಯಾದ ಶ್ರೀ ಹೆಚ್. ಸೈಯದ್ ಖಲೀಲ್ ಬಿನ್ ಲೇಟ್ ಸೈಯದ್ ಖಲೀಲ್ ಹೆಚ್ ಮತ್ತು ಶ್ರೀ ಅಬ್ದುಲ್ ಖುದ್ದೂಸ್ ಬಿನ್ ಲೇಟ್ ಅಬ್ದುಲ್ ವಹಾಬ್ ಸಾಬ್ ಇವರುಗಳಿಂದ ನಾನು ಕ್ರಯಕ್ಕೆ ಪಡೆಯಲು ಇಚ್ಚಿಸಿದ್ದು, ಸದರಿ ಸಂಬಂಧವಾಗಿ ಈ ಕೆಳಗೆ ಸಹಿ ಮಾಡಲಾದ ಪ್ರಕಟಣೆದಾರರಾದ ನಾನು ಈ ಮೂಲಕ ಸಾರ್ವಜನಿಕರಿಗೆ ಹಾಗೂ ಹಣಕಾಸು ಸಂಸ್ಥೆಗಳಿಗೆ ತಿಳಿಯಪಡಿಸುವುದೇನೆಂದರೆ.

ಸದರಿ ಷೆಡ್ಯೂಲ್ ಸೊತ್ತುಗಳಿಗೆ ಸಂಬಂಧಿಸಿದಂತೆ ಯಾರದಾದರೂ ಹಕ್ಕು-ಬಾಧ್ಯತೆ, ತಂಟೆ-ತಕರಾರು ಇದ್ದಲ್ಲಿ ಅಥವಾ ಷೆಡ್ಯೂಲ್ ಸೊತ್ತುಗಳಿಗೆ ಸಂಬಂಧಿಸಿದಂತೆ ಯಾವುದೇ ಹಣಕಾಸಿನ ಸಂಸ್ಥೆಯೂ ಈಗಾಗಲೇ ವ್ಯವಹರಿಸಿದ್ದಲ್ಲಿ, ವ್ಯವಹರಿಸುವ ಹಂತದಲ್ಲಿದ್ದಲ್ಲಿ ಈ ಕೂಡಲೇ ಪ್ರಕಟಣೆದಾರರನ್ನು ಸಂಪರ್ಕಿಸತಕ್ಕದ್ದು. ಒಂದು ವೇಳೆ ಈ ಪ್ರಕಟಣೆಯಾದ 7 ದಿನಗಳ ಒಳಗಾಗಿ ಯಾವುದೇ ತಕರಾರು ಅರ್ಜಿ ಬಾರದೇ ಹೋದಲ್ಲಿ ಮುಂದೆ ಆಗುವ ತೊಂದರೆಗಳಿಗೆ ತಾವೇ ಕಾನೂನು ರೀತ್ಯಾ ಜವಾಬ್ದಾರರು ಆಗಿರುತ್ತೀರಿ ಮತ್ತು ತಾವೇ ಖುದ್ದು ಜವಾಬ್ದಾರರು ಎಂದು ತಿಳಿಯುವುದು.

***ಷೆಡ್ಯೂಲ್ :*** ದಾವಣಗೆರೆ ಜಿಲ್ಲೆ, ಹರಿಹರ ತಾಲ್ಲೂಕು, ಹರಿಹರ ಸಬ್ ರಿಜಿಸ್ಟ್ರಾರ್‌ರವರ ಆಫೀಸ್ ಅಧಿಕಾರಕ್ಕೆ ಒಳಪಟ್ಟ ಹರಿಹರ ತಾಲ್ಲೂಕು, ವಡೇರಬಸಾಪುರ ಗ್ರಾಮದ

1) ರಿ.ಸರ್ವೆ ನಂ. 51, ವಿಸ್ತೀರ್ಣ ಎಕರೆ-1, ಗುಂಟೆ-01 ವುಳ್ಳ ಜಮೀನಿಗೆ ಚಕ್ಕುಬಂದಿ : ಪೂರ್ವಕ್ಕೆ : ಇದೇ ಸರ್ವೆ ನಂಬರ್ ಪೈಕಿ ಉಳಿದ ಜಮೀನು, ಪಶ್ಚಿಮಕ್ಕೆ : ಜಿಗಳಿ ರಸ್ತೆ, ಉತ್ತರಕ್ಕೆ : ಹೆಚ್. ಸೈಯದ್ ಖಲೀಲ್ ಇವರ ಜಮೀನು, ದಕ್ಷಿಣಕ್ಕೆ ; ಶಹತಾಜ್ ಬಾನು ಇವರ ಜಮೀನು.

2) ರಿ.ಸರ್ವೆ ನಂ. 51 ವಿಸ್ತೀರ್ಣ ಎಕರೆ-1, ಗುಂಟೆ-00 ವುಳ್ಳ ಜಮೀನಿಗೆ ಚಕ್ಕುಬಂದಿ : ಪೂರ್ವಕ್ಕೆ : ಇದೇ ಸರ್ವೆ ನಂಬರ್ ಪೈಕಿ ಉಳಿದ ಜಮೀನು, ಪಶ್ಚಿಮಕ್ಕೆ ; ಜಿಗಳಿ ರಸ್ತೆ, ಉತ್ತರಕ್ಕೆ : ಸೈಯದಾ ರಿಹಾನಾ ಇವರ ಜಮೀನು, ದಕ್ಷಿಣಕ್ಕೆ : ಅಬ್ದುಲ್ ಖುದ್ದೂಸ್ ಇವರ ಜಮೀನು.

**ಡಾ. ಶ್ರೀನಿವಾಸ್,**
ಆದಿತ್ಯ ಮಕ್ಕಳ ಆಸ್ಪತ್ರೆ, ಮಲೇಬೆನ್ನೂರು,
ಹರಿಹರ ತಾಲ್ಲೂಕು
ಫೋನ್ : 94483 45585

## ಜೆಎಂಹೆಚ್ ಪಿಯು ಕಾಲೇಜಿನ ಪ್ರಾಂಶುಪಾಲರಾಗಿ ಪ್ರೊ ಚಂದ್ರಪ್ಪ



ದಾವಣಗೆರೆ: ನಗರದ ಪ್ರತಿಷ್ಠಿತ ಜೆಎಂ ಹಾಲಮ್ಮ ಪಿಯು ಕಾಲೇಜಿನ ಪ್ರಾಂಶುಪಾಲರಾಗಿ ಪ್ರೊ ಚಂದ್ರಪ್ಪ ಬಿ ಬಿ ಅಧಿಕಾರವನ್ನು ವಹಿಸಿಕೊಂಡರು.

ಪ್ರೊ ಚಂದ್ರಪ್ಪ ಬಿ ಬಿ ರವರು ಈ ಹಿಂದೆ ಯಾದಗಿರಿಯ ಪಿಯು ಕಾಲೇಜಿನಲ್ಲಿ ಪ್ರಾಂಶುಪಾಲರಾಗಿ ಸೇವೆಯನ್ನು ಸಲ್ಲಿಸುತ್ತಿದ್ದರು. ಇವರಿಗೆ 21 ವರ್ಷಗಳ ಬೋಧನಾ ಅನುಭವವಿದ್ದು, ಗಣಿತ ವಿಷಯದಲ್ಲಿ ಪ್ರೊಫೆಸರಾಗಿ ಹಲವು ಕಾಲೇಜುಗಳಲ್ಲಿ ಸೇವೆಯನ್ನು ಸಲ್ಲಿಸಿದ್ದಾರೆ. ಗಣಿತ ಶಾಸ್ತ್ರ ವಿಷಯದಲ್ಲಿ ಅನೇಕ ಚಟುವಟಿಕೆಗಳ ಮೂಲಕ ಮನೆಮಾತಾಗಿದ್ದಾರೆ.

ದಿನಾಂಕ ಒಂದನೇ ಆಗಸ್ಟ್ ರಂದು ಪ್ರಾಂಶುಪಾಲರಾಗಿ ಜೆಎಂ ಹಾಲಮ್ಮ ಪಿಯು ಕಾಲೇಜಿನಲ್ಲಿ ಅಧಿಕಾರವನ್ನು ಸ್ವೀಕರಿಸಿದ್ದಾರೆ.

ದಿನಾಂಕ ಮೂರನೇ ಆಗಸ್ಟ್ ಬುಧವಾರದಂದು ನಡೆದ ಸಭೆಯಲ್ಲಿ ಸಂಸ್ಥೆಯ ಆಡಳಿತಾಧಿಕಾರಿಗಳಾದ ವೈಯು ಸುಭಾಷ್ಚಂದ್ರ, ಜೆಎಂಐಟಿ ಕಾಲೇಜಿನ ಪ್ರಾಂಶುಪಾಲರಾದ ಡಾ ವೈ.ವಿಜಯಕುಮಾರ್, ಜೆಎಂ ಫಾರ್ಮಸಿ ಕಾಲೇಜಿನ ಪ್ರಾಂಶುಪಾಲರಾದ ಡಾ.ಗಿರೀಶ್ ಬೋಳಕಟ್ಟಿ, ಸಹ ಆಡಳಿತಾಧಿಕಾರಿಗಳಾದ ಶಿವಕುಮಾರ್, ಜೆಎಂಎಸ್ ಅಕ್ಯಾಡೆಮಿ ಡಿಗ್ರಿ ಕಾಲೇಜಿನ ಪ್ರಾಂಶುಪಾಲರಾದ ಶ್ವೇತ ಮರಿಗೌಡರ್, ತರಬೇತಿ ಮತ್ತು ಉದ್ಯೋಗ ವಿಭಾಗದ ಮುಖ್ಯಸ್ಥರಾದ ತೇಜಸ್ವಿ ಕಟ್ಟಿಮನಿ ಟಿ ಆರ್, ಸಂಸ್ಥೆಯ ಮಾನವ ಸಂಪನ್ಮೂಲ ವಿಭಾಗದ ಮ್ಯಾನೇಜರ್ ದೀಪಕ್ ಹೊಸದಾಗಿ ಅಧಿಕಾರ ಸ್ವೀಕರಿಸಿದ ಪ್ರಾಂಶುಪಾಲರಿಗೆ ಹೂಗುಚ್ಛ ನೀಡುವುದರ ಮೂಲಕ ಅಭಿನಂದನೆಗಳನ್ನು ಸಲ್ಲಿಸಿದ್ದಾರೆ.

ADVT

## ಮಲೇಬೆನ್ನೂರಿನಲ್ಲಿ ರಾಷ್ಟ್ರ ಧ್ವಜ ಪ್ರದರ್ಶನ



ಮಲೇಬೆನ್ನೂರು, ಆ.11- ಪುರಸಭೆ ವತಿಯಿಂದ ಸ್ವಾತಂತ್ರ್ಯದ ಅಮೃತ ಮಹೋತ್ಸವದ ಅಂಗವಾಗಿ ನಾಳೆ ಶುಕ್ರವಾರ ಬೆಳಿಗ್ಗೆ 8.30ಕ್ಕೆ ಸರ್ಕಾರಿ ಪದವಿ ಪೂರ್ವ ಕಾಲೇಜಿನ ಆವರಣದಲ್ಲಿರುವ ಬಾಪೂಜಿ ಹಾಲ್ ಸ್ವಚ್ಛತಾ ಕಾರ್ಯವನ್ನು ಹಮ್ಮಿಕೊಂಡಿದ್ದು, ನಂತರ 10.30 ರಿಂದ ಬಾಪೂಜಿ ಹಾಲ್‌ನಿಂದ ಪಟ್ಟಣದ ಹೆದ್ದಾರಿ ಸೇರಿದಂತೆ ಪ್ರಮುಖ ಬೀದಿಗಳಲ್ಲಿ 'ಹರ್ ಘರ್ ತಿರಂಗಾ' ಜನ ಜಾಗೃತಿ ಜಾಥಾವನ್ನು ಹಮ್ಮಿಕೊಳ್ಳಲಾಗಿದೆ ಎಂದು ಪುರಸಭೆ ಮುಖ್ಯಾಧಿಕಾರಿ ಎ.ಸುರೇಶ್ ತಿಳಿಸಿದ್ದಾರೆ.

**ಪ್ರದರ್ಶನ :** ಗುರುವಾರ ಪುರಸಭೆ ಸದಸ್ಯರಿಗೆ, ಪತ್ರಕರ್ತರಿಗೆ ಮತ್ತು ಪೌರ ಕಾರ್ಮಿಕರಿಗೆ ರಾಷ್ಟ್ರ ಧ್ವಜವನ್ನು ನೀಡಿದ ನಂತರ ರಾಷ್ಟ್ರ ಧ್ವಜದ ಪ್ರದರ್ಶನ ಮಾಡಲಾಯಿತು.

ಪೌರ ಕಾರ್ಮಿಕರನ್ನು ಅಭಿನಂದಿಸಿ, ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ನೀಡಿದ ಅಭಿನಂದನಾ ಪತ್ರಗಳನ್ನು ಇದೇ ವೇಳೆ ಪೌರ ಕಾರ್ಮಿಕರಿಗೆ ಮುಖ್ಯಾಧಿಕಾರಿ ಸುರೇಶ್ ವಿತರಿಸಿದರು.

ಉಪತಹಶೀಲ್ದಾರ್ ಆರ್.ರವಿ, ಪುರಸಭೆ ಸದಸ್ಯರಾದ ಮಾಜೀದ್, ಗೌಡ್ರ ಮಂಜಣ್ಣ, ಟಿ.ಹನುಮಂತಪ್ಪ, ಬೆಣ್ಣೆಹಳ್ಳಿ ಸಿದ್ದೇಶ್, ಬಿ.ಮಂಜುನಾಥ್, ಸಾಬೀರ್ ಅಲಿ, ಚಮನ್, ಭೋವಿ ಶಿವು, ಖಲೀಲ್, ನಯಾಜ್, ಎ.ಕೆ.ಲೋಕೇಶ್, ಮಾಜಿ ಸದಸ್ಯ ಯೂಸೂಫ್, ಕೆ.ಪಿ.ಗಂಗಾಧರ್, ಭೋವಿ ಕುಮಾರ್, ಜಿಗಳೇರ ಹಾಲೇಶಪ್ಪ, ಓ.ಜಿ.ಕುಮಾರ್, ಪುರಸಭೆ ಅಧಿಕಾರಿಗಳಾದ ದಿನಕರ್, ಉಮೇಶ್, ಪ್ರಭು, ನವೀನ್ ಮತ್ತಿತರರು ಈ ವೇಳೆ ಹಾಜರಿದ್ದರು.

## ಮಲೇಬೆನ್ನೂರಿನಲ್ಲಿ ರಕ್ಷಾಬಂಧನ ಯಜುರ್ವೇದ ಉಪಾಕರ್ಮ

ಮಲೇಬೆನ್ನೂರು, ಆ.11- ಇಲ್ಲಿನ ಶಂಕರ ಮಂದಿರದಲ್ಲಿ ವಿಪ್ರಸಮಾಜದ ಜನತೆ ಗುರುವಾರ 'ನೂಲು ಹುಣ್ಣಿಮೆ' ಪ್ರಯುಕ್ತ ಯಜುರ್ವೇದ ಉಪಾಕರ್ಮವನ್ನು ಶ್ರದ್ಧಾಭಕ್ತಿಗಳಿಂದ ನೂತನ ಯಜ್ಞೋಪವೀತ ಧಾರಣೆ ಮಾಡುವ ಮೂಲಕ ಆಚರಿಸಿದರು.

ಗಂಗಾಪೂಜೆ, ಗಾಯತ್ರಿ ಭಾವಚಿತ್ರಕ್ಕೆ ಧ್ಯಾನ ಹವನಾದಿ ಸಾಮೂಹಿಕ ಪೂಜೆ ಮಾಡಿದರು. ನವಕಾಂಡ ಋಷಿ ಕಳಸ ಸ್ಥಾಪಿಸಿ, ಹೋಮ ಹವನ ನೆರವೇರಿಸಿದರು. ಪೂಜಾ ವಿಧಿಗಳ ನೇತೃತ್ವ ವಹಿಸಿದ್ದ ಎಂ.ಶಾಮಸುಂದರ ಜೋಯ್ಸ್, ಎಂ.ಪಿ.ನಟರಾಜನ್, ಗುರುದತ್ತ ವೇದ ಮಂತ್ರದ ಮಧ್ಯೆ ನೂತನ ಯಜ್ಞೋಪವೀತ ಧಾರಣೆ ಮಾಡಿಸಿದರು. ಉಪಸ್ಥಿತರು ಪಿತೃ ಹಾಗೂ ದೇವತೆಗಳಿಗೆ ತರ್ಪಣ ನೀಡಿದರು. ನಂತರ ಅನ್ನ ಸಂತರ್ಪಣೆ ನಡೆಯಿತು.



## ಕಮಲಾಪುರದಲ್ಲಿ ಎನ್ನೆಸ್ಸೆಸ್ ಶಿಬಿರಕ್ಕೆ ಶಾಸಕ ರಾಮಪ್ಪ ಚಾಲನೆ



ಮಲೇಬೆನ್ನೂರು, ಆ. 11- ಕಮಲಾಪುರ ಗ್ರಾಮದಲ್ಲಿ ಹರಿಹರ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ವತಿಯಿಂದ ಒಂದು ವಾರಕ್ಕೆ ಹಮ್ಮಿಕೊಂಡಿರುವ ರಾಷ್ಟ್ರೀಯ ಸೇವಾ ಯೋಜನೆಯ ಶಿಬಿರವನ್ನು ಶಾಸಕ ಎಸ್. ರಾಮಪ್ಪ ಉದ್ಘಾಟಿಸಿದರು. ನಂತರ ಮಾತನಾಡಿದ ಶಾಸಕರು, ಗ್ರಾಮೀಣ ಜೀವನದ ಕಲೆಯನ್ನು ವಿದ್ಯಾರ್ಥಿಗಳಿಗೆ ಪರಿಚಯಿಸಿ ಶಿಸ್ತು, ಸಂಯಮ, ವ್ಯಕ್ತಿತ್ವ ವಿಕಸನವನ್ನು ಬೆಳೆಸುವ ಈ ಎನ್ನೆಸ್ಸೆಸ್ ಶಿಬಿರ ತುಂಬಾ ಪ್ರಯೋಜನಕಾರಿಯಾಗಿದೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ಕಾಲೇಜು ಶಿಕ್ಷಣ ಇಲಾಖೆಯ ಶಿವಮೊಗ್ಗ ಪ್ರಾದೇಶಿಕ ಕಛೇರಿಯ ಜಂಟಿ ನಿರ್ದೇಶಕ ಡಾ. ರಾಜಶೇಖರ್ ಹೆಬ್ಬಾರ್ ಅವರು ಎನ್ನೆಸ್ಸೆಸ್ ಶಿಬಿರದ ಉದ್ದೇಶಗಳನ್ನು ತಿಳಿಸಿದರು.

ಶಿಬಿರಾಧಿಕಾರಿ ಡಾ. ಎಂ.ಎನ್. ರಮೇಶ್ ಪ್ರಾಸ್ತಾವಿಕವಾಗಿ ಮಾತನಾಡಿದರು. ಕಾಲೇಜಿನ ಎನ್ನೆಸ್ಸೆಸ್ ಘಟಕಾಧಿಕಾರಿ ಪ್ರೊ. ವಿರೂಪಾಕ್ಷಪ್ಪ ಅಧ್ಯಕ್ಷತೆ ವಹಿಸಿದ್ದರು. ಯಲವಟ್ಟಿ ಗ್ರಾ.ಪಂ. ಅಧ್ಯಕ್ಷ ಕೆ.ಬಿ. ರಮೇಶ್, ಚಂದ್ರಶೇಖರಪ್ಪ, ಷಣ್ಮುಖಪ್ಪ, ನಿವೃತ್ತ ಪೊಲೀಸ್ ಅಧಿಕಾರಿ ಕುಣೆಬೆಳಕೆರೆ ದೇವೇಂದ್ರಪ್ಪ, ಉಪನ್ಯಾಸಕರಾದ ಶ್ರೀಮತಿ ಶ್ವೇತಾ, ಡಾ. ದಾಕ್ಷಾಯಿಣಿ, ಡಾ. ಬಿ. ನಾಗೇಶ್, ಡಾ. ಬಿ.ಕೆ. ಬಸವರಾಜ್, ಹನುಮಂತಪ್ಪ, ಮಾಲತೇಶ್, ಕುಬೇಂದ್ರಪ್ಪ ಹಾಗೂ ಗ್ರಾಮಸ್ಥರು ಭಾಗವಹಿಸಿದ್ದರು. ಡಾ. ಹೆಚ್.ಪಿ. ಅನಂತ್‌ನಾಗ್ ಸ್ವಾಗತಿಸಿದರು. ಮಾಂತೇಶ್ ವಂದಿಸಿದರು. ಈ ವೇಳೆ ಪರಿಸರ ಪ್ರೇಮಿ ಮಿಟ್ಲಕಟ್ಟೆ ವೀರಾಚಾರಿ ಅವರು ವಿದ್ಯಾರ್ಥಿಗಳಿಗೆ ಸಸಿ ವಿತರಿಸಿದರು.

## ನಗರದಲ್ಲಿ ಇಂದು ಪ್ರತಿಭಾ ಪುರಸ್ಕಾರ

ಎಆರ್‌ಜಿ ಕಲಾ ಮತ್ತು ವಾಣಿಜ್ಯ ಪದವಿ ಪೂರ್ವ ಕಾಲೇಜಿನ ಸಾಂಸ್ಕೃತಿಕ, ಕ್ರೀಡಾ, ಎನ್‌ಎಸ್‌ಎಸ್, ಎನ್‌ಸಿಸಿ ಚಟುವಟಿಕೆಗಳ ಉದ್ಘಾಟನೆ, ಸ್ವಾಗತ ಹಾಗೂ ಪ್ರತಿಭಾ ಪುರಸ್ಕಾರ ಸಮಾರಂಭ ಇಂದು ಬೆಳಿಗ್ಗೆ 11 ಗಂಟೆಗೆ ಕಾಲೇಜಿನ ಆವರಣದಲ್ಲಿರುವ ಡಾ. ಶಾಮನೂರು ಶಿವಶಂಕರಪ್ಪ ಸಭಾಂಗಣದಲ್ಲಿ ನಡೆಯಲಿದೆ.

ಪಾಲಿಕೆ ಆಯುಕ್ತ ವಿಶ್ವನಾಥ ಪಿ. ಮುದಜ್ಜಿ ಕಾರ್ಯಕ್ರಮ ಉದ್ಘಾಟಿಸುವರು. ಕಾಲೇಜಿನ ಆಡಳಿತ ಮಂಡಳಿ ಅಧ್ಯಕ್ಷ ಎ.ಬಿ. ಮಂಜುನಾಥ್ ಪ್ರತಿಭಾ ಪುರಸ್ಕಾರ ನೆರವೇರಿಸಿಕೊಡಲಿದ್ದಾರೆ.

ಮುಖ್ಯ ಅತಿಥಿಗಳಾಗಿ ಸಂಪನ್ಮೂಲ ವ್ಯಕ್ತಿ ಜಗನ್ನಾಥ ನಾಡಿಗೇರ್, ಎಆರ್‌ಜಿ ಪದವಿ ಕಾಲೇಜಿನ ಪ್ರಾಚಾರ್ಯ ಕೆ.ಎಸ್. ಬಸವರಾಜಪ್ಪ ಭಾಗವಹಿಸಲಿದ್ದಾರೆ. ಪದವಿ ಪೂರ್ವ ಕಾಲೇಜಿನ ಪ್ರಾಚಾರ್ಯ ಕೆ. ಬೊಮ್ಮಣ್ಣ ಅಧ್ಯಕ್ಷತೆ ವಹಿಸಲಿದ್ದಾರೆ.

## ಸಹೋದರಿಯರ ರಕ್ಷೆಯ ರಕ್ಷಾಬಂಧನ



ಒಬ್ಬರು ಇನ್ನೊಬ್ಬರಿಗೆ
ಇಡೀ ದೇಶದ ಪ್ರತೀ
ಪುರುಷರಿಗೆ ಸ್ತ್ರೀ
ನಾರಿಯರಿಂದ ರಾಖಿಯ
ಕಟ್ಟಿಸಿಕೊಳ್ಳುವ ಪದ್ಧತಿಯು....!!!

ದೇಶದ ಜಾತ್ಯತೀತತೆಯ
ಪ್ರತೀ ಕುಟುಂಬದ
ಸ್ತ್ರೀ ಮಹಿಳೆಯರನ್ನು
ರಕ್ಷಿಸುವ ರಕ್ಷಣೆಯು
ಈ ದೇಶದ ಪ್ರತೀ ಯುವಕರದ್ದು....!!!

ಪ್ರತೀ ದೇಶ ನಾರಿಯರ
ಒಳ್ಳೆಯ ತನದ
ಒಳಿತು ಮಾಡುವ
ಪ್ರತೀ ಮನಸುಗಳ
ಬೆಸುಗೆಯ ಗಟ್ಟಿತನದ ಬದ್ಧತೆಯು...!!!

ರಕ್ಷಾ ಬಂಧನವು
ಸ್ತ್ರೀಯರು ಬಯಸುವುದೇ
ಒಬ್ಬ ಅಣ್ಣನ ಸ್ವರೂಪದಲ್ಲಿ
ಕಾಣುವ ತಂದೆಯನ್ನು ಬಿಟ್ಟರೆ
ಎಲ್ಲದಕ್ಕೂ ಕಾರಣಿಕಾರ ಶ್ರೇಷ್ಠತೆಯು
ಅಣ್ಣನದ್ದು...!!!

ಜಾತಿ ಭೇದ ಮರೆತು
ಇರುವ ಮೂರು ಕಾಲದ ಸಂತೆಯ
ಒಗ್ಗಟ್ಟಿನಲ್ಲಿ ಬಲವಿದೆ ದ್ವೇಷ
ಅಸೂಯೆ ಬಿಟ್ಟು ಹೃದಯ
ಪ್ರೀತಿ ಪ್ರೇಮ ವಿಶಾಲ ಐಕ್ಯತೆಯು....!!!

ಹಿಂದೂ ಮುಸ್ಲಿಮ್ ಕ್ರೈಸ್ತರ
ಸರ್ವ ಹೃದಯಗಳ ಸಾರ್ವತ್ರಿಕ ಜನರ
ಮನೋಸ್ವಾರ್ಥ ಬೀಜ ಜಿಜ್ಞಾಸೆ ಬಿಜ್ಞಾಸೆ ಬಿಟ್ಟು
ಇದಕ್ಕೆಲ್ಲ ತಾಯಿಯ ಆಶೀರ್ವಾದಗಳ
ಭಾರತಾಂಬೆಯದು
ಈ ದೇಶದ ಸಂಪ್ರದಾಯವೇ ಇಡೀ ವಿಶ್ವಕ್ಕೆ
ಮಾದರಿಯಾಗಿದೆ...!!!

**- ಸಂಗಮ್ ಟಿ. ಜಿ., ಕೊಟ್ಟೂರು**

## ರಕ್ಷಾ ಬಂಧನ ...

ರಕ್ಷಾ ಬಂಧನ
ಅಣ್ಣ ತಂಗಿ ಅಕ್ಕ ತಮ್ಮರ ಬಾಳ ಬೆಳಗುವ
ನಂದನ
ಪ್ರತಿ ನೋವಿಗೂ ಮಿಡಿಯುವ ಸ್ಪಂದನ
ಸಂಬಂಧಗಳ ಗಟ್ಟಿಗೊಳಿಸುವ ಚೇತನ

ಅಣ್ಣನೆಂದರೆ ತಂಗಿಗೆ ಜೀವ
ಅಕ್ಕನೆಂದರೆ ತಮ್ಮನ ಸರ್ವಸ್ವ
ಹಂಚಿಕೊಳ್ಳುವರು ಪರಸ್ಪರ ನೋವು ಸಂಕಟ
ನಲಿವ
ಜೊತೆ ನಿಲ್ಲುವರು ಎದುರಾದರೂ ಜಗವು

ಸಹೋದರನ ಏಳಿಗೆ ಬಯಸುವುದೇ
ಸಹೋದರಿಯರಿಗೆ ಸಂತೋಷ
ಸಹೋದರಿಯ ಬಾಳು ಬೆಳಗುವುದೇ
ಸಹೋದರನ ಪೋಷಕತ್ವ

ಸಹೋದರಿಯರ ರಾಖಿಯ ರಕ್ಷೆ
ಸಹೋದರನ ಬಾಳಲ್ಲಿ ಬರುವ ಎಲ್ಲ
ಅಗ್ನಿಪರೀಕ್ಷೆಗಳ ಶ್ರೀರಕ್ಷೆ
ಇದ್ದರು ತುಸು ಮುನಿಸುಗಳ ಶಿಕ್ಷೆ
ಸಂಬಂಧಗಳನ್ನು ಕಾಪಾಡುವ ಕಕ್ಷೆ

**- ಬಸವರಾಜ ಕರುವಿನ,**
ಬಸವನಾಳು.

## ಭ್ರಾತೃ ವಾತ್ಸಲ್ಯದ ಹಬ್ಬ

ಬಂದಿದೆ ರಕ್ಷಾ ಬಂಧನದ ಹಬ್ಬ
ಬಾಂಧವ್ಯ ಬೆಸೆಯುವ ಶ್ರೇಷ್ಠ ಹಬ್ಬ
ಬಂಧನವ ಗಟ್ಟಿ ಮಾಡುವ ಹಬ್ಬ
ಸುಂದರ ಭ್ರಾತೃವಾತ್ಸಲ್ಯದ ಹಬ್ಬ

ಅಕ್ಕ ತಂಗಿಯರು ರಾಖಿ ಕಟ್ಟುವ ಹಬ್ಬ
ಅಕ್ಕರೆಯಲಿ ಸಿಹಿ ತಿನ್ನಿಸುವ ಹಬ್ಬ
ರಕ್ಷಣೆಯ ಜವಾಬ್ದಾರಿ ಹೊರಿಸುವ ಹಬ್ಬ
ರಕ್ಷಿಸುವೆನೆಂದು ಪಣ ತೊಡುವ ಹಬ್ಬ

ಹೃನ್ಮನದಿ ನಿಷ್ಕಾಮ ಪ್ರಿತಿ ತುಂಬಿಸೊ ಹಬ್ಬ
ಸನ್ಮಾರ್ಗದಲಿ ಜಗವ ನಡೆಸುವ ಹಬ್ಬ
ಚಿನ್ಮಯ ಸೃಷ್ಟಿಯಲಿ ವಿಶಿಷ್ಟ ವೀ ಹಬ್ಬ
ತನ್ಮಯತೆಯಿಂದ ಆಚರಿಸುವ ಹಬ್ಬ

ಸೋದರಭಾವ ಬೇಕು ನೈತಿಕತೆ ಉಳಿಯಲು
ಸೋದರರಂತಿರಲು ಭೂಸ್ವರ್ಗವು
ಸೋದರನಾಗಿ ಕೃಷ್ಣೆ ಮಾನ ಕಾಯ್ದನು ಕೃಷ್ಣ
ಸೋದರರು ಸಿರಿಹರಿಯ ಬಿಂಬದಂತಿಹರು

**- ಶ್ರೀಕೃಷ್ಣಾರ್ಪಣಮಸ್ತು**
**ರೂಪಶ್ರೀ ಶಶಿಕಾಂತ್**
**ದಾವಣಗೆರೆ**

## ಇಂದು ವಿನೋಬನಗರ ಚೌಡೇಶ್ವರಿ ದೇವಿಯ ಹೊಳೆ ಪೂಜೆ ಕಾರ್ಯಕ್ರಮ

ಹರಿಹರದ ತುಂಗಭದ್ರಾ ನದಿ ತೀರದಲ್ಲಿ ಇಂದು ಮಧ್ಯಾಹ್ನ 12.30 ಕ್ಕೆ ದಾವಣಗೆರೆ ವಿನೋಬನಗರದ ಶ್ರೀ ಚೌಡೇಶ್ವರಿ ದೇವಿಯ ಹೊಳೆಪೂಜೆ ಕಾರ್ಯಕ್ರಮ ನಡೆಯಲಿದೆ.

## ಕೊಟ್ಟೂರಿನಲ್ಲಿ ನುಲಿಯ ಚಂದಯ್ಯ ಜಯಂತಿ ಇಂದು

ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಆದೇಶದಂತೆ ತಾಲ್ಲೂಕು ಕಛೇರಿಯ ಮಹಾತ್ಮಗಾಂಧೀಜಿ ಸಭಾಂಗಣದಲ್ಲಿ ಶ್ರೀ ನುಲಿಯ ಚಂದಯ್ಯನವರ ಜಯಂತಿಯನ್ನು ಇಂದು ಬೆಳಿಗ್ಗೆ 11 ಗಂಟೆಗೆ ಆಚರಿಸಲಾಗುವುದು ಎಂದು ತಾಲ್ಲೂಕು ದಂಡಾಧಿಕಾರಿ ಎಂ. ಕುಮಾರಸ್ವಾಮಿ ತಿಳಿಸಿದ್ದಾರೆ.

## ರಕ್ಷಾ ಬಂಧನ

ಅಣ್ಣ-ತಂಗಿ
ಅಕ್ಕ ತಮ್ಮ
ಸಂಭ್ರಮಿಸುವ ಸುದಿನ
ರಕ್ಷಾ ಬಂಧನ

ಸಹೋದರಿಯರ ಶ್ರೀರಕ್ಷೆ
ಸಹೋದರರ ಅಭಯ ರಕ್ಷೆ
ಬಾಂಧವ್ಯ ಬೆಸೆಯುವ
ಪ್ರೀತಿ-ವಾತ್ಸಲ್ಯ ಹಂಚುವ
ಸುದಿನ ರಕ್ಷಾಬಂಧನ

ಅಣ್ಣ ತಮ್ಮರ ಗುರಿ ಸಾಧನೆಗೆ
ಅಕ್ಕ ತಂಗಿಯರ ಕಂಕಣ ರಕ್ಷೆ
ಸಂಬಂಧ; ಬಿಡಿಸಲಾರದ
ಅನುಬಂಧ!

ಉಡುಗೊರೆಯ ಬೇಡದೆ
ತವರಿನ ಸಿರಿಯ ಬಯಸುವ
ತ್ಯಾಗಮಯಿ ಹೆಣ್ಣು
ಸಂಸಾರದ ಕಣ್ಣು

ಹುಟ್ಟಿದ ಮನೆಯ ಗೌರವ
ಗಂಡನ ಮನೆಯ ಸೌರಭ
ಇವೆರೆಡರ ಒಡನಾಡಿ
ಮನೆಬೆಳಗುವ ಮಹಾಲಕ್ಷ್ಮಿ

ಸಹೋದರತ್ವದ ಬೆಸುಗೆ
ಅರಳಿ ಪರಿಮಳವ ಬೀರಲಿ
ಮನಸ್ಸು ಅರಳಲಿ
ಬಾಂಧವ್ಯ ಚಿರಸ್ಮರಣೀಯ ವಾಗಿರಲಿ

**- ಜೆಂಬಿಗಿ ಮೃತ್ಯುಂಜಯ**
ದಾವಣಗೆರೆ


**ಮನೆ ಕೆಲಸಕ್ಕೆ ಬೇಕಾಗಿದ್ದಾರೆ**
ವಿದ್ಯಾನಗರದ ಮನೆಯಲ್ಲಿ ಅಡುಗೆ ಮತ್ತು ಮನೆ ಕೆಲಸ ಮಾಡುವ ಲಿಂಗಾಯತ ಹೆಣ್ಣು ಮಗಳು ಬೇಕಾಗಿದ್ದಾರೆ.
ಸಂಪರ್ಕಿಸಿ : 72089 61824

**3 BHK ಸೆಮಿ ಫರ್ನಿಷ್ಡ್ ಫ್ಲಾಟ್ ಲೀಸ್‌ಗೆ ಇದೆ**
ವಿದ್ಯಾನಗರದ ಕೊನೆಯ ಬಸ್ ಸ್ಟಾಪ್ ಬಳಿ ಇರುವ ಅಪಾರ್ಟ್‌ಮೆಂಟ್‌ನಲ್ಲಿ.
95913 60143

**ಸೈಟ್‌ಗಳು ಮಾರಾಟಕ್ಕಿವೆ**
PB ರೋಡಿಗೆ ಹತ್ತಿರ ಶನೀಶ್ವರ ದೇವಸ್ಥಾನ ಹಿಂಭಾಗದಲ್ಲಿ ಕಾದಪ್ಪ ನವರ ಲೇಔಟ್‌ನಲ್ಲಿ 30x40, 30x40 West ಅಕ್ಕ ಪಕ್ಕ 60x40 West Rate: 1700
ಐನಳ್ಳಿ ಚನ್ನಬಸಪ್ಪ ಏಜೆಂಟ್
93410 14130, 99166 12110

**SERVICES**
1. EC 2.Khatha Extract 3.Khatha Change 4.Loans 5.Registration
Call: 96325 54524

**ಇಂಡಿಪೆಂಡೆಂಟ್ ಮನೆ ಲೀಸಿಗೆ ಬೇಕಾಗಿದೆ**
3 BHK, 4 BHK ಮನೆ ಎಸ್‌ಎಸ್ ಬಡಾವಣೆ A ಅಥವಾ B ಬ್ಲಾಕ್ ನಲ್ಲಿ ಬೇಕಾಗಿದೆ
ಸಂಪರ್ಕಿಸಿ : 9844098780

**ಬಾಡಿಗೆಗೆ ಮನೆಗಳು ದೊರೆಯುತ್ತವೆ**
3 Bed Room ಮನೆ, 2 Bed Room ಮನೆ ಇಂಡಿಪೆಂಡೆಂಟ್ ಹೌಸ್ ಮನೆ
ದಕ್ಷಿತ್ ಐನಳ್ಳಿ ಏಜೆಂಟ್
77955 06795

**ರೂಂಗಳು ಬಾಡಿಗೆಗೆ ಇವೆ**
ವಿದ್ಯಾವಿಕಾಸ ಕಾನ್ವೆಂಟ್ ಶಾಲೆ ನಡೆಸುತ್ತಿದ್ದ ಕಟ್ಟಡ ಮೊದಲನೇ ಮಹಡಿಯಲ್ಲಿ ನಾಲ್ಕು ರೂಂ, ಎರಡನೆ ಮಹಡಿಯಲ್ಲಿ ಎರಡು ರೂಂ, ಕಾಮನ್ ಬಾತ್ ರೂಂ ಉಳ್ಳ ರೂಂಗಳು ಆಫೀಸ್, ಫೈನಾನ್ಸ್ ಕಛೇರಿ, ಕೋಚಿಂಗ್ ಕ್ಲಾಸ್ ಇತರೆ ಆಫೀಸ್‌ಗಳಿಗೆ ಯೋಗ್ಯವಾಗಿದ್ದು ಬಾಡಿಗೆಗೆ ಇವೆ. ವಿಚಾರಿಸಿ. ಶ್ರೀ ಅಮರೇಶ್ವರ ಕೃಪೆ 15ನೇ ಕ್ರಾಸ್, 2ನೇ ಮೇನ್ ಕೆ.ಟಿ.ಜೆ ನಗರ, ದಾವಣಗೆರೆ.
94484 15049

**WANTED**
1. Recepionist Cum computer operator 2. Lab technician any Diploma in laboratory tech 3. X ray technician
SHILPA DIAGNOSTICS
MCC B Block Near Swimming Pool, Davangere.
98440 65638

**ಸೈಟ್‌ಗಳು ಮಾರಾಟಕ್ಕಿವೆ**
S S 'B' Block ನಲ್ಲಿ Indoor ಸ್ಟೇಡಿಯಂ ಹತ್ತಿರ 40x60 West 40x51 ಗ್ಲಾಸ್ ಹೌಸ್ ಹತ್ತಿರ. 65x147 East
ಐನಳ್ಳಿ ಚನ್ನಬಸಪ್ಪ ಏಜೆಂಟ್
99166 12110

**ಮನೆ ಬಾಡಿಗೆಗೆ ಇದೆ**
5 BHK ಮನೆ ಬಾಡಿಗೆಗೆ ಇದೆ ಜೆ.ಹೆಚ್. ಪಟೇಲ್ ಬಡಾವಣೆ, ದಾವಣಗೆರೆ.
ಫೋ. : 99001 14491

**ಸೈಟು ಮಾರಾಟಕ್ಕಿದೆ**
ಪಿ.ಜೆ. ಬಡಾವಣೆ 3ನೇ ಮೇನ್ ರೋಡ್, 80x60 East
ಸಂದೀಪ್
73490 28185

**ಸೈಟ್‌ಗಳು ಮಾರಾಟಕ್ಕಿವೆ**
ಹೊಸ ಬನಶಂಕರಿ ಲೇಔಟ್‌ನಲ್ಲಿ Old ಬನಶಂಕರಿ ಲೇಔಟ್‌ನಲ್ಲಿ 50x70 West, 40x60 East, 40x50, 40x50 West ಅಕ್ಕ ಪಕ್ಕ, 30x35 West
ಐನಳ್ಳಿ ಚನ್ನಬಸಪ್ಪ ಏಜೆಂಟ್
93410 14130, 99166 12110

**ಕೆಲಸಕ್ಕೆ ಬೇಕಾಗಿದ್ದಾರೆ**
ಎಂಇಎಸ್ ಪೌಢ ಶಿಕ್ಷಣ ಸಂಸ್ಥೆ ಆಂಜನೇಯ ಬಡಾವಣೆ ದಾವಣಗೆರೆ ಶಾಲೆಗೆ ಆಯಾ ಕೆಲಸ, ಅಡುಗೆ ಸಹಾಯಕರು ಬೇಕಾಗಿದ್ದಾರೆ.
ಈ ಕೂಡಲೇ ಸಂಪರ್ಕಿಸಿ: 9880436414, 9880030171

**School bus for sale**
2004 model, 24 seater school bus with good condition is for sale in Davanagere
Interested parties
9880030171

**ಸೇಲ್ಸ್ ಮ್ಯಾನ್ ಬೇಕಾಗಿದ್ದಾರೆ**
ಆಕರ್ಷಕ ಕಮೀಷನ್
ಆಕರ್ಷಕ ಬೋನಸ್
ಪ್ರಕಾಶ್ ಕಾಫಿ ವರ್ಕ್ಸ್
ವಿಜಯಲಕ್ಷ್ಮಿ ರಸ್ತೆ, ದಾವಣಗೆರೆ
88619 39467, 97401 53513

**ಬೇಕಾಗಿದ್ದಾರೆ**
ಮನೆಯ ಹೊರಗಡೆ ಕೆಲಸ ಮಾಡಲು (ಕಾಂಪೌಂಡ್‌ನಲ್ಲಿ) ಹುಡುಗರು ಬೇಕಾಗಿದ್ದಾರೆ.
90196 11201

**ಬೇಕಾಗಿದ್ದಾರೆ**
ಹಿರಿಯ ಪ್ರಾಥಮಿಕ ಹಾಗೂ ಪ್ರೌಢಶಾಲೆಗೆ ಹಿಂದಿ ಬೋಧಿಸುವ ಶಿಕ್ಷಕರು ಬೇಕಾಗಿದ್ದಾರೆ.
ನಂದಗೋಕುಲ ಆಂಗ್ಲ ಮಾಧ್ಯಮ ಶಾಲೆ,
ದೇವರಾಜ ಅರಸು ಬಡಾವಣೆ, 'ಸಿ' ಬ್ಲಾಕ್, 6ನೇ ಕ್ರಾಸ್, ಆರ್.ಟಿ.ಓ. ಕಛೇರಿ ಹಿಂಭಾಗ, ಕೊಂಡಜ್ಜಿ ರಸ್ತೆ, ದಾವಣಗೆರೆ
ಕಾರ್ಯದರ್ಶಿ, ಮೊ. 99640 17729

**AVOID MOSQUITOES**
Mosquito Net for Doors and windowsh, MDF Design Boards available.
SRI GOWRI ENTERPRISES
# 7C2, 4th Cross, Karur Industrial Area, Near D.C Office, P.B Road, Davangere.
72049 94628

**ಕೆಲಸಕ್ಕೆ ಬೇಕಾಗಿದ್ದಾರೆ**
ಹೋಲ್‌ಸೇಲ್ ಔಷಧಿ ಅಂಗಡಿಯಲ್ಲಿ ಕೆಲಸ ಮಾಡಲು ಪಾರ್ಟ್ ಟೈಂ ಹಾಗು ಫುಲ್ ಟೈಂ ಕೆಲಸಕ್ಕೆ ಮಹಿಳೆಯರು ಬೇಕಾಗಿದ್ದಾರೆ. ಅನುಭವ ಇರುವವರಿಗೆ ಹಾಗೂ ದಾವಣಗೆರೆಯಲ್ಲಿ ವಾಸವಿರುವವರಿಗೆ ಆದ್ಯತೆ.
ವಿಳಾಸ: ವೆಂಕಟೇಶ್ವರ ಫಾರ್ಮಾಸ್ಯೂಟಿಕಲ್ಸ್
2ನೇ ಮೇನ್, ಕೆ.ಟಿ.ಜೆ. ನಗರ, ದಾವಣಗೆರೆ-2.
86607 75329

**ಬೇಕಾಗಿದ್ದಾರೆ**
ದಾವಣಗೆರೆಯ ಶ್ರೀ ವಿನಾಯಕ ನಗರ ಸಾರಿಗೆ ಬಸ್ಸಿನಲ್ಲಿ ಕೆಲಸ ಮಾಡಲು ಡ್ರೈವರ್‌ಗಳು ಮತ್ತು ಪುರುಷ ಹಾಗೂ ಮಹಿಳಾ ಕಂಡಕ್ಟರ್‌ಗಳು ಬೇಕಾಗಿದ್ದಾರೆ.
ಸಂಪರ್ಕಿಸಿ : 63647 83999

**ಹೋಟೆಲ್ ಕೆಲಸಕ್ಕೆ ಬೇಕಾಗಿದ್ದಾರೆ**
* ಸಂಬಳ - ಅಡುಗೆ ಭಟ್ರು-30000/-
* ತಂದೂರಿ ಭಟ್ರು-27000/-
* ಸಪ್ಲೈಯರ್- 12000/-
ಫೋ. : 99022 49393

**TO-LET FOR OFFICE SPACE**
800 Sq ft 1st floor with Bathroom, Above Vijayalakshmi Electricals, MANDIPET, DAVANGERE.
98444 88854

**ಮಾರ್ಕೆಟಿಂಗ್ ಎಕ್ಸಿಕ್ಯೂಟಿವ್ ಬೇಕಾಗಿದ್ದಾರೆ**
ಭಾಗ್ಯಲಕ್ಷ್ಮಿ ಎಲೆಕ್ಟ್ರಿಕಲ್ಸ್
# 17911, ಮಹಾವೀರ ರೋಡ್, ದಾವಣಗೆರೆ-1.
80504 01612, 94484 43009

**WANTED**
Boys & Girls for job. Training will be provided.
97397 57635

**ಬೇಕಾಗಿದ್ದಾರೆ**
ಹೈಯರ್ ಪ್ರೈಮರಿ ಶಾಲೆಗೆ ಟೀಚರ್ಸ್ ಬೇಕಾಗಿದ್ದಾರೆ. ಹೆಣ್ಣು ಮಕ್ಕಳಿಗೆ ಆದ್ಯತೆ. PUC, TCH, BA., BEd., B.Sc., BSc., B.Com., D.Ed., ತತ್ಸಮ ಡಿಗ್ರಿ
ಫೋ. : 97435 95261
97435 22391

**ಹುಡುಗರು ಬೇಕಾಗಿದ್ದಾರೆ**
ಪೈಪ್ ಹಾಗೂ ಸ್ಯಾನಿಟರಿ ಅಂಗಡಿಯಲ್ಲಿ ಕೆಲಸ ಮಾಡಲು ಹುಡುಗರು ಬೇಕಾಗಿದ್ದಾರೆ. ಅನುಭವವಿದ್ದವರಿಗೆ ಆದ್ಯತೆ
97388 27452
74110 25934

**ಟ್ಯಾಂಕ್ ಕ್ಲೀನಿಂಗ್**
ಮನೆಯ ನೀರಿನ ತೊಟ್ಟಿ, ಟ್ಯಾಂಕ್‌ಗಳು ಗಲೀಜಾಗಿದ್ದರೆ ಯಂತ್ರಗಳನ್ನು ಬಳಸಿ ನಾವು ಕ್ಲೀನ್ ಮಾಡುತ್ತೇವೆ.
ಅತ್ಯುತ್ತಮ ಸೇವೆಗೆ ಸಂಪರ್ಕಿಸಿ
99863 61250
91132 85992

**ಮನೆ ಲೀಸಿಗೆ ಇದೆ**
2 BHK 1 Attach (only for veg) ನಿಜಲಿಂಗಪ್ಪ ಬಡಾವಣೆ # 203, MORE ಹಿಂಭಾಗ
ಸಂಪರ್ಕಿಸಿ : 99160 11782

**ಮನೆ ಬಾಡಿಗೆಗೆ ಇದೆ**
ಕಮರ್ಷಿಯಲ್ ಬಳಕೆಗೆ ಸರಸ್ವತಿ ನಗರ ನಿಟ್ಟುವಳ್ಳಿ ಮುಖ್ಯರಸ್ತೆಗೆ ಹೊಂದಿಕೊಂಡಿರುವ 15x40 ಅಡಿ ಅಳತೆಯುಳ್ಳ ಮನೆ ಕಮರ್ಷಿಯಲ್ ಬಳಕೆಗೆ ಬಾಡಿಗೆಗೆ ಇದೆ
98444 97008, 70194 19268

**ಈಶ್ವರಿ ತರಬೇತಿ ಕೇಂದ್ರ**
ಫ್ಯಾಷನ್ ಡಿಸೈನಿಂಗ್ & ಟೈಲರಿಂಗ್ ಕೋರ್ಸ್
ಸಮಯ : ಬೆಳಿಗ್ಗೆ 10ರಿಂದ 5ರ ವರೆಗೆ. ಅನುಭವಿ ತರಬೇತುದಾರರಿಂದ ಕೋರ್ಸ್ ನಡೆಸಲಾಗುವುದು.
ಸಂಪರ್ಕಿಸಿ : ವಿಳಾಸ : ಶ್ರೀ ಜಗದ್ಗುರು ರೇಣುಕಾ ಕೃಪಾ #2798 ಜಿ. ಕ್ರಾಸ್, 3ನೇ ಮೇನ್, 'ಬಿ'ಬ್ಲಾಕ್ , ಎಸ್.ಎಸ್. ಲೇಔಟ್.
97316 50435, 95358 15543

**ಬಾಡಿಗೆಗೆ ಇದೆ**
ಹೊಸ ವಾಣಿಜ್ಯ ಕಟ್ಟಡ (9500 sqft) ದಾವಣಗೆರೆಯ ಹದಡಿ ರಸ್ತೆ ಯಲ್ಲಿ Celler Ground, 1st & 2nd Floors, Lift (10M) Wash Rooms (L&G), Parking
94806 52219

**ಸೈಟ್ ಮಾರಾಟಕ್ಕಿದೆ**
DCM Layout, ಶಕ್ತಿ ನಗರ, 3ನೇ ಹಂತದ ಹತ್ತಿರ, ಡೋರ್ ನಂಬರ್ ಸೈಟ್ ಮಾರಾಟಕ್ಕಿದೆ.
ಮಧ್ಯವರ್ತಿಗಳಿಗೆ ಅವಕಾಶವಿಲ್ಲ
97408 15926

**ಮನೆ ಬಾಡಿಗೆಗೆ ಇದೆ**
24 Hr ನೀರಿನ ಸೌಲಭ್ಯವಿರುವ ನೆಲಮಹಡಿ ಡಬಲ್ ಬೆಡ್ ರೂಂ, ಮನೆ ಬಾಡಿಗೆಗೆ ಇದೆ D.No: 285, 6th ಮೇನ್ 3rd Cross, DCM ಟೌನ್ ಶಿಪ್ ದಾವಣಗೆರೆ (ಸಸ್ಯಹಾರಿಗಳಿಗೆ ಮಾತ್ರ)
93534 19866

**ಬೇಕಾಗಿದ್ದಾರೆ**
ಆಪ್ಟಿಕಲ್ಸ್ ಶಾಪ್‌ನಲ್ಲಿ ಕೆಲಸ ಮಾಡಲು ಬೇಕಾಗಿದ್ದಾರೆ
81975 56523

**ಬೇಕಾಗಿದ್ದಾರೆ**
ವೃತ್ತಿಪರ ವ್ಯಕ್ತಿಯನ್ನು ನಮ್ಮ ತಂಡಕ್ಕೆ ಸೇರಿಸಿಕೊಳ್ಳಲು ಬಯಸುತ್ತೇವೆ. ಒಂದು ಅಥವಾ ಎರಡು ವರ್ಷಗಳ ಅನುಭವದ ಆದ್ಯತೆಯ ಮೇರೆಗೆ ರಿಜಿಸ್ಟರ್ಡ್ ಫಾರ್ಮಾಸಿಸ್ಟ್ ಅಗತ್ಯವಿದೆ.
ಸ್ಥಳ : ದಾವಣಗೆರೆ ಸಿಟಿ
96320 56056, 99869 06863

**ಮನೆ ಬಾಡಿಗೆಗೆ**
ಎಂಸಿಸಿ 'ಬಿ' ಬ್ಲಾಕ್ ಡೋರ್ ನಂ: 3233 11ನೇ ಮೇನ್, 3ನೇ ಕ್ರಾಸ್ ನಲ್ಲಿ 2 ಬೆಡ್ ರೂಂ ಮುನಿಸಿಪಲ್ ಹಾಗೂ ಬೋರ್ ನೀರಿನ ಸೌಕರ್ಯ ವಿರುವ ಮನೆ ಬಾಡಿಗೆಗೆ ಇದೆ
94804 41581

**INTRODUCING MENTAL MATHS**
(2nd to 7th STD)
Bruit Abacus and Vedic Maths
Near Amrith Vidyalaya School
97390 66956

**ಓಂ ಸಾಯಿ**
ಬೆಣ್ಣೆ ದೋಸೆ & ಗೀ ದೋಸೆ
ಕಾರ್ನರ್ 4ನೇ ಮೇನ್, ಪಿ.ಜೆ. ಬಡಾವಣೆ ದಾವಣಗೆರೆ.
81052 83114

**WANTED**
Job Position: Sales & Marketing (Male)
Accountant (Female)
Company : Gnanam Interiors & Exteriors
Authorised partner for Saint Gobain & Fundermax
Place: Hadadi road, Davanagere
Qualification: Any degree with good communication skills.
Anand.G.M 95133 01260

**PART TIME WORK**
ಬಿಡುವಿನ ವೇಳೆಯಲ್ಲಿ ನೀವು ಕುಳಿತ ಸ್ಥಳದಲ್ಲಿಯೇ
ಕೆಲಸ / JOB
ವಾರದ ಸಂಬಳ : 3000 ರಿಂದ 5000 ಮೇಲ್ಪಟ್ಟು. ಕೋರಿಯರ್ ಸೌಲಭ್ಯವಿದೆ.
91084 18233, 97432 17566

**ಪ್ರವೇಶ ಪ್ರಕಟಣೆ**
ಡಿಪ್ಲೋಮಾ ಇನ್ ಪೇಷೆಂಟ್ ಕೇರ್ ನರ್ಸಿಂಗ್ - 2ವರ್ಷ
ವಿದ್ಯಾರ್ಹತೆ: SSLC/PUC/ITI ಪಾಸ್/ಫೇಲ್
ಖಾಸಗಿ ಆಸ್ಪತ್ರೆ, ನರ್ಸಿಂಗ್ ಹೋಂಗಳಲ್ಲಿ ನರ್ಸ್‌ಗಳಾಗಿ ಕೆಲಸ ಮಾಡಬಹುದು. ಯಶಸ್ವಿ 15ನೇ ವರ್ಷದಲ್ಲಿ
ಮಾನಸ ಕಮ್ಯೂನಿಟಿ ಕಾಲೇಜ್ (ರಿ)
LK ಕಾಂಪ್ಲೆಕ್ಸ್, 1ನೇ ಮಹಡಿ, ಅಶೋಕ ರಸ್ತೆ, 1ನೇ ಕ್ರಾಸ್, ಆಹಾರ್ 2000 ಹಿಂಭಾಗ ರಸ್ತೆ, ದಾವಣಗೆರೆ-577002.
97402 58276

**ಮನೆ ಬಾಡಿಗೆಗೆ ಇದೆ**
ಜಯನಗರದ ಸಾಯಿ ದೇವಸ್ಥಾನ ಹಿಂಭಾಗದಲ್ಲಿ ಕೆಳಗಿನ ಮನೆ (ನೆಲ ಮಹಡಿ) ಡಬಲ್ ಬೆಡ್ ರೂಮ್ ಬಾಡಿಗೆಗೆ ಇದೆ.
97311 60922

**ಓದುಗರ ಗಮನಕ್ಕೆ**
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ - ವಸ್ತು ಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿ ಯಾಗುವುದಿಲ್ಲ. -ಜಾಹೀರಾತು ವ್ಯವಸ್ಥಾಪಕರು

**WANTED**
ANY ENGINEER INTERESTED IN 3D PRINTING JOB
CONTACT :
78998 72391

**Duplex Villa House for sale**
4 BHK house , 60x 50 corner building with Italian kichen, dinning hall, office room, drawing room, 4 bathrooms, pooja room, sit out balcony with vastu maintained semi furnished and two car parking, 24x 7 corporation water, borwell, solar connection available
Address: swami vivekanand badavane, 5 th main,Davanagere
Contact 7411540948

**ದೇಶದ ಪ್ರತಿಷ್ಠಿತ ಕಂಪನಿಯಲ್ಲಿ**
Part Time/ full time Financial Advisor ಆಗಿ ಕೆಲಸ ಮಾಡುವ ಮುಖಾಂತರ ಪ್ರತಿ ತಿಂಗಳು 10 ಸಾವಿರದಿಂದ 50 ಸಾವಿರದವರೆಗೂ ಆದಾಯವನ್ನು ಗಳಿಸಲು ಸಂಪರ್ಕಿಸಿ :
Vijaya Niranjan Mylara
87926 73593

**ಬೇಕಾಗಿದ್ದಾರೆ**
ಕೆಲಸಕ್ಕೆ ಹುಡುಗ-ಹುಡುಗಿಯರು ಬೇಕಾಗಿದ್ದಾರೆ.
ಶ್ರೀಧರ್ ಅಕ್ವೇರಿಯಂ
ಚರ್ಚ್ ರಸ್ತೆ, ಎಂಸಿಸಿ 'ಎ' ಬ್ಲಾಕ್, ದಾವಣಗೆರೆ.
98449 76373

**ಸೈಟ್‌ಗಳು ಮಾರಾಟಕ್ಕಿವೆ**
ದಾವಣಗೆರೆ ರಾಮನಗರ, ಎಸ್.ಎಸ್. ಆಸ್ಪತ್ರೆ ಹಿಂಭಾಗದಲ್ಲಿ ಸುಲಭ ಕಂತುಗಳಲ್ಲಿ ಸೈಟುಗಳು ಮಾರಾಟಕ್ಕಿವೆ. (Rs 1,500/-Sqft)
ಹುಲ್ಲುಮನೆ ಪ್ರಾಪರ್ಟೀಸ್
ಫೋ.: 95135 03000

**WANTED**
Antique Akshaya Silver & Gold
1. Tele callers 2. Marketing Boys (SSLC Pass/Fail) 3. Sales Girls (1 to 2 Years Experienced)
97392 94066, 76193 28978

**ಮನೆ ಬಾಡಿಗೆಗೆ ಇದೆ**
ದೇವರಾಜ ಅರಸು ಬಡಾವಣೆ ಸಿ ಬ್ಲಾಕ್‌ನಲ್ಲಿ 30x45, 2 BHK, ಸುಸಜ್ಜಿತ ಮನೆ ಬಾಡಿಗೆಗೆ ಇದೆ. ಸ್ವಿಮ್ಮಿಂಗ್ ಪೂಲ್ ಹತ್ತಿರ. ಸಂಪರ್ಕಿಸಿ :
97385 81379
63602 37657

**NA ಲ್ಯಾಂಡ್ ನೆಲ ಬಾಡಿಗೆಗೆ**
ದಾವಣಗೆರೆ ತಾಲ್ಲೂಕಿನ ಹೆಬ್ಬಾಳು ಗ್ರಾಮದ ಟೋಲ್ ಬಳಿ 1 ಎಕರೆ 32 ಗುಂಟೆ ರಾಷ್ಟ್ರೀಯ ಹೆದ್ದಾರಿಗೆ ಲಗತ್ತಾಗಿದ್ದು ನೆಲ ಬಾಡಿಗೆಗೆ ಇದೆ.
97410 59755, 78929 75077

**ADMISSION OPEN 2022**
**MBBS**
India & Abroad - NEET Required
MCC Screening test must be practice in India
Pharma. D, BSc. Nursing
P.B. BSc (N) D. Pharma
BPT, B.Pharm
B.Sc., MLT, Cardiac, Perfusion, Agri, Radiology
Conditions Apply
99160 67627, 80501 08120

**MBBS**
Aspirants Looking For MBBS Admission in Russia With Minimum Criteria and Low Budget, Call or Visit
+91 7022 321 123
Doctors Query Pvt Ltd.,
www.doctorsquery.com

**For Sale**
2BHK Flat for Sale, MCC `B' Block, davanagere.
Contact :
96863 96992, 99001 18054

ಶ್ರೀ ಗುರು ಮರುಳಸಿದ್ದೇಶ್ವರ ಸ್ವಾಮಿ ಸೇವಾ ಸಂಸ್ಥೆ (ರಿ.)
**ಹಿಂದೂ ವಧು-ವರರ ಮಾಹಿತಿ ಕೇಂದ್ರ**
www.hindusmatrimony.com
ನಮ್ಮಲ್ಲಿ ಎಲ್ಲಾ ತರಹದ ಹಿಂದೂ ವಧು-ವರರಿಗಾಗಿ ಸಂಪರ್ಕಿಸಿ.
ವಿಳಾಸ: ಬಾಣಾಪುರಮಠ ಹಾಸ್ಪಿಟಲ್ ಎದುರು, 8ನೇ ಮೇನ್, ಪಿ.ಜೆ. ಬಡಾವಣೆ, ದಾವಣಗೆರೆ-2.
94481-59303, 94834 63783

**ಸಂಘ ಸಂಸ್ಥೆಗಳ**
ಬೈಲಾ ನೋಂದಣಿ ನವೀಕರಣ ಮತ್ತು ಆಡಿಟ್‌ಗಾಗಿ ಸಂಪರ್ಕಿಸಿ :
Meghana Associates®
99809 16126

**GST Registration, INCOME TAX Cases, Audit and for Account Maintenances**
Meghana Associates®
99809 16126

# ಸಮಾಜಮುಖಿ ಚಿಂತನೆಗಳಿದ್ದರೆ ಮಾತ್ರ ಸನ್ಯಾಸಿ ಜೀವನ ಸಾರ್ಥಕ

## ಕರಗುಂದದ 'ಮತ್ತೆ ಕಲ್ಯಾಣ' ಕಾರ್ಯಕ್ರಮದಲ್ಲಿ ಸಾಣೇಹಳ್ಳಿಯ ಶ್ರೀ ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮೀಜಿ




ಅರಸಿಕೆರೆ,ಆ.11- ಸಂಸ್ಕೃತಿಯ ಬೆಳವಣಿಗೆ ಜನರ ರೀತಿ ನೀತಿಗಳನ್ನು ಅವಲಂಬಿಸಿರುತ್ತದೆ. ಸನ್ಯಾಸಿ ಮತ್ತು ಸಂಸಾರಿ ಜೀವನಗಳೆರಡೂ ಶ್ರೇಷ್ಠವೇ ಆಗಿವೆ, ಗಂಡ-ಹೆಂಡತಿಯರ ನಡುವೆ ಹೊಂದಾಣಿಕೆಯಿದ್ದರೆ ಸಂಸಾರ ಸುಖವಾಗಿರಲು ಸಾಧ್ಯ. ಅಂತೆಯೇ ಸಮಾಜಮುಖಿ ಚಿಂತನೆಗಳಿದ್ದರೆ ಮಾತ್ರ ಸನ್ಯಾಸಿ ಜೀವನ ಸಾರ್ಥಕವಾಗಲು ಸಾಧ್ಯ ಎಂದು ಸಾಣೇಹಳ್ಳಿಯ ಶ್ರೀ ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮೀಜಿ ನುಡಿದರು.

ಇಲ್ಲಿನ 'ಮತ್ತೆ ಕಲ್ಯಾಣ' ಸಮಿತಿ - ಕರಗುಂದ ಮತ್ತು ಸಾಣೇಹಳ್ಳಿ ಶ್ರೀ ತರಳಬಾಳು ಜಗದ್ಗುರು ಶಾಖಾಮಠದ ಸಂಯುಕ್ತಾಶ್ರಯದಲ್ಲಿ ಕರಗುಂದ ಹೆಬ್ಬಾಗಿಲು ಸರ್ಕಲ್‌ನಲ್ಲಿ ಆಯೋಜಿಸಿದ್ದ 'ಮತ್ತೆ ಕಲ್ಯಾಣ' ಕಾರ್ಯಕ್ರಮದ ನೇತೃತ್ವ ವಹಿಸಿದ್ದ ಶ್ರೀಗಳು ಮಾತನಾಡಿದರು.

ಬಸವಣ್ಣನವರನ್ನು ಸನ್ಯಾಸಿಗಳೂ ಗೌರವಿಸುತ್ತಾರೆ, ಸಂಸಾರಿಗಳೂ ಗೌರವಿಸುತ್ತಾರೆ. ಶ್ರೀ ಶಿವಕುಮಾರ ಶಿವಾಚಾರ್ಯ ಸ್ವಾಮಿಗಳು ಸಂಸಾರಿಯಾದರೆ ಬಸವಣ್ಣನಂತೆ, ಸನ್ಯಾಸಿಯಾದರೆ ಅಕ್ಕಮಹಾದೇವಿಯಂತೆ ಬದುಕಬೇಕು ಎನ್ನುತ್ತಿದ್ದರು. ಸನ್ಯಾಸಿಗಳಿಗೆ ಪಾರದರ್ಶಕ ಬದುಕು ಬಹಳ ಮುಖ್ಯ.

ಒಳಗೊಂದು - ಹೊರಗೊಂದು ಇರಬಾರದು. ಆದರ್ಶಗಳು ಮುಖ್ಯ ವಾದರೆ ಸಂಸಾರಿಗಳು, ಸನ್ಯಾಸಿಗಳು ಸುಖ ವಾಗಿರಲು ಸಾಧ್ಯ ಎಂದರು.

ಚಿಕ್ಕನಾಯಕನಹಳ್ಳಿ ಗೋಡೆಕೆರೆ ಸಂಸ್ಥಾನದ ಶ್ರೀ ಮೃತ್ಯುಂಜಯ ದೇಶೀಕೇಂದ್ರ ಸ್ವಾಮಿಗಳು ಮಾತನಾಡಿ, ಜನತೆಯ ಬಳಿಗೇ ಧರ್ಮವನ್ನು ಕೊಂಡೊಯ್ಯುವ ಮಹತ್ಕಾರ್ಯವನ್ನು ಪಂಡಿತಾರಾಧ್ಯ ಶ್ರೀಗಳು 'ಮತ್ತೆ ಕಲ್ಯಾಣ'ದ ಮೂಲಕ ಮಾಡುತ್ತಿದ್ದಾರೆ. ಸಮಾಜದಲ್ಲಿರುವ ಎಲ್ಲರಿಗೂ ಅಭಿವ್ಯಕ್ತಿ ಸ್ವಾತಂತ್ರ್ಯವನ್ನು ಕೊಟ್ಟದ್ದು ವಚನ ಚಳುವಳಿ. ಅಸಮಾನತೆಯನ್ನು ಹೋಗಲಾಡಿಸಿ ಸಮ ಸಮಾಜವನ್ನು ನಿರ್ಮಿಸಿದವರು ಶರಣರು. ಶರಣರು ಅಸಮಾನತೆಗಳ ಬಗ್ಗೆ ಅನುಭವ ಮಂಟಪದಲ್ಲಿ ಚರ್ಚೆ ಮಾಡುತ್ತಿದ್ದ ರೀತಿಯಲ್ಲಿಯೇ ಇಲ್ಲಿ ಪಂಡಿತಾರಾಧ್ಯ ಶ್ರೀಗಳು ಸಂವಾದ ನಡೆಸುತ್ತಿದ್ದಾರೆ ಎಂದು ನುಡಿದರು.

'ಶರಣರ ಕುಟುಂಬ ಪ್ರೀತಿ' ಕುರಿತಂತೆ ಲಿಂಗಸಗೂರಿನ ನಿವೃತ್ತ ಪ್ರಾಚಾರ್ಯೆ ಗಂಗಮ್ಮ ಸತ್ಯಂಪೇಟೆ ಮಾತನಾಡಿ, ಶರಣರು ಕಲಾತ್ಮಕವಾಗಿ, ಕಾವ್ಯಾತ್ಮಕವಾಗಿ ಬರೆಯಬೇಕೆಂದು ವಚನಗಳನ್ನು ಬರೆದವರಲ್ಲ. ಅವರು ಬದುಕನ್ನು ಕಲಾತ್ಮಕವಾಗಿಸುವ ಕಲೆಯನ್ನು ಕರಗತ ಮಾಡಿಕೊಂಡಿದ್ದರು. ನೋಡುವುದು, ಕೇಳುವುದು, ಉಣ್ಣುವುದು, ಉಡುವುದೂ ಸೇರಿದಂತೆ ಸಂಸಾರ ಮಾಡುವುದೂ ಒಂದು ಕಲೆ. ಶರಣರು, ಭಗವಂತ ಕೊಟ್ಟ ಬದುಕು ಅಪೂರ್ವವಾದುದು, ಅರಿವಿನ ಜನ್ಮ, 'ಈ ಜನ್ಮ ಶಿವನನ್ನು ಒಲಿಸಲು ಬಂದ ಪ್ರಸಾದ ಕಾಯ' ಇದನ್ನು ಅರಿತು ಮಾನವನಾಗಬೇಕು.

ಒಡೆದು ಹೋಗಿರುವ ಮನಸುಗಳನ್ನು ಕಟ್ಟುವುದೇ ಈ ಕಾರ್ಯಕ್ರಮದ ಉದ್ದೇಶ. ಈ ಕಾರ್ಯದಲ್ಲಿ ನಾವೆಲ್ಲರೂ ಪಾಲ್ಗೊಳ್ಳೋಣ ಎಂದರು.

ವೇದಿಕೆಯ ಮೇಲೆ ಶಾಸಕರಾದ ಲಿಂಗೇಶ್, ಗ್ರಾನೈಟ್ ಉದ್ಯಮಿ ರಾಜಶೇಖರ್, ಗ್ರಾಮ ಪಂಚಾಯತಿ ಅಧ್ಯಕ್ಷೆ ಶೃತಿ, ರಾಣೇಬೆನ್ನೂರಿನ ಅರಕೆರೆ ಮಲ್ಲೇಶಪ್ಪ ಮೊದಲಾದವರು ಉಪಸ್ಥಿತರಿದ್ದರು.

## ಭದ್ರಾ ಜಲಾಶಯಕ್ಕೆ ಬಾಗಿನ ಅರ್ಪಿಸಿದ ನಗರ ಪಾಲಿಕೆಯ ಕಾಂಗ್ರೆಸ್ ಸದಸ್ಯರು



ದಾವಣಗೆರೆ, ಆ.11- ಭದ್ರಾ ಜಲಾಶಯ ಭರ್ತಿಯಾದ ಹಿನ್ನೆಲೆಯಲ್ಲಿ ಮಹಾನಗರ ಪಾಲಿಕೆಯ ವಿರೋಧ ಪಕ್ಷದ ನಾಯಕ ಜಿ. ಎಸ್. ಮಂಜುನಾಥ್ ಗಡಿಗುಡಾಳ್ ನೇತೃತ್ವದಲ್ಲಿ ಕಾಂಗ್ರೆಸ್ ಸದಸ್ಯರು ಲಕ್ಕವಳ್ಳಿಗೆ ತೆರಳಿ ಭದ್ರಾ ಜಲಾಶಯಕ್ಕೆ ಬಾಗಿನ ಅರ್ಪಿಸಿದರು.

ಭದ್ರಾ ನದಿ ದಾವಣಗೆರೆ ಜಿಲ್ಲೆಯ ಜನರ ಜೀವನಾಡಿ. ಲಕ್ಷಾಂತರ ಹೆಕ್ಟೇರ್‌ಗೆ ಈ ನೀರೇ ಆಧಾರ. ಮಲೆನಾಡು ಸೇರಿದಂತೆ ಎಲ್ಲೆಡೆ ಮಳೆಯಾಗುತ್ತಿದ್ದು, ಈಗಾಗಲೇ ಭದ್ರಾ ಅಣೆಕಟ್ಟು ಗರಿಷ್ಠ ಮಟ್ಟ ತಲುಪಿದೆ. ಈ ಕಾರಣಕ್ಕೆ ಸಂತಸ ವ್ಯಕ್ತಪಡಿಸಿರುವ ಪಾಲಿಕೆಯ ಕಾಂಗ್ರೆಸ್ ಸದಸ್ಯರು ಜಲಾಶಯಕ್ಕೆ ತೆರಳಿ ಬಾಗಿನ ಅರ್ಪಿಸಿ ಒಳ್ಳೆಯದಾಗಲಿ ಎಂದು ಪ್ರಾರ್ಥಿಸಿದರು.

ಬಾಗಿನ ಅರ್ಪಿಸುವ ವೇಳೆ ಪಾಲಿಕೆ ಸದಸ್ಯರಾದ ಎ. ನಾಗರಾಜ್, ಸವಿತಾ ಹುಲ್ಲುಮನೆ ಗಣೇಶ್, ಹುಲ್ಲುಮನೆ ಗಣೇಶ್, ಅಬ್ದುಲ್ ಲತೀಫ್, ಸುಧಾ ಇಟ್ಟಿಗುಡಿ, ಮಂಜುನಾಥ್ ಇಟ್ಟಿಗುಡಿ, ಉದಯಕುಮಾರ್, ಆಶಾ ಉಮೇಶ್, ಮೀನಾಕ್ಷಿ ಜಗದೀಶ್, ಜಗದೀಶ್, ವಿನಾಯಕ್ ಪೈಲ್ವಾನ್, ಎ. ಬಿ. ರಹೀಂ ಸಾಬ್ ಮತ್ತಿತರರು ಹಾಜರಿದ್ದರು.

## ಚೀಟಿ ನಿಧಿಗಳ ಮೇಲಿನ ಜಿಎಸ್‌ಟಿ ರದ್ದತಿಗೆ ಮನವಿ



ದಾವಣಗೆರೆ, ಆ. 11- ಚೀಟಿ ನಿಧಿಗಳ ಮೇಲೆ ಹೇರಲಾಗಿರುವ ಜಿಎಸ್‌ಟಿ ರದ್ದುಗೊಳಿಸಬೇಕೆಂದು ದೇಶಾದ್ಯಂತ ಹಮ್ಮಿಕೊಂಡಿರುವ ಅಭಿಯಾನದ ಭಾಗವಾಗಿ ಜಿಲ್ಲಾ ಚೀಟಿ ನಿಧಿಗಳ ಸಂಘದಿಂದ ಸಂಘದ ಜಿಲ್ಲಾಧ್ಯಕ್ಷ ರಂಗರಾವ್ (ಭಾಗ್ಯರಂಗ ಚಿಟ್ಸ್), ಉಪಾಧ್ಯಕ್ಷ ಸತ್ಯನಾರಾಯಣ ಮೂರ್ತಿ (ನವೋದಯ ಚಿಟ್ಸ್ ) ಕಾರ್ಯದರ್ಶಿ ಅಂದನೂರು ರಾಜೇಶ್ (ಅಂದನೂರು ಚಿಟ್ಸ್) ಅವರುಗಳು ದಾವಣಗೆರೆ ವಿಭಾಗದ ಜಿಎಸ್‌ಟಿ ಜಂಟಿ ಆಯುಕ್ತ ಮಹಾಂತೇಶ್ ಅವರಿಗೆ ಇಂದು ಮನವಿ ಪತ್ರ ಸಲ್ಲಿಸಿದರು.

ಪತ್ರದಲ್ಲಿ ಚೀಟಿ ನಿಧಿಗಳ ಮೇಲೆ ಹೇರಲಾಗಿರುವ ಜಿಎಸ್‌ಟಿಯಿಂದ ಮಧ್ಯಮ ಮತ್ತು ಕೆಳ ವರ್ಗದ ಜನರುಗಳಿಗೆ ಆಗುತ್ತಿರುವ ಕಷ್ಟಗಳ ಬಗ್ಗೆ ಮನವರಿಕೆ ಮಾಡಿಕೊಡಲಾಯಿತು. ಈ ವಿಷಯವನ್ನು ಅವರ ಮೇಲ್ಮಟ್ಟದ ಅಧಿಕಾರಿಗಳಿಗೆ ತಲುಪಿಸುವುದಾಗಿ ಭರವಸೆಯಿತ್ತರು.

ಈ ಸಂದರ್ಭದಲ್ಲಿ ಸಂಘದ ನಿರ್ದೇಶಕರುಗಳಾದ ರೆಡ್ಡಯ್ಯ (ಚಿನ್ನು) (ವಾಸವಾಂಬ ಚಿಟ್ಸ್), ರವಿ (ಶ್ರೀರಕ್ಷ ಚಿಟ್ಸ್), ನವೀನ್ ಜೈನ್ (ಕಶೆಟ್ಟರ್‌ಪಾಲ್ ಚಿಟ್ಸ್), ಸಿದ್ದಯ್ಯ (ಸಿದ್ದೇಶ್ವರ ಚಿಟ್ಸ್) ಮತ್ತು ಇತರರು ಉಪಸ್ಥಿತರಿದ್ದರು.

## ಬ್ಯಾಡ್ಮಿಂಟನ್ ಟೂರ್ನ್‌ಮೆಂಟ್ : ಅಭಿಷೇಕ್ ಪ್ರಥಮ




ದಾವಣಗೆರೆ, ಆ. 11- ನೇತಾಜಿ ಸುಭಾಸ್ ಚಂದ್ರಬೋಸ್ ಒಳಾಂಗಣ ಕ್ರೀಡಾಂಗಣದಲ್ಲಿ ಇಂದು ನಡೆದ ಸ್ಟೇಟ್ ರ್‍ಯಾಂಕಿಂಗ್ ಬ್ಯಾಡ್ಮಿಂಟನ್ ಟೂರ್ನ್‌ಮೆಂಟ್‌ನಲ್ಲಿ ಕೆ.ಕೆ. ಅಭಿಷೇಕ್ 17 ವರ್ಷದ ಸಿಂಗಲ್ಸ್‌ನಲ್ಲಿ ಪ್ರಥಮ, ಡಬಲ್ಸ್ ವಿಭಾಗದಲ್ಲಿ ಪ್ರಥಮ ಮತ್ತು ಮಿಕ್ಸ್ ಡಬಲ್ಸ್ ವಿಭಾಗದಲ್ಲಿ ದ್ವಿತೀಯ ಸ್ಥಾನ ಪಡೆದಿದ್ದಾರೆ.

## ಬಿಜೆಪಿ ನಾಯಕರ ಪ್ರವಾಸ

ಬೆಂಗಳೂರು, ಆ. 11 - ವಿಧಾನಸಭಾ ಚುನಾವಣೆಯ ಹಿನ್ನೆಲೆಯಲ್ಲಿ ರಾಜ್ಯ ಬಿಜೆಪಿ ನಾಯಕರು ಆಗಸ್ಟ್ 21ರಿಂದ ರಾಜ್ಯಾದ್ಯಂತ ಪ್ರವಾಸ ಮಾಡಲಿದ್ದಾರೆ ಎಂದು ಬಿಜೆಪಿ ಹಿರಿಯ ನಾಯಕ ಬಿ.ಎಸ್. ಯಡಿಯೂರಪ್ಪ ತಿಳಿಸಿದ್ದಾರೆ.

ಮುಂದಿನ ಚುನಾವಣೆಯಲ್ಲಿ ನಾನು ಸ್ಪರ್ಧಿಸುವುದಿಲ್ಲ. ಆದರೆ, ಬಿಜೆಪಿ ನಾಯಕರ ಜೊತೆಗೂಡಿ ಪಕ್ಷದ ಗೆಲುವಿಗೆ ಶ್ರಮಿಸುತ್ತೇನೆ ಹಾಗೂ ರಾಜ್ಯದಲ್ಲಿ ಬಿಜೆಪಿ ಸರ್ಕಾರ ಅಧಿಕಾರಕ್ಕೆ ತರುತ್ತೇವೆ ಎಂದಿದ್ದಾರೆ ಎಂದವರು ತಿಳಿಸಿದ್ದಾರೆ.


## ನಗರದ ಅನ್ನಪೂರ್ಣೇಶ್ವರಿ ದೇವಸ್ಥಾನ : ಇಂದು ಪೂಜೆ



ಮಾತಾ ಅನ್ನಪೂರ್ಣೇಶ್ವರಿ ದೇವಸ್ಥಾನದಲ್ಲಿ ನೂಲು ಪೂರ್ಣಿಮೆ ಪ್ರಯುಕ್ತ ಇಂದು ನವಗ್ರಹ ಹೋಮ, ಶ್ರೀ ಸತ್ಯನಾರಾಯಣ ಸ್ವಾಮಿ ಪೂಜಾ ಕಥಾ ಶ್ರೀ ಮಾತಾ ಅನ್ನಪೂರ್ಣೇಶ್ವರಿಗೆ ಮಹಾ ಮಂಗಳಾರತಿ, ಪ್ರಸಾದ ವಿನಿ ಯೋಗ ನಡೆಯಲಿದೆ.

ಶ್ರೀಮತಿ ಲೀಲಾವತಿ ಶ್ರೀ ವೀರೇಶ್ ಹಾಗೂ ಕುಟುಂಬದವರು ಪೂಜಾ ಸೇವಾಕರ್ತರಾಗಿದ್ದಾರೆ ಎಂದು ದೇವಸ್ಥಾನ ಸಮಿತಿ ಅಧ್ಯಕ್ಷ ಆರ್.ಜಿ. ನಾಗೇಂದ್ರ ಪ್ರಕಾಶ್ ತಿಳಿಸಿದ್ದಾರೆ.

## ರಾಷ್ಟ್ರ ಮಟ್ಟದ ಕರಾಟೆ : ಜೈನ್ ವಿದ್ಯಾಲಯಕ್ಕೆ ಪ್ರಶಸ್ತಿ



ದಾವಣಗೆರೆ, ಆ. 11- ಗದಗ ಜಿಲ್ಲೆಯ ಲಕ್ಷ್ಮೇಶ್ವರದಲ್ಲಿ ನಡೆದ 4ನೇ ರಾಷ್ಟ್ರ ಮಟ್ಟದ ಆಹ್ವಾನಿತ ಕರಾಟೆ ಚಾಂಪಿಯನ್‌ಶಿಪ್ ನಲ್ಲಿ ನಗರದ ಜೈನ್ ವಿದ್ಯಾಲಯದ ವಿದ್ಯಾರ್ಥಿನಿ ಶ್ರೀಲಕ್ಷ್ಮಿ ಎನ್. 11 ವರ್ಷ ವಯೋಮಿತಿಯೊಳಗಿನ ಕುಮುಟೆ ವಿಭಾಗದಲ್ಲಿ ಪ್ರಥಮ ಸ್ಥಾನ ಮತ್ತು ಕಟಾ ವಿಭಾಗದಲ್ಲಿ ಪ್ರಥಮ ಸ್ಥಾನ ಪಡೆದಿರುತ್ತಾರೆ. ಪ್ರಜ್ವಲ್ ಜಿ.ವಿ. ಕುಮುಟೆ ವಿಭಾಗದಲ್ಲಿ ದ್ವಿತೀಯ ಮತ್ತು ಕಟಾ ವಿಭಾಗದಲ್ಲಿ ದ್ವಿತೀಯ ಸ್ಥಾನ ಪಡೆದಿದ್ದಾರೆ.

## ಭಾರತಕ್ಕೆ ಆರ್ಥಿಕ ಹಿಂಜರಿತದ ಭೀತಿ ಇಲ್ಲ

ನವದೆಹಲಿ, ಆ. 11 – ಭಾರತ ಈ ವರ್ಷ ವೇಗವಾಗಿ ಬೆಳವಣಿಗೆ ಕಾಣುವ ದೇಶಗಳಲ್ಲಿ ಒಂದಾಗಲಿದೆ. ಹಣದುಬ್ಬರ ಹೆಚ್ಚಾಗಿದ್ದು, ವ್ಯಾಪಾರಿ ಕೊರತೆ ಹೆಚ್ಚಾದರೂ ಸಹ ಆರ್ಥಿಕ ಹಿಂಜರಿಕೆಯ ಭೀತಿ ಇಲ್ಲ ಎಂದು ಕೇಂದ್ರ ಸರ್ಕಾರದ ಉನ್ನತ ಮೂಲಗಳು ತಿಳಿಸಿವೆ. ವ್ಯಾಪಾರಿ ಕೊರತೆ ಹೆಚ್ಚಾಗುತ್ತಿರುವ ಹಾಗೂ ವಿದೇಶಿ ಮೀಸಲು ಸಂಗ್ರಹ ಕಡಿಮೆಯಾಗುತ್ತಿರುವ ಕಾರಣದಿಂದ ಚಾಲ್ತಿ ಖಾತೆ ಕೊರತೆಯ ಮೇಲೆ ಪರಿಣಾಮವಾಗುತ್ತಿದೆ. ಇದು ಕಳವಳಕ್ಕೂ ಕಾರಣವಾಗಿದೆ. ಆದರೆ, ಪರಿಸ್ಥಿತಿ ಶೀಘ್ರದಲ್ಲೇ ಸ್ಥಿರವಾಗಲಿದೆ ಎಂದು ಮೂಲಗಳು ತಿಳಿಸಿವೆ. ಅಮೆರಿಕದ ಡಾಲರ್ ವಿರುದ್ಧ ಈ ವರ್ಷ ಭಾರತದ ರೂಪಾಯಿ ಮೌಲ್ಯ ಶೇ.7ರಷ್ಟು ಇಳಿಕೆಯಾಗಿರುವುದು ಕಳವಳಕ್ಕೆ ಕಾರಣವಾಗಬೇಕಿಲ್ಲ. ಪರಿಸ್ಥಿತಿ ನಿಭಾಯಿಸುವ ಬಗ್ಗೆ ಸರ್ಕಾರ ಹಾಗೂ ರಿಸರ್ವ್ ಬ್ಯಾಂಕ್‌ಗೆ ವಿಶ್ವಾಸ ಇದೆ ಎಂದೂ ಮೂಲಗಳು ಹೇಳಿವೆ.

## ಅಪಘಾತ ಸಾವಿನ ಪರಿಹಾರ ವಿವಾಹಿತ ಪುತ್ರಿಗೂ ಪಾಲು

ಬೆಂಗಳೂರು, ಆ. 11 - ಪೋಷಕರು ಅಪಘಾತದಲ್ಲಿ ಸಾವನ್ನಪ್ಪಿದಾಗ ವಿವಾಹಿತ ಹೆಣ್ಣು ಮಕ್ಕಳಿಗೂ ಪರಿಹಾರದಲ್ಲಿ ಪಾಲಿದೆ ಎಂದು ರಾಜ್ಯ ಹೈಕೋರ್ಟ್ ತಿಳಿಸಿದೆ. ವಿವಾಹಿತ ಪುತ್ರರೂ ಸಹ ಇಂತಹ ಪ್ರಕರಣಗಳಲ್ಲಿ ಪರಿಹಾರ ಪಡೆಯಲು ಅರ್ಹರಾಗಿದ್ದಾರೆ ಎಂದು ಸುಪ್ರೀಂ ಕೋರ್ಟ್ ತನ್ನ ತೀರ್ಪಿನಲ್ಲಿ ಹೇಳಿದೆ ಎಂದು ಹೈಕೋರ್ಟ್ ತಿಳಿಸಿದೆ.

ವಿವಾಹಿತ ಗಂಡು ಮಕ್ಕಳು ಹಾಗೂ ವಿವಾಹಿತ ಹೆಣ್ಣು ಮಕ್ಕಳ ನಡುವೆ ವ್ಯತ್ಯಾಸ ಮಾಡಲಾಗದು. ಹೀಗಾಗಿ ವಿವಾಹಿತ ಹೆಣ್ಣು ಮಕ್ಕಳಿಗೂ ಪರಿಹಾರ ನೀಡಬೇಕಿದೆ ಎಂದು ಹೈಕೋರ್ಟ್ ತಿಳಿಸಿದೆ.

ಏಪ್ರಿಲ್ 12, 2012ರಂದು ಹುಬ್ಬಳ್ಳಿಯಲ್ಲಿ 57 ವರ್ಷದ ರೇಣುಕ ನಿಧನರಾಗಿದ್ದರು. ಅವರ ಹೆಣ್ಣು ಮಕ್ಕಳಿಗೂ ಪರಿಹಾರ ನೀಡುವಂತೆ ಮೋಟಾರು ವಾಹನಗಳ ಅಪಘಾತ ಕ್ಲೇಮುಗಳ ಟ್ರಿಬ್ಯೂನಲ್ ತೀರ್ಪು ನೀಡಿತ್ತು. ಅದನ್ನು ಪ್ರಶ್ನಿಸಿ ವಿಮಾನ ಕಂಪನಿಯೊಂದು ಹೈಕೋರ್ಟ್ ಮೊರೆ ಹೋಗಿತ್ತು.

ಈ ಬಗ್ಗೆ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಹೆಚ್.ಪಿ. ಸಂದೇಶ್ ಅವರನ್ನು ಒಳಗೊಂಡ ಏಕಸದಸ್ಯ ಪೀಠ, ಮೂವರು ಹೆಣ್ಣು ಮಕ್ಕಳು ಹಾಗೂ ಓರ್ವ ಪುತ್ರನಿಗೆ ಪರಿಹಾರ ನೀಡುವಂತೆ ತಿಳಿಸಿದೆ. ಹೆಣ್ಣು ಮಕ್ಕಳು ಪಾಲಕರನ್ನು ಜೀವನಕ್ಕಾಗಿ ಆಧರಿಸಿಲ್ಲ. ಹೀಗಾಗಿ ಅವರಿಗೆ ಪರಿಹಾರ ನೀಡುವ ಅಗತ್ಯವಿಲ್ಲ ಎಂಬ ವಿಮಾ ಕಂಪನಿಯ ವಾದವನ್ನು ತಳ್ಳಿ ಹಾಕಿರುವ ಹೈಕೋರ್ಟ್, ಹಣಕಾಸಿಗಷ್ಟೇ ಪೋಷಕರನ್ನು ಆಧರಿಸಿರುವುದಿಲ್ಲ. ಮಾನಸಿಕವಾಗಿ ಹಾಗೂ ಭಾವನಾತ್ಮಕವಾಗಿಯೂ ಅವಲಂಬಿಸಿರುತ್ತಾರೆ. ಇವುಗಳನ್ನೆಲ್ಲ ಹಣದಿಂದ ಅಳೆಯಲಾಗದು ಎಂದು ಹೇಳಿದೆ.

## ನಗರದಲ್ಲಿ ಇಂದು-ನಾಳೆ ಶ್ರೀ ಗುರು ರಾಯರ ಆರಾಧನೆ



ಕೆ.ಬಿ. ಬಡಾವಣೆ ದೀಕ್ಷಿತ್ ರಸ್ತೆಯಲ್ಲಿರುವ ಶ್ರೀ ರಾಘವೇಂದ್ರ ಸ್ವಾಮಿಗಳ ಮಠದಲ್ಲಿ ನಡೆಯುತ್ತಿರುವ ಶ್ರೀ ಗುರು ರಾಯರ 351ನೇ ಆರಾಧನಾ ಮಹೋತ್ಸವದಲ್ಲಿ ಇಂದು ಮತ್ತು ನಾಳೆ ಪ್ರಾತಃಕಾಲ ಸುಪ್ರಭಾತ, ಪಂಚಾಮೃತ ಅಭಿಷೇಕ, ಅಷ್ಟೋತ್ತರ ಪಾರಾಯಣ, ಸಂಜೆ ಪ್ರಾಕಾರ ರಥೋತ್ಸವ ಅಷ್ಟಾವಧಾನ ಹಾಗೂ ವಿವಿಧ ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆಯಲಿವೆ. ದಿನಾಂಕ 14 ರ ಭಾನುವಾರ ಉತ್ತರಾರಾಧನೆ ಪ್ರಯುಕ್ತ ಬೆಳಿಗ್ಗೆ 10.30 ರಿಂದ ರಾಜಬೀದಿಗಳಲ್ಲಿ ವೇದ, ವಾದ್ಯ, ಭಜನೆ, ನಾದಸ್ವರ ಹಾಗು ಗುರುಸಾರ್ವಭೌಮರ ಮಹಾರಥೋತ್ಸವ ಕಾರ್ಯಕ್ರಮವು ನಡೆಯಲಿದೆ.

## ಮೂಲಭೂತ ಸೌಕರ್ಯಗಳಿಗೆ ಒತ್ತಾಯಿಸಿ ಗ್ರಾ.ಪಂ. ಸದಸ್ಯರಿಂದ ಪಾದಯಾತ್ರೆ

ರಾಣೇಬೆನ್ನೂರು, ಆ. 11- ತಾಲ್ಲೂಕಿನ ವೈಟಿ ಹೊನ್ನತ್ತಿ ಗ್ರಾಮ ಪಂಚಾಯ್ತಿ ವ್ಯಾಪ್ತಿಯ ನೂಕಾಪುರ, ಮಾದುರಾಯನಪುರ, ಹುಲ್ಲತ್ತಿ ಮತ್ತು ಹುಲ್ಲತ್ತಿ ತಾಂಡಾಗಳಿಗೆ ಮೂಲಭೂತ ಸೌಲಭ್ಯಗಳನ್ನು ಒದಗಿಸುವಂತೆ ಒತ್ತಾಯಿಸಿ ಗ್ರಾ. ಪಂ. ಸದಸ್ಯರು ದಿನಾಂಕ 15 ರಂದು ಪಾದಯಾತ್ರೆ ನಡೆಸಲಿದ್ದಾರೆ.

ಅಧ್ಯಕ್ಷ, ಉಪಾಧ್ಯಕ್ಷರು, ಸದಸ್ಯರು ಸೇರಿ ಗ್ರಾಮದ ಜನರೊಂದಿಗೆ ಅಂದು ಬೆಳಿಗ್ಗೆ ಗ್ರಾ.ಪಂ. ಕಚೇರಿಯಿಂದ ಹೊರಟು 20 ಕಿಮಿ ದೂರದ ಪಿಡಬ್ಲೂಡಿ ಕಚೇರಿಗೆ ತೆರಳಿ, ಗ್ರಾಮಗಳಲ್ಲಿ ಅಭಿವೃದ್ಧಿ ಕಾರ್ಯ ಕೈಗೊಳ್ಳುವಲ್ಲಿ ಉದಾಸೀನತೆ ಮಾಡುತ್ತಿರುವ ಇಲಾಖೆ ಎದುರು ಅಹೋರಾತ್ರಿ ಧರಣಿ ನಡೆಸಲಾಗುವುದು ಎಂದು ಅಧ್ಯಕ್ಷರಾದ ಕಲ್ಪನಾ ಮಲ್ಲಳ್ಳಿ ತಿಳಿಸಿದ್ದಾರೆ.

ಸರ್ಕಾರದ ವಿಶೇಷ ಅನುದಾನದ ಅನೇಕ ಕಾಮಗಾರಿಗಳು ಮಂಜೂರಾಗಿದ್ದರೂ ಸಹ ಅಧಿಕಾರಿಗಳು ಗಮನಹರಿಸುತ್ತಿಲ್ಲ. ನಮ್ಮ ಬೇಡಿಕೆಗಳು ಈಡೇರುವವರೆಗೂ ಧರಣಿ ನಡೆಸಲಾಗುವುದು ಎಂದು ಕಲ್ಪನಾ ಅವರು ವಿವರಿಸಿದ್ದಾರೆ.

## ಉಚಿತ ಕೊಡುಗೆ, ಸಾಮಾಜಿಕ ಅಭಿವೃದ್ಧಿ ಯೋಜನೆ ಬೇರೆ ಬೇರೆ

**ಸುಪ್ರೀಂ ಕೋರ್ಟ್**

ನವದೆಹಲಿ, ಆ. 11 - ಉಚಿತ ಕೊಡುಗೆಗಳು ಹಾಗೂ ಸಾಮಾಜಿಕ ಅಭಿವೃದ್ಧಿ ಯೋಜನೆಗಳು ಬೇರೆ ಬೇರೆ ಎಂದಿರುವ ಸುಪ್ರೀಂ ಕೋರ್ಟ್, ಸಾಮಾಜಿಕ ಅಭಿವೃದ್ಧಿ ಯೋಜನೆಗಳು ಹಾಗೂ ಆರ್ಥಿಕ ನಷ್ಟದ ನಡುವೆ ಸಮತೋಲನ ಇರಬೇಕಿದೆ ಎಂದಿದೆ.

ಉಚಿತ ಕೊಡುಗೆಗಳ ಭರವಸೆ ನೀಡುವ ಪಕ್ಷಗಳ ಮಾನ್ಯತೆ ರದ್ದುಗೊಳಿಸುವ ಮನವಿ ಪರಿಶೀಲಿಸುವ ಸಾಧ್ಯತೆಯನ್ನೂ ಸುಪ್ರೀಂ ಕೋರ್ಟ್ ತಳ್ಳಿ ಹಾಕಿದೆ.

ಉಚಿತ ಕೊಡುಗೆಗಳನ್ನು ಪ್ರಶ್ನಿಸಿ ದಾಖಲಾಗಿರುವ ಅರ್ಜಿಯ ವಿಚಾರಣೆ ನಡೆಸುತ್ತಿರುವ ಸುಪ್ರೀಂ ಕೋರ್ಟ್, ಚುನಾವಣೆ ವೇಳೆ ಉಚಿತ ಕೊಡುಗೆ ನೀಡುವುದಾಗಿ ಭರವಸೆಗಳನ್ನು ನೀಡುವ ರಾಜಕೀಯ ಪಕ್ಷಗಳ ಮಾನ್ಯತೆ ರದ್ದುಗೊಳಿಸುವ ವಿಷಯ ಪ್ರಜಾಪ್ರಭುತ್ವಕ್ಕೆ ವಿರುದ್ಧವಾದದ್ದು ಎಂದು ಹೇಳಿದೆ.

ನಾವು ರಾಜಕೀಯ ಪಕ್ಷಗಳ ಮಾನ್ಯತೆ ರದ್ದು ಮಾಡುವಂತಹ ವಿಷಯಗಳಿಗೆ ಕಾಲಿಡಲು ಬಯಸುವುದಿಲ್ಲ. ನಮ್ಮದು ಪ್ರಜಾಪ್ರಭುತ್ವ ವ್ಯವಸ್ಥೆ ಎಂದು ಮುಖ್ಯ ನ್ಯಾಯಮೂರ್ತಿ ಎನ್. ವಿ. ರಮಣ ಹಾಗೂ ನ್ಯಾಯಮೂರ್ತಿ ಕೃಷ್ಣ ಮುರಾರಿ ಅವರನ್ನು ಒಳಗೊಂಡ ಪೀಠ ಹೇಳಿದೆ.

ಚುನಾವಣೆ ವೇಳೆ ಅತಾರ್ಕಿಕವಾಗಿ ಉಚಿತ ಕೊಡುಗೆ ನೀಡುವುದಾಗಿ ಹೇಳುವುದು ಗಂಭೀರ ವಿಷಯ. ಆದರೆ, ಈ ವಿಷಯದಲ್ಲಿ ಶಾಸಕಾಂಗದ ವಲಯಕ್ಕೆ ಕಾಲಿಡಲು ಬಯಸುವುದಿಲ್ಲ ಎಂದು ನ್ಯಾಯಮೂರ್ತಿ ರಮಣ ಹೇಳಿದ್ದಾರೆ.

ಉಚಿತ ಕೊಡುಗೆಗಳು ಹಾಗೂ ಸಾಮಾಜಿಕ ಅಭಿವೃದ್ಧಿ ಯೋಜನೆಗಳು ಬೇರೆ ಬೇರೆ. ಆರ್ಥಿಕವಾಗಿ ಹಣ ಕಳೆದುಕೊಳ್ಳುವುದು ಹಾಗೂ ಜನರ ಕಲ್ಯಾಣದ ನಡುವೆ ಸಮತೋಲನ ಬೇಕಿದೆ. ಈ ಬಗ್ಗೆ ಸಂಬಂಧಪಟ್ಟವರು ತಮ್ಮ ವಿಚಾರಗಳನ್ನು ತಿಳಿಸಬೇಕಿದೆ. ನನ್ನ ನಿವೃತ್ತಿಗೆ ಮುಂಚೆ ವಿಚಾರಗಳನ್ನು ಸಲ್ಲಿಸಿ ಎಂದು ಮುಖ್ಯ ನ್ಯಾಯಮೂರ್ತಿ ರಮಣ ಹೇಳಿದ್ದಾರೆ. ನ್ಯಾಯಮೂರ್ತಿ ರಮಣ ಅವರು ಆಗಸ್ಟ್ 26 ರಂದು ನಿವೃತ್ತರಾಗಲಿದ್ದಾರೆ.

## ನುಗ್ಗೆ ಬೆಳೆಗೆ ಸಹಾಯ ಧನ ಸೌಲಭ್ಯ

ದಾವಣಗೆರೆ, ಆ. 11 - ಸಮಗ್ರ ತೋಟಗಾರಿಕೆ ಅಭಿವೃದ್ಧಿ ಯೋಜನೆಯಡಿ 2022-23ನೇ ಸಾಲಿನ ನುಗ್ಗೆ ಬೆಳೆ (ಶುದ್ಧ ಬೆಳೆ) ಪ್ರದೇಶ ವಿಸ್ತರಣೆಯ ಸಹಾಯಧನ ಸೌಲಭ್ಯವಿದ್ದು, ದಾವಣಗೆರೆ ತಾಲ್ಲೂಕಿನ ರೈತರಿಗೆ ಸಹಾಯಧನ ಪಡೆಯಲು ಅವಕಾಶವಿದೆ. ಆದ್ದರಿಂದ ತಾಲ್ಲೂಕಿನ ಎಲ್ಲಾ ರೈತ ಬಾಂಧವರು ಈ ಕೂಡಲೇ ತಮ್ಮ ವ್ಯಾಪ್ತಿಯ ರೈತ ಸಂಪರ್ಕ ಕೇಂದ್ರಕ್ಕೆ ಭೇಟಿ ನೀಡಬಹುದಾಗಿದೆ.

ಹೆಚ್ಚಿನ ಮಾಹಿತಿಗಾಗಿ ಪವನ್ ಕುಮಾರ್ ಹೆಚ್.ಎಸ್, ಕಸಬಾ ಹೋಬಳಿ, ಮೊ.ಸಂ:7022244152, ರವಿ ನಾಗಪ್ಪ ದಾಳೇರ, ಆನಗೋಡು ಯೋಬಳಿ, ಮೊ.ಸಂ: 7019819101, ಏಕಾಂತ್, ಮಾಯಕೊಂಡ-1 ಹೋಬಳಿ, ಮೊಬೈಲ್ ಸಂಖ್ಯೆ-7899445111, ಅರುಣ್‌ರಾಜ್ ಪಿ.ಎಲ್, ಮಾಯಕೊಂಡ-2 ಹೋಬಳಿ, ಮೊಬೈಲ್ ಸಂಖ್ಯೆ:- 9902866619 ಯನ್ನು ಸಂಪರ್ಕಿಸಬಹುದು ಎಂದು ದಾವಣಗೆರೆ ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರು ತಿಳಿಸಿದ್ದಾರೆ.

## ತಹಶೀಲ್ದಾರ್ ಕಚೇರಿಗೆ ಡಿಸಿ ಭೇಟಿ: ಪರಿಶೀಲನೆ



ದಾವಣಗೆರೆ, ಆ 11- ಜಿಲ್ಲಾಧಿಕಾರಿ ಶಿವಾನಂದ ಕಪಾಸಿ ಅವರು ಮಂಗಳವಾರ ನಗರದ ತಹಶೀಲ್ದಾರ್ ಕಚೇರಿಗೆ ಭೇಟಿ ನೀಡಿ ಪರಿಶೀಲಿಸಿ ಅಧಿಕಾರಿಗಳೊಂದಿಗೆ ಚರ್ಚಿಸಿದರು. ಇದೇ ಸಂದರ್ಭದಲ್ಲಿ ವಿವಿಧ ಕೆಲಸಗಳಿಗಾಗಿ ಆಗಮಿಸಿದ್ದ ಸಾರ್ವಜನಿಕರನ್ನು ಮಾತನಾಡಿಸಿದ ಜಿಲ್ಲಾಧಿಕಾರಿ, ಸಾರ್ವಜನಿಕರನ್ನು ಅನಗತ್ಯವಾಗಿ ಕಚೇರಿಗೆ ಅಲೆದಾಡಿಸದಂತೆ ಅಧಿಕಾರಿಗಳು ಹಾಗೂ ಸಿಬ್ಬಂದಿಗಳಿಗೆ ಸೂಚಿಸಿದರು. ಇತ್ತೀಚೆಗೆ ಸುರಿದ ಮಳೆಯಿಂದ ಹಾನಿಗೊಳಗಾದ ಮನೆ ಹಾಗೂ ಬೆಳೆ ಹಾನಿಯ ವರದಿಯನ್ನು ತಡ ಮಾಡದೇ ಸರ್ಕಾರಕ್ಕೆ ಸಲ್ಲಿಸುವಂತೆ ಸೂಚಿಸಿದರು. ಸಕಾಲ ಯೋಜನೆಯಡಿ ಬಂದಿರುವ ಅರ್ಜಿಗಳನ್ನು ಶೀಘ್ರವಾಗಿ ವಿಲೇವಾರಿ ಮಾಡುವಂತೆಯೂ ಸೂಚಿಸಿದರು.

ಈ ಸಂದರ್ಭದಲ್ಲಿ ಉಪ ವಿಭಾಗಾಧಿಕಾರಿ ಶ್ರೀಮತಿ ಎನ್. ದುರ್ಗಶ್ರೀ, ತಹಶೀಲ್ದಾರ್ ಬಸವನಗೌಡ ಕೋಟೂರು, ಉಪ ತಹಶೀಲ್ದಾರ್ ನಾಗಲೀಂಗೇಶ್ವರ್, ಶಕೀಲ್ ಅಹ್ಮದ್ ಖಾನ್, ದೇವರಾಜ್ ಕೆ.ಆರ್ ಸೇರಿದಂತೆ ಕಂದಾಯ ನಿರೀಕ್ಷಕರು, ಸಿಬ್ಬಂದಿಗಳು ಇದ್ದರು.




## ಅಮೃತ ಮಹೋತ್ಸವ: ವಿಕಲಚೇತನರಿಂದ ಬೈಕ್ ರ್‍ಯಾಲಿ



ದಾವಣಗೆರೆ ಆ.11- ನಗರದ ಜಿಲ್ಲಾಡಳಿತದ ಆವರಣದಲ್ಲಿ 75ನೇ ಸ್ವಾತಂತ್ರ್ಯ ಅಮೃತ ಮಹೋತ್ಸವದ ಅಂಗವಾಗಿ ವಿಕಲಚೇತನರ ಹಾಗೂ ಹಿರಿಯ ನಾಗರಿಕರ ಸಬಲೀಕರಣ ಇಲಾಖೆಯ ವತಿಯಿಂದ ಇಂದು ಹಮ್ಮಿಕೊಂಡಿದ್ದ ವಿಕಲಚೇತನರ ಬೈಕ್ ರ್‍ಯಾಲಿಗೆ ಜಿಲ್ಲಾಧಿಕಾರಿ ಶಿವಾನಂದ ಕಪಾಸಿ ಚಾಲನೆ ನೀಡಿದರು. ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಉಪನಿರ್ದೇಶಕಿ ವಾಸಂತಿ ಉಪ್ಪಾರ, ವಿಕಲಚೇತನರ ಹಾಗೂ ಹಿರಿಯ ನಾಗರಿಕರ ಸಬಲೀಕರಣ ಇಲಾಖೆಯ ಕಲ್ಯಾಣಾಧಿಕಾರಿ ಕೆ.ಕೆ ಪ್ರಕಾಶ್, ಪೊಲೀಸ್ ಅಧಿಕಾರಿ ನಾಗರಾಜ ಸೇರಿದಂತೆ ಇತರರು ಹಾಜರಿದ್ದರು.




JANATHAVANI - Published, Owned and Printed by Vikas Shadaksharappa Mellekatte, at Jayadhara Offset Printers, # 605, 'Jayadhara' Hadadi Road, Davangere - 5, Published from # 605, 'Jayadhara' Hadadi Road, Davangere - 5. Editor Vikas Shadaksharappa Mellekatte